# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೧೪ ಸಂಪುಟ: ೩ ಸಂಚಿಕೆ ೮

ಸಂಪಾದಕ : ಡಿ.ಎಸ್.ನಾಗಭೂಷಣ

ಚಂದಾ : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೫/-



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಲೋಕಸಭಾ ಚುನಾವಣೆಗಳು ಬಹು ಸನಿಹಕ್ಕೇ ಬಂದಿವೆ. ಮುಂದಿನ ಐದು ವರ್ಷಗಳ ಕಾಲ ರಾಷ್ಟ್ರವನ್ನು ಮುನ್ನಡೆಸುವ ಚುಕ್ಕಾಣಿಯನ್ನು ಯಾರ ಕೈಗೆ ಕೊಡಬೇಕು ಎಂಬ ತೀರ್ಮಾನವನ್ನು ನಾವೆಲ್ಲ ಸೇರಿ ಮಾಡಬೇಕಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ನಮ್ಮನ್ನು ಆಳಿವೆ. ಆದರೆ ಅವೆರಡೂ ಒಂದೇ ನಾಣ್ಯದ ಎರಡು ಮುಖಗಳೆಂದು ಈಗ ಸಾಬೀತಾಗಿದೆ. ಎರಡೂ ಭಾರತದ ಬಡವ-ಶ್ರೀಮಂತರಿಬ್ಬರನ್ನೂ ದುರಾಸೆಯ ಬೆಂಕಿಗೆ ತಳ್ಳಿ ಮತ್ತೆ ಈ ದೇಶವನ್ನು ಜಾಗತೀಕರಣವೆಂಬ ಮಾಯಾ ಕುದುರೆ ಮೇಲೆ ಕುಳ್ಳರಿಸಿ ಪಶ್ಚಿಮದ ನವ ವಸಾಹತುಶಾಹಿಯ ಗುಲಾಮಗಿರಿಗೆ ತಳ್ಳಲು ಸಿದ್ಧವಾಗಿರುವ ಅವಿವೇಕಿ ಪಕ್ಷಗಳೇ ಆಗಿವೆ. ಒಂದು ವ್ಯತ್ಯಾಸವೆಂದರೆ ಒಂದು ಭ್ರಷ್ಟ ಪಕ್ಷವಾದರೆ, ಇನ್ನೊಂದು ದುಷ್ಟ ಪಕ್ಷವಾಗಿದೆ. ಮಿಕ್ಕತ್ತಣ, ಕಮ್ಯೂನಿಸ್ಟ್ ಪಕ್ಷಗಳ ಹೊರತಾಗಿ, ವ್ಯಕ್ತಿ ಅಥವಾ ಕುಟುಂಬ ಕೇಂದ್ರಿತ ಪಕ್ಷಗಳಿಂದ ಕೂಡಿದ ನಂಬಿಕೆಗೆ ಅರ್ಹವಲ್ಲದ ಅಸ್ಥಿರ ಗುಂಪು. ಹೀಗಾಗಿ ನಮ್ಮ ಆಯ್ಕೆ ಕಷ್ಟವಾಗಿದೆ. ಆಯ್ಕೆ ಇದ್ದರೆ ಇದೊಂದೆ: ಈ ಎಲ್ಲ ರಾಜಕೀಯ ಪಕ್ಷಗಳು ಪ್ರತಿನಿಧಿಸುವ ಜನದೂರವಾದ ರಾಜಕೀಯ ಸಂಸ್ಕೃತಿಗೆ ಪರ್ಯಾಯವಾದ ಒಂದು ರಾಜಕೀಯ ಸಂಸ್ಕೃತಿ ನಿರ್ಮಾಣದ ಸಾಧ್ಯತೆಗಳ ಕಡೆ ಕಣ್ಣು ಹಾಯಿಸುವುದು. ಹಾಗೇ ನೋಡಿದಾಗ ನಮಗೆ ದೂರದಲ್ಲಾದರೂ ಕಾಣುವುದು ಆಂ ಆದ್ಮಿ ಪಕ್ಷ.(ಆಪ್)

ಇಂದು ರಾಷ್ಟ್ರಾದ್ಯಂತ ರಾಜಕೀಯ ವಲಯಗಳಲ್ಲಿ ಅತ್ಯಂತ ಹೆಚ್ಚು ಚರ್ಚಿತವಾಗುತ್ತಿರುವ ವಿಷಯವೆಂದರೆ, ಈ ಆಂ ಆದ್ಮಿ ಪಕ್ಷದ ಭವಿಷ್ಯ. ನಿರ್ದಿಷ್ಟವಾಗಿ ಹೇಳುವುದಾದರೆ, ಅದರ ರಾಜಕೀಯ ಸಾಮರ್ಥ್ಯ ಮತ್ತು ಸಾಧ್ಯತೆಗಳು. ಏಕೆಂದರೆ ಅದೀಗ ದೆಹಲಿ ರಾಜ್ಯದಲ್ಲಿ ಅಧಿಕಾರದ ಪ್ರಯೋಗವನ್ನು, ಅದನ್ನು ಬೆಂಬಲಿಸಿದ್ದಾಗಿ ಹೇಳಿಕೊಳ್ಳುವ ಹಲವರ ಟೀಕೆಗಳ ಮಧ್ಯೆಯೇ ಅರ್ಧದಲ್ಲೇ ಕೈಬಿಟ್ಟು ರಾಷ್ಟ್ರ ರಾಜಕಾರಣದತ್ತ ತನ್ನ ಗಮನ ಹರಿಸಿದೆ. ಮೂರು ತಿಂಗಳ ಹಿಂದೆಯಷ್ಟೇ ದೆಹಲಿ ವಿಧಾನ ಸಭಾ ಚುನಾವಣೆಗಳಲ್ಲಿ ಎಲ್ಲ ರಾಜಕೀಯ ಪಂಡಿತರ ಮತ್ತು ಭವಿಷ್ಯಕಾರರನ್ನೂ ದಂಗು ಬಡಿಸಿ, ಬಹುಮತವನ್ನಲ್ಲದಿದ್ದರೂ ಅಪಾರ ಮತ್ತು ಅನಿರೀಕ್ಷಿತ ಪ್ರಮಾಣದಲ್ಲಿ ಜನಮನ್ನಣೆ ಗಳಿಸಿ ಜನಮನದಲ್ಲಿ ರಾಜಕಾರಣದ ಬಗ್ಗೆ ಹೊಸ ನಿರೀಕ್ಷೆಗಳನ್ನು ಹುಟ್ಟು ಹಾಕಿತ್ತು. ದೀರ್ಘಕಾಲಿಕ ಪರಿಣಾಮದಲ್ಲಿ ದೇಶದ ಸಮಗ್ರತೆಯನ್ನೇ ಜಖಂಗೊಳಿಸಬಲ್ಲುದಾಗಿದ್ದ ರಾಜಕಾರಣ ಕುರಿತೇ ಜನರಲ್ಲಿ ಬೆಳೆಯತೊಡಗಿದ್ದ ಸಿನಿಕತೆಯನ್ನು ಕರಗಿಸುವ ಆಸೆ ಹುಟ್ಟಿಸಿತ್ತು. ರಾಜಕಾರಣ ಕುರಿತ ಸಾಂಪ್ರದಾಯಿಕ ನಂಬಿಕೆಗಳನ್ನು ಬುಡಮೇಲುಗೊಳಿಸಿ ಜನರಾಜಕಾರಣದ ಭರವಸೆ ನೀಡಿತ್ತು.

ಆದರೆ ಈ ಪಕ್ಷ ದೆಹಲಿಯಲ್ಲಿ ೪೯ ದಿನಗಳ ಆಡಳಿತ ನಡೆಸಿ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಆ ಪಕ್ಷದ ಬಗ್ಗೆ ಆಶಾಭಾವನೆ ತಾಳಿದ್ದ ಜನಸಾಮಾನ್ಯರಲ್ಲಿ ಹಲವು ಪ್ರಶ್ನೆಗಳನ್ನೂ, ಅನುಮಾನಗಳನ್ನೂ ಹುಟ್ಟುಹಾಕಿದೆ. ರಾಜಕೀಯ ಅಧಿಕಾರವನ್ನು ಹುಡುಗಾಟದ ಮಟ್ಟಕ್ಕೆ ಇಳಿಸಿ ಆಂ ಆದ್ಮಿ ಪಕ್ಷವು ಈ ಬೇಜವಾಬ್ದಾರಿತನದಿಂದಾಗಿ ತನ್ನಲ್ಲಿ ಜನರಿಟ್ಟಿದ್ದ ಭರವಸೆಯನ್ನು ಭಂಗಗೊಳಿಸಿಕೊಂಡಿದೆ ಎಂಬ ಟೀಕೆ ಅವರ ಬೆಂಬಲಿಗರ ಮಧ್ಯದಿಂದಲೇ ಕೇಳಿಬರುತ್ತಿದೆ. ಮುಖ್ಯವಾಗಿ ಇಂದಿನ ರಾಜಕೀಯ ವಾತಾವರಣದಲ್ಲಿ ತನಗೆ ದೊರೆತಿದ್ದ ಅಪರೂಪದ ಅಧಿಕಾರದ ಅವಕಾಶವನ್ನು ಆದಷ್ಟೂ ಹೆಚ್ಚು ದಿನನಿತ್ಯದ ಜನರ ಸಮಸ್ಯೆಗಳನ್ನು ಪರಿಹರಿಸಲು ಬಳಸಿಕೊಳ್ಳುವ 'ಜಾಣ್ಮೆ' ತೋರದೆ, ತನ್ನೆಲ್ಲ ಭವಿಷ್ಯವನ್ನೂ ಬುಡಮಟ್ಟದ ರಾಜಕೀಯ ಪರಿವರ್ತನೆಯ ಅಸ್ತ್ರ ಎಂದು ಅದು ನಂಬಿರುವ 'ಜನ ಲೋಕಪಾಲ್ ಮಸೂದೆ' ಎಂಬ ಭ್ರಷ್ಟಾಚಾರ ನಿವಾರಣೆಯ ಅಸ್ತ್ರದ ಮೇಲೆ ಹೂಡುವ ರಾಜಕೀಯ ಅಪ್ರಬುದ್ಧತೆಯನ್ನು ಪ್ರದರ್ಶಿಸಿದೆ;ಅದನ್ನು ಕೂಡ ತನ್ನ ರಾಷ್ಟ್ರೀಯ ರಾಜಕಾರಣದ ಹಂಬಲನ್ನು ಪೋಷಿಸಿಕೊಳ್ಳಲು ಬಳಸಿಕೊಂಡಿದೆ ಎಂಬ ಅಭಿಪ್ರಾಯ ಅದರ ಬಿಂಬವನ್ನು ಮಸುಕುಗೊಳಿಸಿದೆ ಎಂಬುದಂತೂ ಸತ್ಯ.

ಆದರೆ ಅದೇ ವೇಳೆಯಲ್ಲಿ ಆಂ ಆದ್ಮಿ ಪಕ್ಷ ಎಲ್ಲ ರಾಜಕೀಯ ಪಕ್ಷಗಳಂತೆ ರಾಜಕೀಯ ಅಧಿಕಾರಕ್ಕೆಂದೇ, ಅದನ್ನೇ ಗುರಿಯಾಗಿಸಿಕೊಂಡು ರಚನೆಯಾದ ಪಕ್ಷವಲ್ಲ ಎಂಬುದೂ ಸತ್ಯವೇ. ರಾಜಕೀಯ ಅಧಿಕಾರ ಅದಕ್ಕೆ ಮಾರ್ಗ ಮಾತ್ರ. ಅದು ಪಕ್ಷವನ್ನು ಹಾದಿ ತಪ್ಪಿಸುವಂತಹ ಸಂದರ್ಭ ಸೃಷ್ಟಿಸಿದರೆ ಆಗ ಅದು ವರ್ಜ್ಯವೇ ಸರಿ. ಏಕೆಂದರೆ, ಅದು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಯಾವುದೇ ಸಣ್ಣ ರಾಜಿಯೂ ತನ್ನ ಅಸ್ತಿತ್ವದ ಅರ್ಥಪೂರ್ಣತೆಯನ್ನೂ, ನೈತಿಕತೆಯನ್ನೂ ಒಮ್ಮೆಗೇ ಬುಡಮೇಲುಗೊಳಿಸಬಲ್ಲುದು ಎಂಬ ಎಚ್ಚರದೊಂದಿಗೆ ಮತ್ತು ತಾನು ಮೂಲಭೂತ ಬದಲಾವಣೆಯ ದೀರ್ಘಕಾಲಿಕ ರಾಜಕಾರಣ ಮಾಡುವ ಉದ್ದೇಶದ ಮಹತ್ವಾಕಾಂಕ್ಷೆಯೊಂದಿಗೇ ಸ್ಥಾಪಿತವಾದ ಪಕ್ಷ. ಹಾಗಾಗಿ ಅದು ಹೇಗೋ ಅಧಿಕಾರಕ್ಕಂಟಿಕೊಂಡು ಸಮಯಕ್ಕೆ ತಕ್ಕ ರಾಜಕೀಯ ವರಸೆಗಳನ್ನು ಅಳವಡಿಸಿಕೊಂಡು ತನ್ನ ಆತ್ಮವನ್ನೇ ನಾಶಪಡಿಸಿಕೊಳ್ಳಲು ಅದು ಬಯಸಲಿಲ್ಲ. ಬದಲಿಗೆ, ತನ್ನ ಮೂಲ ಘೋಷಿತ ಉದ್ದೇಶವಾದ ರಾಷ್ಟ್ರದ ರಾಜಕಾರಣದ ಮೂಲ ಕೊಳಕನ್ನು ತೊಳೆಯಬಲ್ಲುದೆಂದು ತಾನು ನಂಬಿರುವ ಜನ ಲೋಕಪಾಲ್ ಮಸೂದೆ ಮತ್ತು ಅದರ ಮುಂದಿನ ಕ್ರಮವಾಗಿ ಜನರ ಹತ್ತಿರಕ್ಕೇ ನಿರ್ಧಾರಗಳ ಅಧಿಕಾರವನ್ನು ಒಯ್ಯುವ ಉದ್ದೇಶವುಳ್ಳ ಸ್ವರಾಜ್ ಮಸೂದೆಗಳನ್ನು ಸ್ಥಾಪಿತ ರಾಜಕೀಯ ಹಿತಾಸಕ್ತಿಗಳು ತಾಂತ್ರಿಕ ನೆಪಗಳನ್ನೊಡ್ಡಿ ತಡೆಹಿಡಿಯುವುದು ಖಚಿತವಾದಾಗ ಮುಖ್ಯಮಂತ್ರಿ ಕೇಜ್ರಿವಾಲ್ ರಾಜೀನಾಮೆ ನೀಡಿದರು. ಜನಲೋಕಪಾಲ ಮಸೂದೆಗೆ ಒಡ್ಡಿದ ತಡೆಯ ಹಿಂದೆ ಈ ದೇಶದ ರಾಜಕಾರಣವನ್ನು ತನ್ನ ಅಪಾರ ಹಣಬಲದಿಂದ ನಿಯಂತ್ರಸುತ್ತಿರುವ ಕಾರ್ಪೋರೇಟ್ ಲೋಕದ ಅತ್ಯುನ್ನತ ಪ್ರತಿನಿಧಿಯಾದ ಮುಖೇಶ್ ಅಂಬಾನಿಯ ವ್ಯವಹಾರಗಳ ವಿರುದ್ಧ ಕೇಜ್ರಿವಾಲ್ ದನಿ ಎತ್ತಿದ್ದರ ಪ್ರತಿಧ್ವನಿ ಅಡಗಿತ್ತು. ಅಲ್ಲದೆ, ಅಂಬಾನಿ ಮತ್ತು ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ನಡುವಣ 'ಕೊಡು-ಕೊಳು' ವ್ಯವಹಾರದ ಬಗೆಗೆ ದೆಹಲಿ ಮುಖ್ಯಮಂತ್ರಿಯಾಗಿ ಕೇಜ್ರಿವಾಲ್ ತಮಗಿದ್ದ ನ್ಯಾಯಾಂಗ ವ್ಯಾಪ್ತಿಯ ಅಧಿಕಾರವನ್ನು ಬಳಸಿ ತನಿಖೆ ಆದೇಶಿಸಿದೊಡನೆ ಎಚ್ಚೆತ್ತಕೊಂಡ ಕಾಂಗ್ರೆಸ್

ಮತ್ತು ಬಿಜೆಪಿಗಳು ಒಂದಾಗಿ ದೆಹಲಿ ಸರ್ಕಾರವನ್ನು ಉರುಳಿಸಿಯೇ ತೀರುವ ಸಂಕಲ್ಪ ಮಾಡಿರುವುದರ ಮಾಹಿತಿ ಪಕ್ಷದ ಅರಿವಿಗೆ ಬಂದುದೂ ಸರ್ಕಾರದ ರಾಜೀನಾಮೆಗೆ ಕಾರಣವಾಗಿತ್ತು. ಹಾಗಾಗಿ ಇದನ್ನು ಬೇಜವಾಬ್ದಾರಿ ನಡವಳಿಕೆ ಎಂದು ಕರೆಯಲಾಗದೇನೋ.

ಏಕೆಂದರೆ ತಾನು ಅಧಿಕಾರದಲ್ಲಿದ್ದ ೪೯ ದಿನಗಳಲ್ಲಿ ಆಂ ಆದ್ಮಿ ಪಕ್ಷದ ಸರ್ಕಾರ ಮಾಡಿದ ಕೆಲಸಗಳೇನೂ ಕಡಿಮೆಯಲ್ಲ. ತಾನು ಆಶ್ವಾಸನೆ ನೀಡಿದಂತೆ, ಒಂದು ನಿರ್ದಿಷ್ಟ ಪ್ರಮಾಣದ ಉಚಿತ ನೀರು ಹಂಚಿಕೆ ಮತ್ತು ವಿದ್ಯುತ್ ದರಗಳ ಕಡಿತ ಮಾಡಿದ್ದಲ್ಲದೆ, ವಿದ್ಯುತ್ ದರಗಳ ಅನುಚಿತ ಏರಿಕೆಗೆ ಕಾರಣವೆಂದು ನಂಬಲಾಗಿರುವ ಖಾಸಗಿ ವಿದ್ಯುತ್ ಕಂಪನಿಗಳ ಲೆಕ್ಕಗಳ ಪರಿಶೋಧನೆಗೆ ಆದೇಶ ನೀಡಿದ್ದು ಸಾಮಾನ್ಯ ಆಡಳಿತ ಕ್ರಮವೇನಲ್ಲ. ಈ ಕಂಪನಿಗಳ ಲೆಕ್ಕ ಪರಿಶೋಧನೆಯ ಬೇಡಿಕೆಯನ್ನು ಬಿಜೆಪಿ ಆಡಳಿತದ ದೆಹಲಿ ನಗರಸಭೆ ಮತ್ತು ಕಾಂಗ್ರೆಸ್ ಆಡಳಿತವಿದ್ದ ದೆಹಲಿ ರಾಜ್ಯ ಸರ್ಕಾರಗಳೆರಡೂ, ಒಂದಲ್ಲ ಒಂದು ನೆಪ ಹೇಳಿ ತಳ್ಳಿಹಾಕುತ್ತಲೇ ಬರುತ್ತಾ ಖಾಸಗಿ ಕಂಪನಿಗಳ ಹಿತಾಸಕ್ತಿಯನ್ನು ರಕ್ಷಿಸುತ್ತಲೇ ಬಂದಿದ್ದವು. ಇನ್ನು ದಕ್ಷ ಲಂಚ ನಿರೋಧಕ ದೂರು ವ್ಯವಸ್ಥೆಯನ್ನು ಕಲ್ಪಿಸಿ ದೆಹಲಿ ಸರ್ಕಾರಿ ಕಛೇರಿಗಳಲ್ಲಿ ಲಂಚದ ಹಾವಳಿಯನ್ನು ಗಣನೀಯವಾಗಿ ಕಡಿಮೆ ಮಾಡಿರುವ ಸಾಧನೆ ಸಣ್ಣದೇನಲ್ಲ. ಇದನ್ನು ಹಲವು ಮಾಧ್ಯಮ ಸಮೀಕ್ಷೆಗಳೇ ಸಾಬೀತುಪಡಿಸಿವೆ. ಹಾಗೇ ಸರ್ಕಾರಿ ಆಸ್ಪತ್ರೆಗಳಲ್ಲಿ ಸದಾ ಔಷಧಿಯ ಲಭ್ಯತೆಯನ್ನು ಖಚಿತಪಡಿಸಿರುವ, ದೀನ ದರಿದ್ರರಿಗೆ ರಾತ್ರಿಹೊತ್ತಿನ ಆಶ್ರಯದಾಣಗಳನ್ನು ನಿರ್ಮಿಸಿರುವ, ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ನಡೆಸಿದ ಸಮೀಕ್ಷೆ ಮತ್ತು ಸಿದ್ಧಪಡಿಸಿದ ಯೋಜನೆಗಳು ಜನರ ಗಮನ ಸೆಳೆದಿವೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪಕ್ಷ ಈ ದೇಶದಲ್ಲಿನ ಎಲ್ಲ ರೀತಿಯ ಅಸಮಾನತೆಗಳ ವಿರುದ್ಧ ಇತ್ತೀಚೆಗೆ ನಡೆಯುತ್ತಿರುವ ಎಲ್ಲ ಹೋರಾಟ ಮತ್ತು ಕಾರ್ಯಕ್ರಮಗಳು ಹತಾಶಮಯವಾಗಿ ವಿಫಲಗೊಳ್ಳಲು ಕಾರಣವಾಗಿರುವ ಚೇಲಾ ಬಂಡವಾಳಶಾಹಿಯ ಪ್ರತೀಕದಂತಿರುವ ಅಂಬಾನಿಯನ್ನು ಎದುರು ಹಾಕಿಕೊಂಡು ತನ್ನ ರಾಜಕಾರಣವನ್ನು ಕಟ್ಟಿಕೊಳ್ಳಲು ಹೊರಟಿರುವಲ್ಲಿ ತೋರಿರುವ ಹೊಸ ರಾಜಕಾರಣ ಕುರಿತ ಅದರ ತಿಳುವಳಿಕೆಯ ಕ್ರಮ ಮತ್ತು ಬದ್ಧತೆ ಅದನ್ನು ಕುರಿತ ಜನರ ನಂಬಿಕೆ ಇಷ್ಟು ಬೇಗ ಹುಸಿಯಾಗಲು ಬಿಡಲಾರದಂಥವು. ನಿಜ, ಆಪ್‌ನಿಂದ ಹೇಗೋ ಉಳಿದುಕೊಂಡು ಜನರಿಗೆ ಒಂದಿಷ್ಟು ತತ್ಕಾಲೀನ ಪರಿಹಾರ ಒದಗಿಸುವ ರಾಜಕಾರಣವನ್ನು ನಿರೀಕ್ಷಿಸಿದವರಿಗೆ ನಿರಾಶೆಯಾಗಿದೆ; ಅಂಥವರ ಬೆಂಬಲ ಕರಗಿದೆ. ಅದೇನೇ ಇರಲಿ ಮತ್ತು ಹೊರಗಿನವರು ಏನೇ ಹೇಳಲಿ, ದೆಹಲಿ ಜನ ಕಳೆದ ವಿಧಾನ ಸಭೆ ಚುನಾವಣೆಗಳಿಗಿಂತ ಹೆಚ್ಚಿನ ಬೆಂಬಲವನ್ನು ಆಪ್‌ಗೆ ನೀಡುವ ಸಾಧ್ಯತೆಗಳನ್ನು ಇತ್ತೀಚಿನ ಮಾಧ್ಯಮ ಸಮೀಕ್ಷೆಗಳು ಸೂಚಿಸುತ್ತಿವೆ.

ಹೌದು, ಹಿಂದಿರುಗಿ ನೋಡಿದಾಗ ಆಪ್ ಬಹುಮತವಿಲ್ಲದಿದ್ದರೂ ಸರ್ಕಾರ ರಚಿಸಲು ಮುಂದಾಗಿದ್ದು ತಪ್ಪೇನೋ ಎನಿಸುತ್ತದೆ. ಆದರೆ ಅದು ಈಗ ಹಿಂದಿರುಗಿ ನೋಡಿದಾಗ ಮಾತ್ರ ಅನಿಸುವ ಸಂಗತಿ. ಆಗ ಅದು ದೆಹಲಿಯ ಜನತೆಯ ಮೇಲೆ ಇನ್ನೊಂದು ಚುನಾವಣೆ ಹೇರಬಾರದೆಂಬ ಎಲ್ಲ ಪಕ್ಷಗಳ ಅಭಿಮತದ ಅಭಿವ್ಯಕ್ತಿ ಮಾತ್ರವಾಗಿತ್ತು. ಅದರ ಪರಿಣಾಮವಾಗಿ ಆಪ್‌ಗೆ ಆದ ಅನುಭವ ಒಳ್ಳೆಯದಕ್ಕೇ ಆಯಿತು ಎಂದು ಭಾವಿಸಬಹುದು. ಅನುಭವ ಅತ್ತ ಇರಲಿ, ರಾಜಕೀಯ ತರಬೇತಿಯಾಗಲಿ, ಶಿಕ್ಷಣವಾಗಲಿ ಇಲ್ಲದ ಕೇವಲ ಆರು ತಿಂಗಳ ಈ ಪಕ್ಷ ಕೆಲವೊಮ್ಮೆ ಆರಂಭಶೂರತ್ವದ ಅತಿ ಉತ್ಸಾಹದಲ್ಲಿ–ಉದಾ.ಗೆ ಸೋಮನಾಥ್ ಭಾರ್ತಿ ಪ್ರಕರಣದಲ್ಲಿ–ಎಳಸು ಎಳಸಾಗಿ ವರ್ತಿಸಿತು. ವಿದ್ಯುತ್ ದರ ಕಡಿಮೆ ಮಾಡಿದ ಆದೇಶದ ಪೂರ್ವಾನ್ವಯತೆಯನ್ನು

(೧೦ನೇ ಪುಟಕ್ಕೆ)

## ನಿಮ್ಮ ಮಾತು

**ಪ್ರಿ**ಯ ಸಂಪಾದಕರೇ,

ಫೆಬ್ರುವರಿ ಸಂಚಿಕೆಯ 'ಹೀಗೇ ಕೆಲವು ಬಿಡಿ ಟಿಪ್ಪಣಿಗಳು' ಅಂಕಣದಲ್ಲಿ ನಾ. ಡಿಸೋಜಾ, ಪುಂಡಲೀಕ ಹಾಲಂಬಿ, ಯು.ಆರ್. ಅನಂತಮೂರ್ತಿ ಮುಂತದವರನ್ನು ಗೇಲಿ ಮಾಡಲು ಬಳಸಿರುವ ಭಾಷೆ ನಮ್ಮ ಹಲವು ಸಂಜೆ ಪತ್ರಿಕೆಗಳ ಮಟ್ಟದ್ದು. ವೈಯುಕ್ತಿಕ ದ್ವೇಷ ಸಾಧನೆಗಾಗಿ ಪತ್ರಿಕೆಯನ್ನು ಬಳಸಿಕೊಳ್ಳುವುದು ಸಲ್ಲದು.

ನುಡಿಸಿರಿ ವಿವಾದಾಸ್ಪದವಾಗಿರುವುದು ಮೋಹನ ಆಳ್ವರಿಂದಲ್ಲ. ಅದರಲ್ಲಿ ವೀರೇಂದ್ರ ಹೆಗಡೆಯರು ವಹಿಸುತ್ತಿರುವ ಪಾತ್ರದಿಂದಾಗಿ. 'ಸಿರಿಗನ್ನಡ'ವನ್ನು ಹೊಗಳಿರುವ ನೀವು ಅದೇ ಸಂದರ್ಭದಲ್ಲಿ ಬಿಡುಗಡೆಯಾದ ಅಧ್ವಾನದ 'ಕರಾವಳಿ ಸಂಪುಟ'ವನ್ನು ನೋಡಿ ಇಲ್ಲಿ ಹಣ ಹೇಗೆ ಅಪವ್ಯಯವಾಗಿದೆ ಎಂಬುದನ್ನು ಗಮನಿಸಬಹುದಿತ್ತು.

**–ಶ್ರೀನಿವಾಸ ಕಾರ್ಕಳ**, ಮಂಗಳೂರು

ಕಳೆದ ಸಂಚಿಕೆ ನನಗೆ ಇಷ್ಟವಾಗಿದ್ದು ಎರಡು ಕಾರಣಗಳಿಗಾಗಿ: ಮೊದಲನೆಯದು, ಸಂಪಾದಕರ ಟಿಪ್ಪಣಿಗಳಲ್ಲಿ ನೀವು ಎತ್ತಿದ ಮೋದಿ ಈ ದೇಶದ ಪ್ರಧಾನ ಮಂತ್ರಿಗೆ ಅಗತ್ಯವೆನಿಸುವ ಕನಿಷ್ಠ ಮಟ್ಟದ ಶೈಕ್ಷಣಿಕ ಹಿನ್ನೆಲೆ ಹಾಗೂ ಬೌದ್ಧಿಕ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬ ಪ್ರಶ್ನೆಯಿಂದಾಗಿ. ನಿಜ, ಯಾರೊಬ್ಬರೂ ಇಂತಹದ್ದಕ್ಕೆ ತಲೆಕೆಡಿಸಿಕೊಳ್ಳುತ್ತಿಲ್ಲ,

ಎರಡನೆಯದು ಲಂಕೇಶರನ್ನು ನೆನಪು ಮಾಡುವ ಸಂಪಾದಕರ ಬಿಡಿ ಟಿಪ್ಪಣಿಗಳ ಒಳನೋಟಗಳಿಂದಾಗಿ. ನಮ್ಮ ಸಾಹಿತ್ಯ–ಸಂಸ್ಕೃತಿಗಳಿಗೆ ಸಂಬಂಧಿಸಿದ ವಿದ್ಯಮಾನಗಳು. ಯಾರನ್ನೂ ಯಾರೂ ಕೇಳದಷ್ಟು ಹಾಳಾಗಿಹೋಗಿದೆ–ಇಂತಹ ಸಂದರ್ಭದಲ್ಲಿ, ಸುಳ್ಳಲ್ಲೂ ಸತ್ಯವಿದೆ, ಸತ್ಯದಲ್ಲೂ ಸುಳ್ಳು ಇರುತ್ತದೆ ಎನ್ನುವುದನ್ನು ಯಾವುದೇ ಮುಲಾಜಿಲ್ಲದೆ ಬರೆದಿದ್ದೀರಿ. ಅನಂತಮೂರ್ತಿಯವರನ್ನು, ಸ್ವಲ್ಪ ಕಟುವೆನಿಸಿದರೂ, ಆತ್ಮವಿಮರ್ಶೆಗೆ ಹಚ್ಚಿದ್ದೀರಿ, ನುಡಿಸಿರಿ ಮತ್ತು ವಿರಾಸತ್‌ಗಳ ಬಗ್ಗೆ ಮರುಚರ್ಚೆಯ ಅಗತ್ಯವಿದೆ ಎನ್ನಿಸುತ್ತದೆ ನನಗೆ ನಿಮ್ಮ ಟಿಪ್ಪಣಿ ಓದಿದ ಮೇಲೆ. ಈ ಪತ್ರಿಕೆ ಸಾಮಾನ್ಯ ಜನರನ್ನೂ ತಲುಪಬೇಕು.

**–ಎಂ.ಎಸ್. ರುದ್ರೇಶ್ವರಸ್ವಾಮಿ**, ಬೆಂಗಳೂರು

ಫೆಬ್ರವರಿ ಸಂಚಿಕೆಯಲ್ಲಿ ಎರಡು ಲೇಖನಗಳು ವಿಶೇಷವಾಗಿ ನನ್ನ ಗಮನ ಸೆಳೆದವು. ಸಾಹಿತ್ಯ–ಸಂಸ್ಕೃತಿ–ಇತ್ಯಾದಿ ಶೀರ್ಷಿಕೆಯಡಿ ನೀವು ಬರೆದಿರುವ ಬಿಡಿ ಟಿಪ್ಪಣಿಗಳು ನೇರ ಮತ್ತು ನಿಷ್ಠುರತೆಯಿಂದ ಕೂಡಿವೆ. ಮತ್ತು ನೀವು ಗಮನಿಸಿರುವ ಅಂಶಗಳು ತುಂಬಾ ಸೂಕ್ಷ್ಮವಾದುವು. ಈ ರೀತಿಯ ಟಿಪ್ಪಣಿಗಳು ನಮ್ಮಂತಹ ಸಾಮಾನ್ಯ ಓದುಗರಷ್ಟೇ ಅಲ್ಲದೆ, ಸಾಹಿತ್ಯ ಸಂಸ್ಕೃತಿ ಸಮಾರಂಭಗಳ ಆಯೋಜಕರೂ, ಭಾಷಣಕಾರರೂ ಹೊಸ ದೃಷ್ಟಿಯಿಂದ ಚಿಂತಿಸುವಂತೆ ಮಾಡಿವೆ.

ನಿತ್ಯಾನಂದ ಬಿ. ಶೆಟ್ಟಿಯವರ 'ನಾನೇಕೆ ಆರೆಸ್ಸೆಸ್ ಬಿಟ್ಟೆ' ಲೇಖನ ತುಂಬಾ ಮಾರ್ಮಿಕವಾಗಿದೆ. ಈ ಲೇಖನವನ್ನು ಓದಿಯಾದರೂ ಇತರ ಸ್ವಯಂ ಸೇವಕರು ಇನ್ನಾದರೂ ತಮ್ಮ ಸ್ವಂತಿಕೆಯಿಂದ ಆಲೋಚಿಸುವಂತಾಗಬಹುದು. ಏಕೆಂದರೆ ಆರೆಸ್ಸೆಸ್‌ನ ಬಹು ದೊಡ್ಡ ದೋಷವೆಂದರೆ, ಇನ್ನೂ ಪ್ರಪಂಚವನ್ನು ಕುತೂಹಲದಿಂದ ನೋಡುವ ಹದಿಹರೆಯದ ಹುಡುಗರನ್ನು ಶಿಸ್ತು, ಕ್ರೀಡೆ ಎಂಬ ನೆಪದಲ್ಲಿ ಆಕರ್ಷಿಸಿ, ಹಿಂದುತ್ವದ ಬಗ್ಗೆಯೇ ಯೋಚಿಸುವಂತೆ ಮಾಡಿ, ಮುಕ್ತವಾಗಿ, ಸ್ವತಂತ್ರವಾಗಿ, ವಿಸ್ತಾರವಾಗಿ ಆಲೋಚಿಸದಂತೆ ಮಾಡುವುದು.

**– ಬಾಲು,** ಬೆಂಗಳೂರು.

ಈಗಾಗಲೇ ಮುಗಿದು ಹೋಗಿರುವ ಮಡಿಕೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯನ್ನು ಸಾಮಾಜಿಕ ನ್ಯಾಯಕ್ಕೆ ಸಂದ ಜಯ ಎಂದು ಕರೆದ ಪರಿಷತ್ತಿನ ಪುಂಡಲೀಕ ಹಾಲಂಬಿಯವರ ಹೇಳಿಕೆಯ ಹಿಂದೆ ಸರಕಾರವನ್ನು ಮೆಚ್ಚಿಸುವ ಉದ್ದೇಶ ಇದ್ದಿರಬಹುದು. ಆದರೆ ನಾ. ಡಿಸೋಜ ತಮ್ಮ ಬದುಕು–ಬರಹಗಳೆರಡರಲ್ಲೂ ಘನತೆಯನ್ನು ಕಾಯ್ದುಕೊಂಡವರು.

**–ಎನ್.ಎಂ. ಕುಲಕರ್ಣಿ**, ಹೆಗ್ಗೋಡು

# ನಮ್ಮ ಸಮಾಜವಾದಿಗಳು | ಸರಳ ಜೀವನದ ಅಪ್ಪಟ ಹೋರಾಟಗಾರ ಬೇಲೂರೆ



'ಎನಗಿಂತ ಕಿರಿಯರಿಲ್ಲ...' ಎಂಬ ಬಸವಣ್ಣನವರ ನುಡಿಯಂತೆ ಮಹಾ ನಾಯಕತ್ವದ ಗುಣ ಹೊಂದಿದ್ದರೂ ಸರಳವಾಗಿ ಬದುಕುವವರು, ಜನಸಾಮಾನ್ಯರಲ್ಲಿಯೆ ಬೆರೆತು ಶ್ರೀ ಸಾಮಾನ್ಯರ ಬದುಕ ಕಟ್ಟಿದವರು ಕಾಶಿನಾಥ ಬೇಲೂರೆ ಅವರು 'ಉದಾತ್ತ ವಿಚಾರ, ಸರಳ ಜೀವನ', ಎಂಬುದಕ್ಕೆ ವ್ಯಾಖ್ಯಾನ ಬರೆದು ಬದುಕಿರುವ ಇವರು ದೀನದಲಿತರ, ಬಡವರ ಏಳಿಗೆಯಲ್ಲಿ ರಾಷ್ಟ್ರದ ಏಳಿಗೆ ಅಡಗಿದೆ ಎಂದು ನಂಬಿದವರು. ಇಸ್ತ್ರಿ ಹಾಕದ ಬಿಳಿ ಬಟ್ಟೆ, ತಗಡಿನ ಮನೆ, ನಾಳೆಗಾಗಿ ಖಾಲಿ ಇರುವ ಅಡುಗೆ ಮನೆಯ ಪಾತ್ರೆಗಳು, ಸಮಾಜ ಸೇವೆಗಾಗಿ ಅಖಂಡ ಬ್ರಹ್ಮಚರ್ಯ ಇವು ಇವರ ಸಮಾಜವಾದ ನಿಲುವಿನ ಆಸ್ತಿಗಳು. ಆಧುನಿಕತೆಯ ರಾಜಕೀಯ ಸೋಗಲಾಡಿತನಗಳ ಮಧ್ಯ ಅಪರೂಪದ ಪ್ರಾಮಾಣಿಕ ರಾಜಕಾರಣಿ ಇವರು.

ಮೂಲತಃ ಬೀದರ ಜಿಲ್ಲೆಯ ಔರಾದ ತಾಲೂಕಿನ ಮದನೂರ ಗ್ರಾಮದವರು. ಆರ್ಥಿಕವಾಗಿ ಬಡವರಾದರೂ ಹೃದಯ ಶ್ರೀಮಂತಿಕೆ ಹೊಂದಿರುವ ಬೇಲೂರೆ ಮನೆತನದ ಸಂಗಮ್ಮ ಗುರಪ್ಪ ದಂಪತಿಗಳಿಗೆ ೧೯೩೧ರಲ್ಲಿ ಜನಿಸಿದ ಇವರ ಬಾಲ್ಯದ ಶಿಕ್ಷಣ ಸಮೀಪದ ಉದ್ಗೀರನಲ್ಲಾದರೆ, ಕಾಲೇಜು ಶಿಕ್ಷಣ ಹೈದ್ರಾಬಾದಿನ ಚಾದರಘಾಟ ಕಾಲೇಜಿನಲ್ಲಿ ನೆರವೇರಿತು.

ವಿದ್ಯಾರ್ಥಿ ಜೀವನದಲ್ಲೆ ಬಂಡಾಯ ಮನೋಭಾವ ಹೊಂದಿದ್ದ ಬೇಲೂರೆ ಉದ್ಗೀರದ ಆರ್ಯ ಸಮಾಜದಿಂದ ಪ್ರಭಾವಿತರಾಗಿ ಓದು ಮುಗಿದೊಡನೆ ದೇಶ ಕಟ್ಟಲು ನಿಂತವರು. ಮನೆಗೆದ್ದು ಮಾರು ಗೆದಿ ಎಂಬಂತೆ ತಮ್ಮ ಗ್ರಾಮದ ಮೂಲಕವೇ ಸಾಮಾಜಿಕ ಶುದ್ಧೀಕರಣಕ್ಕೆ ನಿಂತವರು. ಅಸ್ಪೃಶ್ಯತೆ ವಿರೋಧಿ ಅಂದೋಲನ ನಡೆಸಿ, ಸ್ವಗ್ರಾಮಸ್ಥರಿಂದಲೆ ಪೆಟ್ಟುತಿಂದು ಸಾಮಾಜಿಕ ಬಹಿಷ್ಕಾರಕ್ಕೂ ಒಳಗಾದರು. ಆದರೆ ಧೃತಿಗೆಡದೆ, ಹರಿಜನರಿಗೆ ಬೆಂಬಲ ಕೊಟ್ಟರು. ಮೇಲ್ವರ್ಗದವರು ದಲಿತರನ್ನು ಕರೆಯದೇ ಇದ್ದಾಗ 'ಫೈಬರ್ ಸೊಸಾಯಿಟಿ'ಯನ್ನು ಆರಂಭಿಸಿದರು. ಅದರ ಫಲವಾಗಿ ಅಂಥ ಸಣ್ಣ ಹಳ್ಳಿಯಲ್ಲಿ ನೂರಾರು ಕುಟುಂಬಗಳು ಸ್ವಾವಲಂಬಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಆಶ್ಚರ್ಯವೆಂದರೆ, ಜಾಗತೀಕರಣದ ಕಬಂಧ ಬಾಹುಗಳ ಮಧ್ಯೆ, ಈ ಚಿಕ್ಕ ಹಳ್ಳಿಯಲ್ಲಿ ಉತ್ಪನ್ನವಾದ ವಸ್ತುಗಳು, ಹುಬ್ಬಳಿ, ಲಾತೂರ ಮತ್ತು ಉದ್ಗೀರ ಸೇರಿದಂತೆ ಅನೇಕ ಕಡೆ ರಫ್ತಾಗುತ್ತ ಜಾಗತಿಕ ಮಾರುಕಟ್ಟೆಗೆ ಎದುರಾಗಿ ನಿಂತಿರುವದು ನೆಲನಿಷ್ಠವಾದ ದೇಶಿಯತೆ ಹಾಗೂ ಶ್ರಮ ಸಂಸ್ಕೃತಿಯ ಜೀವಂತಿಕೆಯ ಹಿಂದೆ ಬೇಲೂರೆಯವರ ಕಕ್ಕುಲತೆಯಿದೆ.

ಸಮಾಜ ಸೇವೆಗೆ ತೊಡಗಿಸಿಕೊಂಡ ಕಾಶಿನಾಥ ಬೇಲೂರೆ ಅವರಿಗೆ, ಜನಸಾಮಾನ್ಯರ ಮಧ್ಯ ಬೆರೆತಾಗ, ತಳಮಟ್ಟದ ಜನರ ಸಮಸ್ಯೆಗಳು ಅರಿವಿಗೆ ಬಂದವು, ಆಗ ಗುಲಬರ್ಗಾದಿಂದ ಎಲ್.ಎಲ್.ಬಿ. ಪದವಿ ಪಡೆದು ವಕೀಲರಾದರು. ಆದರೆ ವಕೀಲಿ ವೃತ್ತಿ ಹಣಗಳಿಸಿ ವ್ಯಾಪಾರೀಕರಣ ಮಾಡಲು ಅಲ್ಲ. ಬದಲಾಗಿ, ಸಂಕಟದಲ್ಲಿರುವ ದೀನ ದಲಿತರ, ಬಡವರ ನೆರವಿಗೆ ನಿಂತು ಸಂಬಂಧಗಳನ್ನು ಮಾನವೀಕರಣಗೊಳಿಸಲು, ಜನಸಾಮಾನ್ಯರಿಗೆ ನೇರವಾಗುವುದೇ ಬದುಕಿನ ಪರಮ ಸತ್ಯವೆಂದು ನಂಬಿ ನಡೆಯಲ್ಲಿ ನುಡಿಯ ಪೂರೈಸಿದವರು.

ಬೀದರ ತೀರ ಹಿಂದುಳಿದ ಪ್ರದೇಶವಾಗಿದ್ದು, ಶೈಕ್ಷಣಿಕ ಅಭಿವೃದ್ಧಿಯಿಂದ ಮಾತ್ರ ಜನಸಾಮಾನ್ಯರ ಏಳಿಗೆ ಎಂದರಿತು, 'ರಾಷ್ಟ್ರೀಯ ರಚನಾತ್ಮಕ ಸೂಸಾಯಿಟಿ' ಎಂಬ ಹೆಸರಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿ ಬೀದರ ಸೇರಿದಂತೆ ಜಿಲ್ಲೆಯಲ್ಲಿ ಅನೇಕ ಕಡೆ ಶಾಲಾ ಕಾಲೇಜುಗಳನ್ನು ತೆರೆದರು.

ಮೂಲತಃ ರೈತ ಕುಟುಂಬದಿಂದ ಬಂದ ಇವರು ರೈತರ, ಕಾರ್ಮಿಕರ ಬಗ್ಗೆ ಅಪಾರ ಕಾಳಜಿ ಹೊಂದಿದವರು. ಕಬ್ಬಿನ ಬೆಲೆ ಕಡಿಮೆಯಾದಾಗ ಆ ಕಾಲಕ್ಕೆ ಬೆಂಬಲ ಬೆಲೆಗಾಗಿ ಹೋರಾಡಿ, ಬೃಹತ್ ರೈತರ್‍ಯಾಲಿ ನಡೆಸಿ ಯಶ ಕಂಡರು, ಬೀದರ ಬಸ್‌ಡಿಪೋ ಸ್ಥಾಪನೆ ಹಿಂದೆಯೂ ಇವರ ಪರಿಶ್ರಮವಿದೆ. ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಾಗ 'ಬೀದರ ಸಮಗ್ರ ಅಭಿವೃದ್ಧಿ'ಗಾಗಿ ಈಶ್ವರಪ್ಪ ಚಾಕೋತೆ ಮೊದಲಾದವರನ್ನು ಕರೆದುಕೊಂಡು ಬೀದರದಿಂದ ಬೆಂಗಳೂರುವರೆಗೆ ಪಾದಯಾತ್ರೆ ಕೈಗೊಂಡರು. ಹೀಗೆ ಯಾವುದೇ ಜನಪರ ಕಾಳಜಿ, ಕೆಲಸಗಳಿದ್ದಾಗ ಕಾಶೀನಾಥ ಬೇಲೂರೆಯವರ ಹೋರಾಟ ಇದ್ದೆ ಇರುತ್ತಿತ್ತು, 'ಶೋಷಣೆ ರಹಿತ ಸಮಾಜ, ಭ್ರಷ್ಟಾಚಾರ ಮುಕ್ತದೇಶ' ರಚನೆಯಾಗಬೇಕೆಂಬ ಸದಾಶಯದಿಂದ ಹೋರಾಟ ನಡೆಸಿದವರು.

ಧರ್ಮಸಮ್ಮತ ರಾಜಕೀಯ ಇರಬೇಕು ಎಂಬ ಗಾಂಧೀಜಿ ನಿಲುವು ಸಮರ್ಥಿಸುವ ಬೇಲೂರೆಯವರು, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಲೋಹಿಯಾ ಅವರಿಂದ ಪ್ರಭಾವಿತರಾಗಿದ್ದು, ಬಿ.ಎಂ. ಬಿಜಾಪುರೆ ಅವರ ಪ್ರೀತಿಯ ಒತ್ತಾಯದಿಂದ ರಾಜಕೀಯ ಪ್ರವೇಶಮಾಡಿ, ಕಲುಷಿತ ರಾಜಕಾರಣ ತಿಳಿಗೊಳಿಸಬೇಕೆಂದು ಯೋಚಿಸಿದವರು. ೧೯೭೫ರಲ್ಲಿ ಸರ್ಕಾರದ ತುರ್ತು ಪರಿಸ್ಥಿತಿ ಘೋಷಿಸಿ, ಜಯಪ್ರಕಾಶರನ್ನು ಬಂಧಿಸಿದಾಗ, ಅದರ ವಿರುದ್ಧ ಪ್ರತಿಭಟಿಸಿ ೧೯ ತಿಂಗಳ ಕಾಲ ಬೆಂಗಳೂರು 'ಜೈಲುವಾಸ' ಅನುಭವಿಸಿದರು. ಆ ಜೈಲಿನಲ್ಲಿಯೆ ದೇಶದ ಪ್ರಮುಖ ನಾಯಕರಾದ ಎಲ್.ಕೆ. ಅಡ್ವಾಣಿ, ಶಾಂತಿಭೂಷಣ, ಮಧು ದಂಡವತೆ, ಜೆ.ಎಚ್. ಪಟೇಲ್ ಮೊದಲಾದವರ ಸಂಪರ್ಕದಿಂದ ಅವರಲ್ಲಿನ ಜನಪರ ಕಾಳಜಿ ಮತ್ತಷ್ಟು ಹರಳುಗಟ್ಟಿತ್ತು.

ಬಹುಭಾಷೆ ಪ್ರವೀಣರಾದ ಅವರದ್ದು ಮಾತೃ ಭಾಷೆ ಕನ್ನಡವಾಗಿದ್ದು ಉರ್ದು, ಮರಾಠಿ, ಹಿಂದಿ, ಇಂಗ್ಲೀಷ್, ಭಾಷೆಗಳಲ್ಲಿ ಸರಾಗವಾಗಿ ಮಾತಾಡುತ್ತಾರೆ. ಸೃಜನಶೀಲ ಮನಸ್ಸಿನ ಬೇಲೂರೆ ಅವರು ಜೈಲಿನಲ್ಲಿದ್ದಾಗ, 'ರಾಜಕೀಯ ವಿಪ್ಲವತಾ' ಎಂಬ ಕೃತಿ ಬರೆದರು, ವಿದ್ಯಾರ್ಥಿ ದೆಸೆಯಲ್ಲಿಯೇ ಮಾರ್ಕ್ಸ್ ಲೋಹಿಯಾ, ಗಾಂಧಿ, ಟಾಲ್‌ಸ್ಟಾಯ್, ರಸ್ಕಿನ್, ಲೆನಿನ್, ಮೊದಲಾದ ಸಮಾಜವಾದಿ ಬರಹಗಾರರ ಕೃತಿಗಳನ್ನು ಅಧ್ಯಯನ ಮಾಡಿದ್ದರಿಂದ ಅವರೊಳಗೊಬ್ಬ ಸಮಾಜವಾದಿ ಬೆಳೆದ.

ರಾಜಕಾರಣಿಗಳಲ್ಲಿ ಸದಭಿರುಚಿ ಮೂಡಬೇಕು, ಅಧಿಕಾರ ಕೇಂದ್ರಿತ ರಾಜಕೀಯದಿಂದ ದೇಶಕ್ಕೆ ಯಾವತ್ತು ಒಳಿತಾಗದು. ಆದ್ದರಿಂದ ಈಗಿರುವ ಚುನಾವಣೆ ಕ್ರಮ ಕೂಡ ಬದಲಾಗಬೇಕೆಂದು ವಾದಿಸುವ ಅವರು 'ಲೋಕ ಸೇವಾ ಸಂಘ'ದಿಂದ ರಾಜಕೀಯ ಪ್ರವೇಶಮಾಡಿ ೧೯೭೮ರಲ್ಲಿ ಜನತಾ ಪಕ್ಷದ ಪ್ರತಿನಿಧಿಯಾಗಿ ವಿಧಾನಸಭೆಗೆ ಸ್ಪರ್ಧಿಸಿ ಸೋತರು, "ಅವರ ಈ ಸೋಲು ಜನತೆಯ ಸೋಲು, ಜನಪರ ಕಾಳಜಿಯ ಒಬ್ಬ ನಿಷ್ಠಾವಂತ ಸಮಾಜವಾದಿಯನ್ನು ಗೆಲ್ಲಿಸಲು ನಮ್ಮ ಜನ ಅಸಮರ್ಥರಾದದ್ದು – ನಮ್ಮ ಸಾಂಸ್ಕೃತಿಕ ದುರಂತ"ವೆಂದು ಹಿರಿಯ ಸಾಹಿತಿ ಪಂಚಾಕ್ಷರಿ ಪುಣ್ಯಶೆಟ್ಟಿ ವಿಷಾದದಿಂದ ನುಡಿಯುತ್ತಾರೆ.

ಬೇಲೂರೆಯವರಿಗೆ ಪ್ರಜಾಪ್ರಭುತ್ವದಲ್ಲಿ ಬಲವಾದ ನಂಬಿಕೆ ಇದ್ದರೂ, ಅಧಿಕಾರ ವಿಕೇಂದ್ರೀಕರಣ ತಳಮಟ್ಟದಲ್ಲಿ ಇನ್ನೂ ಪ್ರಬಲವಾಗಬೇಕು. ದೇಶದ ಆಯ-ವ್ಯಯದ ಮೇಲೆ ವಿಶೇಷವಾಗಿ ಒಟ್ಟು ಖರ್ಚು ವೆಚ್ಚ-ಸರಕಾರದ ಹಿಡಿತದಲ್ಲಿರಬೇಕು. ಅದೇ ನಿಜವಾದ ಕಲ್ಯಾಣ ರಾಜ್ಯವೆಂದು ಸಾರುವ ಮೂಲಕ ಜಾಗತೀಕರಣದ ಹಾಗೆ ಚಳವಳಿಗಳೂ ಕೂಡ ನಿರಂತರವಾಗಿರಬೇಕು, ಅದರಿಂದ ಜನಜಾಗೃತಿ ಉಂಟಾಗಿ ರಾಷ್ಟ್ರದ ಪ್ರಗತಿಗೆ ಪೂರಕವಾಗುತ್ತದೆ. ಜಾತ್ಯತೀತ ನಿಲುವು ಸಂವಿಧಾನದಲ್ಲಿದ್ದರೆ ಸಾಲದು, ಜನಮಾನಸದ ಮೂಲ ಕಾಳಜಿಯ ಕೇಂದ್ರವಾಗಬೇಕೆಂಬ ಹಂಬಲ ಹೊಂದಿರುವ ಕಾಶಿನಾಥ ಬೇಲೂರೆ ಅವರದ್ದು, ಬುದ್ಧ-ಬಸವ-ಗಾಂಧಿ ಪ್ರೇರಿತ ಸಮತಾ ತತ್ವದ ತಳಹದಿಯ ಮೇಲೆ ಜನ ನಡೆಯಬೇಕೆಂಬ ಆಶಯ ಹೊಂದಿರುವರು.

ದಟ್ಟ ಜೀವನಾನುಭವ ಹೊಂದಿರುವ ಅವರು ದೈಹಿಕವಾಗಿ ಬಳಲಿದ್ದಾರೆ, ಅಶಕ್ತರಾದುದರಿಂದ ಆರ್.ಆರ್.ಕೆ. ಸಂಸ್ಥೆಯವರ ಆರೈಕೆಯಲ್ಲಿ ಬದುಕು ನೂಕುತ್ತಿದ್ದಾರೆ. ಸಂಗಮೇಶ್ವರ ಪಾಟೀಲ್ ಎಂಬ ವಿದ್ಯಾರ್ಥಿ, ಉಮಾಕಾಂತ ಸ್ವಾಮಿ ಎಂಬ ನೌಕರರು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದ ವ್ಯಕ್ತಿಯ ಸುತ್ತಲಿನ ಸಮಾಜ ಯಾವತ್ತೂ ಕುರುಡು ಎಂಬುದು ಅವರ ಮಾತಿನಲ್ಲೂ ಸತ್ಯವಾಗಿದೆ. ಆದರೂ ಔರಾದ ತಾಲೂಕು ಆಡಳಿತದಿಂದ ಅವರಿಗೆ 'ಅಮರವಾಡಿ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಹೀಗೆ ಸತ್ಯಶುದ್ಧ ಹಾಗೂ ಸಾತ್ವಿಕ ಜೀವನ ನಡೆಸಿರುವ ಅವರು ಇರುವಷ್ಟು ಕಾಲ ಆಯುರಾರೋಗ್ಯದಿಂದ ಜೀವಿಸಲಿ ಎಂದು ಆಶಿಸುವೆ.

**-ಡಾ. ಬಸವರಾಜ ಬಲ್ಲೂರ**

# ಆಧುನಿಕ ಕೃಷಿ ವಿಜ್ಞಾನ ಒಂದು ಸುಲಿಗೆಕೋರ ದಂಧೆ: ಡಾ. ನಾರಾಯಣ ರೆಡ್ಡಿ



**ಆ**ಧುನಿಕ ಕೃಷಿ ವಿಜ್ಞಾನ ಎಂಬುದು ಕೇವಲ ಸುಲಿಗೆಕೋರ ದಂಧೆಯಾಗಿದ್ದು, ಹೆಚ್ಚು ಇಳುವರಿಯ ಭ್ರಮೆಯಲ್ಲಿ ಇದಕ್ಕೆ ಮರುಳಾದ ನಮ್ಮ ರೈತರು ಹಳ್ಳಿಯ ನೆಮ್ಮದಿಯ ಶ್ರಮ ಜೀವನದ ಸುಖವನ್ನು ಮರೆತು ಪೇಟೆಯ ಕ್ಷಣಿಕ ಆಕರ್ಷಣೆಗಳಿಗೆ ಸಿಕ್ಕಿ ಸಾಲದ ಸುಳಿಯಲ್ಲಿ ತೊಳಲಾಡುತ್ತಿದ್ದಾರೆ ಎಂದು ಭಾರತದ ಕೃಷಿಋಷಿ ಎಂದೇ ಹೆಸರಾದ ಹಿರಿಯ ಸಾವಯವ ಕೃಷಿತಜ್ಞ ಡಾ. ನಾರಾಯಣ ರೆಡ್ಡಿ ಹೇಳಿದ್ದಾರೆ. ಅವರು ಫೆಬ್ರುವರಿ ೧೦, ೧೧ ಹಾಗೂ ೧೨ರಂದು ಶ್ರೀರಂಗಪಟ್ಟಣದಲ್ಲಿ ಆಯೋಜಿಸಲಾಗಿದ್ದ ೨೦೧೮ರ ಸರ್ವೋದಯ ಸಮ್ಮೇಳನದಲ್ಲಿ ' ಶ್ರಮ ಸಂಸ್ಕೃತಿ-ಸರಳ ಜೀವನ' ವಿಷಯ ಕುರಿತ ಮೊದಲ ಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಹೀಗೆ ಸಾಲದ ಸುಳಿಗೆ ಸಿಕ್ಕಿರುವ ರೈತರು ಸಾಲ ಮನ್ನಾಕ್ಕಾಗಿ ಸರ್ಕಾರಗಳನ್ನು ಕಾಡಿ ಬೇಡುವ ಭಿಕ್ಷುಕರಾಗಿ ಪರಿರ್ತಿತರಾಗುತ್ತಾ ಕ್ರಮೇಣ ತಮ್ಮ ಭೂಮಿಗಳಿಂದ ಉಚ್ಚಾಟಿತರಾಗಿ ಅಂರ್ತಪಿಶಾಚಿಗಳಾಗುತ್ತಿದ್ದಾರೆ ಎಂದು ಅವರು ವಿಷಾದಿಸಿದರು. ದೊಡ್ಡಬಳ್ಳಾಪುರ ಬಳಿಯ ತಮ್ಮ ನಾಲ್ಕು ಎಕರೆ ಜಮೀನಿನಲ್ಲಿ ಯಾವುದೇ ಯಂತ್ರ ಅಥವಾ ರಸಾಯನಿಕ ಬಳಸದೆ ಕೇವಲ ಶ್ರಮ ಮತ್ತು ಪ್ರಾಕೃತಿಕ ಪ್ರಯೋಗಗಳ ಮೂಲಕ ಹೇಗೆ ಕೋಟ್ಯಾಂತರ ರೂಪಾಯಿಗಳ ಬೆಲೆಯ ಸಂಪತ್ತನ್ನು ಸೃಷ್ಟಿಸಲಾಗಿದೆ ಎಂಬುದನ್ನು ನೋಡಬನ್ನಿ ಎಂದು ರೈತರನ್ನು ಆಹ್ವಾನಿಸಿದ ಅವರು, ಡಾ. ಸ್ವಾಮಿನಾಥನ್‌ರಂತಹವರು ಕೃಷಿ ಪಂಡಿತರ ಹೆಸರಿನಲ್ಲಿ ಕೆಲಸ ಮಾಡುವ ಅಂತಾರಾಷ್ಟ್ರೀಯ ಕೃಷಿ ವ್ಯಾಪಾರಿ ಸಂಸ್ಥೆಗಳ ಏಜೆಂಟರೇ ಆಗಿದ್ದಾರೆ ಎಂದು ಕಿಡಿ ಕಾರಿದರು.

'ಇಂದಿನ ಮಹಿಳೆಯರ ಸಮಸ್ಯೆಗಳು ಮತ್ತು ಸಂದಿಗ್ಧತೆಗಳು' ಎಂಬ ವಿಷಯದ ಮೇಲಿನ ಎರಡನೇ ಗೋಷ್ಠಿಯಲ್ಲಿ ಮಾತನಾಡಿದ ಹಿರಿಯ ಕವಯತ್ರಿ ಸವಿತಾ ನಾಗಭೂಷಣ ಅವರು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರವೂ ಸೇರಿದಂತೆ ಮಹಿಳೆಯರ ಎಲ್ಲ ಸಮಸ್ಯೆಗಳ ಮೂಲದಲ್ಲಿ ಆತ್ಮ ವಿಶ್ವಾಸ ಮತ್ತು ಆತ್ಮಬಲದ ಕೊರತೆಗಳು ಕಾಣುತ್ತಿದ್ದು, ಮಹಿಳೆ ಇಂದು ತಾನು ಗಳಿಸಿಕೊಂಡಿರುವ ಸ್ವಾತಂತ್ರ್ಯದ ಹಿಂದೆ ದೀರ್ಘಕಾಲದ ಒಂದು ದೊಡ್ಡ ಹೋರಾಟದ ಶ್ರಮ ಮತ್ತು ತ್ಯಾಗಗಳಿವೆ ಎಂಬ ನೆನಪಿಟ್ಟು ಅವು ವ್ಯರ್ಥವಾಗದಂತಹ ವಿವೇಚನಾಪೂರ್ಣ ದಾರಿಯಲ್ಲಿ ಎಚ್ಚರಿಕೆಯಿಂದ ಮುನ್ನಡೆಯಬೇಕಾಗಿದೆ ಎಂದರು.

'ಸಮಕಾಲೀನ ಬದುಕಿನ ಸವಾಲುಗಳು: ಸರ್ವೋದಯದ ಸತ್ಯಗಳು' ಎಂಬ ವಿಷಯ ಕುರಿತ ಮೂರನೇ ಗೋಷ್ಠಿಯಲ್ಲಿ ಮಾತನಾಡಿದ ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ ಅವರು, ಇಂದು ನಾವು ಎದುರಾಗುತ್ತಿರುವ ರೈತ, ದಲಿತ, ಮಹಿಳೆ, ಜಾತಿ-ಮತ, ಬಡತನ, ಪರಿಸರ, ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಲು ಪ್ರಯತ್ನಗಳನ್ನು ಮಾಡುತ್ತಾ ಹೋಗುತ್ತಿರುವಂತೆ ಅವು ಇನ್ನೂ ಹೆಚ್ಚು ಉಲ್ಬಣಗೊಳ್ಳುತ್ತಿರುವ ವಿಪರ್ಯಾಸದ ಕಡೆ ಬೊಟ್ಟು ಮಾಡಿದರು. ಇದಕ್ಕೆ ಪಶ್ಚಿಮದ ಆಧುನಿಕ ನಾಗರೀಕತೆಯ ಮೌಲ್ಯ ಮತ್ತು ಆಶಯಗಳನ್ನು ಆಧರಿಸಿ ರೂಪಿತವಾಗಿರುವ ಸಂವಿಧಾನದ ಸ್ವರೂಪ ಮತ್ತು ಚೌಕಟ್ಟುಗಳೇ ಕಾರರಣವೆಂದು ಉದಾಹರಣೆಗಳ ಮೂಲಕ ವಿವರಿಸಿದ ಅವರು, ಯಾವ ದರ್ಶನವನ್ನು ಆಧರಿಸಿ ಗಾಂಧಿ ನೇತೃತ್ವದಲ್ಲಿ ನಮ್ಮ ರಾಷ್ಟ್ರೀಯ ಹೋರಾಟ ನಡೆಯಿತೋ ಆ ಗ್ರಾಮ ಮೂಲ ಮೌಲ್ಯಗಳ ಬದುಕಿನ ದರ್ಶನದ ಆಧಾರದ ಮೇಲೆ ಇಂದು ರಾಷ್ಟ್ರವನ್ನು ಪುನಾರಚಿಸುವ ಮೂಲಕ ಮಾತ್ರ ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಕಾನೂನು ತಜ್ಞ ಡಾ. ಸಿ.ಕೆ.ಎನ್. ರಾಜಾ ಅವರು ಮಾತನಾಡಿ, ನಾಗಭೂಷಣ ಅವರ ಮಾತುಗಳು ಚಿಂತನಾರ್ಹವೇ ಆದರೂ, ಸಮರ್ಥರಾದ ಹಿರಿಯರನೇಕರು ಬಹುಕಾಲ ಚಿಂತಿಸಿ ರೂಪಿಸಿದ ನಮ್ಮ ಸಂವಿಧಾನದ ಮೂಲ ಆಶಯಗಳು ಸರ್ವೋದಯದ ಆದರ್ಶಗಳೇ ಆಗಿದ್ದು, ಅದರ ಸಮರ್ಪಕವಾಗಿ ಜಾರಿಯಾಗಿಲ್ಲದ ದೋಷಗಳನ್ನು ಸಮಕಾಲೀನ ರಾಜಕಾರಣದಲ್ಲಿ ಹುಡುಕಿ ಅವನ್ನು ಪರಿಹರಿಸಿಕೊಳ್ಳಬೇಕಾಗಿದೆ ಎಂದರು.

ಮೂರು ದಿನಗಳ ಈ ಸಮ್ಮೇಳನದಲ್ಲಿ ಎಚ್.ಎಸ್. ದೊರೆಸ್ವಾಮಿ, ಸುರೇಂದ್ರ ಕೌಲಗಿ, ನಾಮದೇವ ಶೆಣೈ, ಅಶ್ವತ್ಥನಾರಾಯಣ ಮುಂತಾದ ಹಲವು ಸರ್ವೋದಯ ಕಾಯಕರ್ತರು ಮತ್ತು ಸುತ್ತಮುತ್ತಲ ಹಳ್ಳಿ ಪಟ್ಟಣಗಳ ಸಾರ್ವಜನಿಕರು, ಅಧ್ಯಾಪಕರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಚರ್ಚೆಗಳಲ್ಲಿ ಮತ್ತು ಪ್ರಾರ್ಥನೆ ಹಾಗೂ ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಡಾ. ಸುಜಯ್ ಕುಮಾರ್ ಮತ್ತು ಅವರ ಮಿತ್ರರು ಈ ಸಮ್ಮೇಳನವನ್ನು ಬಹು ಅಚ್ಚುಕಟ್ಟಾಗಿ ಆಯೋಜಿಸಿ ನಡೆಸಿಕೊಟ್ಟರು.

**( ವರದಿ: ಎಸ್.ಆರ್. ರಾಮಚಂದ್ರ ರಾವ್)**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೧೬

–ಇಂದಿರಾ ಬಿ.ಕೃಷ್ಣಪ್ಪ

## ಹೋರಾಟದ ಮಧ್ಯೆ ಸಾಹಿತ್ಯ, ಪ್ರೇಮ ವಿವಾಹ...

ಭದ್ರಾವತಿಯ ಸರ್.ಎಂ.ವಿ. ಕಾಲೇಜು ಮಲೆನಾಡಿನಲ್ಲಿ ಪ್ರತಿಷ್ಠಿತ ಕಾಲೇಜಾಗಿ ಬೆಳೆಯುತ್ತಿದ್ದ ಸಮಯವದು. ವಿವಿಧ ಕೋರ್ಸ್‌ಗಳಿಗಾಗಿ ಹೆಚ್ಚಿನ ಸಂಖ್ಯೆಯ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಯಿತು. ಹಾಗೆ ನೇಮಕಗೊಂಡವರಲ್ಲಿ, ಎಂ.ಕೆ. ತಿರುಮಲೇಶ್, ತಿಪ್ಪೇಸ್ವಾಮಿ, ಭೈರಪ್ಪ, ಚೌಡಪ್ಪ, ಚಂದ್ರಶೇಖರಯ್ಯ, ಶೈಲಜಾ, ವೇಣುಗೋಪಾಲ್, ಗುರುರಾಜ್ ಬೀಡೀಕರ್, ಕೆ.ಸಿ.ಗುರಪ್ಪ, ಮಾರಪ್ಪ, ಇನ್ನೂ ಮುಂತಾದವರನ್ನೊಳಗೊಂಡ ಯುವ ಉಪನ್ಯಾಸಕ ಪಡೆ ಕೃಷ್ಣಪ್ಪವನರ ಹೋರಾಟದ ಸಂಗಾತಿಗಳಾಗಿ, ಅವರಿಗೆ ಆನೆ ಬಲ ಬಂದಂತಾಗಿತ್ತು. ಅದೇ ರೀತಿ ಬಿ.ಆರ್.ಪಿ ಸ್ನಾತಕೋತ್ತರ ಕೇಂದ್ರದಲ್ಲಿ ರುದ್ರಪ್ಪ ಹನಗವಾಡಿ, ಜ್ಞಾನೇಂದ್ರ ಪ್ರಭು, ಶ್ರೀಕಂಠ ಕೂಡಿಗೆ ಕುಮಾರ ಚಲ್ಯ, ತೀ.ನಂ.ಶಂಕರನಾರಾಯಣ ಮುಂತಾದವರೂ, ಶಿವಮೊಗ್ಗ ನಗರ ಹಾಗೂ ಜಿಲ್ಲಾವ್ಯಾಪ್ತಿಯ ಅನೇಕ ಕಾಲೇಜುಗಳಲ್ಲಿನ ಎಂ.ಬಿ.ನಟರಾಜ್, ಸತ್ಯನಾರಾಯಣರಾವ್ ಅಣತಿ, ಪ್ರೊ.ಲಮಾಣಿ, ಪುಟ್ಟಯ್ಯ, ರೇಣುಕಪ್ಪಗೌಡ, ಪಂಚಾಕ್ಷರಿ, ರಾಜೇಂದ್ರ ಚೆನ್ನಿ, ಮುನೀರ್ ಬಾಷಾ, ರಾಚಪ್ಪ ಮುಂತಾದ ಹಿರಿ ಕಿರಿಯ ಅಧ್ಯಾಪಕರ ದೊಡ್ಡ ಬಳಗವೇ ಕೃಷ್ಣಪ್ಪನವರ ಹೋರಾಟದಲ್ಲಿ ಸಹಭಾಗಿಗಳಾದುವು. ಇದೇ ವೇಳೆಯಲ್ಲಿ ದೆಹಲಿಯ ಆಕಾಶವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿ.ಎಸ್.ನಾಗಭೂಷಣರವರೂ ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ವರ್ಗಾವಣೆ ಆಗಿ ಬಂದರು. ಗಾಂಧಿ–ಲೋಹಿಯಾ ಸಿದ್ಧಾಂತಗಳನ್ನು ಓದಿಕೊಂಡವರು, ವಿಷಯಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವವರೂ, ಖಂಡಿತವಾದಿಯೂ ಆದ ಅವರೂ ಸಹ ಸಮಾಜ ಪರಿವರ್ತನಾ ಹೋರಾಟಕ್ಕೆ ಕೈಜೋಡಿಸಿದ್ದರು. ಹೀಗೆ ನಿರ್ಮಾಣವಾದ ಬೌದ್ಧಿಕವಲಯ ದಸಂಸದ ತರಬೇತಿ ಶಿಬಿರ, ಚರ್ಚಾಗೋಷ್ಠಿ, ವಿಚಾರಸಂಕಿರಣಗಳ ಮುಖಾಂತರ ದಸಂಸವು ಸೈದ್ಧಾಂತಿಕವಾಗಿ ಸ್ಪಷ್ಟಗೊಳ್ಳುತ್ತಾ ಶಿವಮೊಗ್ಗ ಜಿಲ್ಲೆಯನ್ನು ಚಳುವಳಿಯ ಪ್ರಧಾನ ಭೂಮಿಕೆಯಾಗಿಸಿತು.

ಸೈದ್ಧಾಂತಿಕವಾಗಿ ಪಕ್ವಗೊಳ್ಳುತ್ತಿದ್ದ ದಸಂಸ ಆಗ ಅನೇಕ ಭೂ ಹೋರಾಟಗಳನ್ನು ಆರಂಭಿಸಿತ್ತು. ಭದ್ರಾವತಿಯಲ್ಲಿ ಕಾಳನಕಟ್ಟೆ, ಹೊನ್ನಾಳಿಯ ಕ್ಯಾಸನಕೆರೆ, ಚಿಕ್ಕಮಗಳೂರಿನ ಚಂಡೇಗೋಡು, ಬಿದರೆಕಾವಲು, ಹುಣಸೂರಿನ ರತ್ನಪುರಿ, ಹೆಗ್ಗಡದೇವನಕೋಟೆಯ ದೇವಲಾಪುರ, ದೇವರಸನಹಳ್ಳಿ ಮುಂತಾದ ಕಡೆಗಳಲ್ಲಿ ಅನಿರ್ದಿಷ್ಟಾವಧಿ ಭೂ ಹೋರಾಟಗಳು ಮತ್ತು ಹುಣಸೇಕೋಟೆಯ ಕೃಷ್ಣೇಗೌಡ ಕುಂಬಾರ ಅನಸೂಯಮ್ಮಳ ಮೇಲೆ ನಡೆಸಿದ ದೌರ್ಜನ್ಯದ ವಿರುದ್ಧ ಹುಣಸೇಕೋಟೆಯಿಂದ ವಿಧಾನಸೌಧದವರೆಗೆ ಕಾಲ್ನಡಿಗೆ ಜಾಥ, ಬಸವಕಲ್ಯಾಣದ ಅಲಗೂಡು ಮತ್ತು ಆಳಂದದ ಬಟ್ಟರಗಾ ಗ್ರಾಮದಲ್ಲಿನ ಸಾಮಾಜಿಕ ಬಹಿಷ್ಕಾರದ ವಿರುದ್ಧ ಸ್ವಾಭಿಮಾನಿ ಹೋರಾಟವನ್ನು ಸಂಘಟಿಸುತ್ತಿದ್ದ ಕೃಷ್ಣಪ್ಪ, ಹಗಲು ರಾತ್ರಿಯ ಪರಿವೆ ಇಲ್ಲದೆ ಓಡಾಡುತ್ತಿದ್ದರು. ಈ ಭೂಹೋರಾಟಗಳು, ಅಲ್ಲಿನ ದಲಿತ ಮಹಿಳೆಯರ ಬವಣೆಗಳನ್ನಾಧರಿಸಿ ನಾನು 'ಕತ್ತೆಕಿರುಬನ ನೆರಳು' ಕಥೆಯನ್ನು ಬರೆದೆ. ಅದು ಎಂ.ಬಿ.ನಟರಾಜ್ ಸಂಪಾದಿಸಿದ 'ಮಲೆನಾಡಿನ ಕಥೆಗಳು' ಸಂಕಲನದಲ್ಲಿ ಸೇರಿತು. ದಸಂಸವು ದೇಶಾದ್ಯಂತ ಬೆಲ್ಚಿ, ಪಿಪ್ರಾ, ಕಿಲ್ವಮಣಿ, ಸಾಧುಪುರ ದೇವೂಲಿಗಳಲ್ಲಿ ನಡೆದ ದಲಿತರ ಸಾಮೂಹಿಕ ಕೊಲೆ–ದೌರ್ಜನ್ಯದ ವಿರುದ್ಧ, ದಲಿತ ಮಂತ್ರಿ–ಶಾಸಕರ ಮನೆಗಳ ಮುಂದೆ, ಇಂದಿರಾ ಗಾಂಧಿ ಆಡಳಿತದ ಹತ್ತು ವರ್ಷಗಳಲ್ಲಿ ೪೦೦೦೦ ಕ್ಕೂ ಮಿಕ್ಕಿ ಕಗ್ಗೊಲೆಗಳು ನಡೆದಿರುವುದರ ವಿರುದ್ಧ ಪ್ರತಿಭಟನೆ ನಡೆಸಿದ್ದರು.

ಇದನ್ನೇ ಆಧಾರವಾಗಿಸಿಕೊಂಡು, 'ದಲಿತ ಮಹಿಳೆಯರ ದಹನ' ಎಂಬ ಲೇಖನವನ್ನು, ಕಿಲ್ವಮಣಿ ಕಗ್ಗೊಲೆ ಕುರಿತು ಬರೆದೆ. ಇದು ದಸಂಸದ ಮುಖವಾಣಿಯಾದ 'ಪಂಚಮ'ದಲ್ಲೂ 'ನವಯುಗ'ದಲ್ಲೂ



**ಬಿ. ಕೃಷ್ಣಪ್ಪ ಭದ್ರಾವತಿಯ ತಮ್ಮ ಮನೆಯಲ್ಲಿ, ಎಂ. ಚಂದ್ರಶೇಖರಯ್ಯ, ಡಿ.ಎಸ್. ನಾಗಭೂಷಣ ಹಾಗೂ ತಮ್ಮ ಕಿರಿಮಗಳು ಸೀಮಾಳೊಂದಿಗೆ**

ಪ್ರಕಟವಾಯಿತು. ಕೃಷ್ಣಪ್ಪನವರ ಕೈಲಿ ಬಲವಂತವಾಗಿ, ನನ್ನ ಬರವಣಿಗೆಗಳನ್ನಿಟ್ಟು, ಒಮ್ಮೆ ನೋಡಿ ಕೊಡಲೇಬೇಕು ಎಂದು ಒತ್ತಾಯ ಮಾಡುತ್ತಿದ್ದೆ. ಕಿಂಚಿತ್ತೂ ಅಸಮಧಾನ ವ್ಯಕ್ತಪಡಿಸದೆ ತಡರಾತ್ರಿಯಾದರೂ ಓದಿ ಪರಿಶೀಲಿಸಿ ಕೊಡುತ್ತಿದ್ದರು. ಇದರ ಮಧ್ಯೆ ಭದ್ರಾವತಿ ಆಕಾಶವಾಣಿಯಲ್ಲಿನ ನಾಟಕಗಳಿಗಾಗಿ ಧ್ವನಿ ಪರೀಕ್ಷೆಗೆ ಕರೆ ಬಂದು ಅದಕ್ಕಾಗಿ ನಾನು ಊರಾಚೆ ಇದ್ದ ತಾಂತ್ರಿಕ ಕೇಂದ್ರಕ್ಕೆ ತಿರುಮಲೇಶ್‌ರೊಂದಿಗೆ ಬೈಕಲ್ಲಿ ಹೋಗಿ ಹಾಜರಾಗಿ ಅದರಲ್ಲಿ ಯಶಸ್ವಿಯೂ ಆದೆ. ಮುಂದೆ ಅನೇಕ ನಾಟಕಗಳಲ್ಲಿ ಭಾಗವಹಿಸಿದೆ. ನಂತರದ ದಿನಗಳಲ್ಲಿ ಡಿ.ಎಸ್.ನಾಗಭೂಷಣರವರು ಬೆಳಗಿನ ರಶ್ಮಿ ಕಾರ್ಯಕ್ರಮಗಳಿಗೂ ಆಹ್ವಾನಿಸಿದರು.

ಹೀಗೊಂದು ದಿನ ತಿರುಮಲೇಶ್ ಅವರು ವೇದಾವತಿ–ಗುರುರಾಜ ಬೀಡೀಕರ್‌ರವರ ಪ್ರೇಮ ಪ್ರಕರಣವನ್ನು ನನ್ನ ಬಳಿ ತಂದರು. ಕಾಲೇಜಿನ ವಿರಾಮದ ವೇಳೆಯಲ್ಲಿ ಅವರಿಬ್ಬರೂ ಅಲ್ಲಲ್ಲಿ ನಿಂತು ಮಾತನಾಡುವ ವಿಚಾರ, ಕಾಲೇಜಿನಲ್ಲಿ ವಿದ್ಯಾರ್ಥಿಗಳ ನಡುವೆ ಗುಲ್ಲೆಬ್ಬಿಸಿದ್ದು, ಅವರಿಬ್ಬರಿಗೂ ಆದಷ್ಟು ಬೇಗ ಮದುವೆ ಮಾಡಿಸುವುದೊಳಿತು ಎಂದು ಅವರು ಸೂಚಿಸಿದರು. ತಿರುಮಲೇಶ್ ಸಹ, ಅವರ ಬಳಗದವರೇ ಆದ, ಲಕ್ಷ್ಮೀಯವರನ್ನು ಪ್ರೀತಿಸಿ, ಛಲಬಿಡದೆ ಮದುವೆಯಾದವರು. ನಾನು ವೇದಾಳನ್ನು ಕರೆಯಿಸಿ ಮಾತನಾಡಿದೆ. ಆಕೆ ಇನ್ನೂ ಪಿಯುಸಿ ಓದುತ್ತಿದ್ದ ವಿದ್ಯಾರ್ಥಿನಿಯಾಗಿದ್ದು, ಅದು ಬ್ರಾಹ್ಮಣ ಸಮಾಜಕ್ಕೆ ಸೇರಿದ ತಂದೆ ತಾಯಿ, ಅಣ್ಣಂದಿರು ಯಾರೂ ಒಪ್ಪಲಾರದ ಸಂಬಂಧವಾಗಿತ್ತು. ತನ್ನೆಲ್ಲಾ ಒಳತೋಟಿಗಳನ್ನು ನನ್ನೊಡನೆ ಹಂಚಿಕೊಳ್ಳುತ್ತಿದ್ದ ದಲಿತ ಗುರುರಾಜ, ಈ ವಿಷಯ ಏಕೆ ನನ್ನಲ್ಲಿ ಹೇಳಿಲ್ಲವೆಂದು ಆಶ್ಚರ್ಯಪಟ್ಟು ಆತನನ್ನೇ ಕರೆಸಿ ಕೇಳಿದೆ. ಅವರು ತನ್ನ ತಂದೆ ಶಿವಮೊಗ್ಗದಲ್ಲಿ ಒಂದು ಸಣ್ಣಮನೆ ಕಟ್ಟಿಸುತ್ತಿರುವುದಾಗಿಯೂ ಅದು ಮುಗಿದ ಮೇಲೆ ಮದುವೆಯಾಗುವುದಾಗಿಯೂ ತಿಳಿಸಿದರು. ಆಗ ನಾನು, ಹಾಗಿದ್ದರೆ ವೇದಾಳೊಂದಿಗೆ ನೀವು ಕಾಲೇಜಿನ ಸುತ್ತಮುತ್ತ ಮಾತನಾಡಬೇಡಿ ಎಂಬ ಷರತ್ತು ಇಟ್ಟೆ. ಕೃಷ್ಣಪ್ಪನವರಿಗೂ ವಿಷಯ ತಿಳಿಸಿದೆ. ಅವರು ಕೂಡಲೇ ದಿನಾಂಕ ಗೊತ್ತುಮಾಡಿ, ಶಿವಮೊಗ್ಗದ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿಯೇ ಬಿಟ್ಟರು. ಆಡುವವರ ಬಾಯಿಗೊಂದು ಬೀಗ ಬಿದ್ದಿತು. ವೇದಾ ಅದೇ ಕಾಲೇಜಿನಲ್ಲಿ, ಕುಹಕಿಗಳ ಕಹಿನುಡಿ, ಉರಿನೋಟವನ್ನು ಎದುರಿಸುತ್ತಲೇ, ಡಿಗ್ರಿ ಪಡೆದಳು. ಭದ್ರಾವತಿಯಲ್ಲಿ ಒಂದು ಸಂತೋಷಕೂಟ, ಇವರಿಗಾಗಿ ಏರ್ಪಾಡು ಮಾಡಲಾಯಿತು. ದಸಂಸ ಗೆಳೆಯರು, ಪ್ರಗತಿಪರರು, ಸ್ನೇಹಿತರು ಸೇರಿದ ಆ ಕೂಟದಲ್ಲಿ, ಗುರುರಾಜರವರ ತಾಯಿಯ ಆಸೆಯಂತೆ, ಕರಿಮಣಿ ತಾಳಿಸರ ಕಟ್ಟುವ ಸಂದರ್ಭ ಬಂದಿತು. ಜಾತಿಮತ–

ಕಟ್ಟುಕಟ್ಟಳೆಗಳು ಮೀರಿ ಆಗಿರುವ ಒಲವಿನ ವಿವಾಹಕ್ಕೆ ತಾಳಿಯ ಬಂಧನವೇಕೆ? ಎಂಬ ಧ್ವನಿ ಎದ್ದಿತು. ಅವರ ತಾಯಿಯ ಕಿರು ಆಸೆಯನ್ನು ಈಡೇರಿಸಲು ವಾದ ವಿವಾದಗಳು ಬೇಡವೆಂದು ಕೃಷ್ಣಪ್ಪ ಮಾತುಕತೆಯಿಂದ ಅದನ್ನು ಸಂಭಾಳಿಸಿದರು. ದಲಿತರಾದ ಗುರುರಾಜ ಅವರಿಗೆ ಇರಲಿಕ್ಕೆ ಒಂದು ಮನೆ ಸಿಗದೆ ಇದ್ದುದು, ಶಿವಮೊಗ್ಗದಲ್ಲಿ ಕಟ್ಟಿಸುತ್ತಿದ್ದ ಮನೆಯ ಅಕ್ಕಪಕ್ಕದ ಮನೆಯವರ ಜಾತಿ ವೈಷಮ್ಯ, ಆರ್ಥಿಕ ತೊಂದರೆ ನನ್ನಲ್ಲಿ ಹೇಳಿಕೊಳ್ಳುತ್ತಿದ್ದರು. ಇದನ್ನಾಧರಿಸಿ ನಾನು ಆಗ 'ಮಾಸ್ತರ ಮನೆ' ಎಂಬ ಕತೆ ಬರೆದೆ.

ಭದ್ರಾವತಿ ತಾಲ್ಲೂಕು ಕಚೇರಿ ಆವರಣದಲ್ಲೇ ಇದ್ದ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಉದ್ಯೋಗಿಯಾಗಿದ್ದ ಫ್ಲಾರಿ ಮಿರಾಂಡ, ತಾಲ್ಲೂಕು ಕಚೇರಿ ಮಹಿಳಾಮಣಿಗಳ ಊಟದ ಕೂಟದ ಸದಸ್ಯೆ. ನಮ್ಮ ಹಾಗೆ ಮಾತಿನ ಮಲ್ಲಿಯಾಗಿರದ ಆಕೆ ಒಂದು ಮಧ್ಯಾಹ್ನ ಕಚೇರಿ ವೇಳೆಯಲ್ಲಿ, ನನ್ನ ಬಳಿ ಬಂದು ತನಗೆ ಮನೆಯಲ್ಲಿ ಬಲವಂತದ ಮದುವೆ ಮಾಡುತ್ತಿರುವುದಾಗಿಯೂ, ನಾಳೆಯೇ ನಿಶ್ಚಿತಾರ್ಥ ಇರುವುದಾಗಿಯೂ, ಆದರೆ ತಾನು ಸಿದ್ಧಯ್ಯ ಎನ್ನುವ ಬ್ಯಾಂಕ್ ಉದ್ಯೋಗಿಯನ್ನು ಪ್ರೀತಿಸುತ್ತಿರುವುದಾಗಿ ಹೇಳಿಕೊಂಡು ಅತ್ತಳು. ನಾನು ಯಾವ ಆಲೋಚನೆಯೂ ಮಾಡದೆ, ಅರ್ಧ ದಿನದ ರಜೆ ಬರೆದು, ಅವಳನ್ನು ಕರೆದುಕೊಂಡು ಸಿದ್ಧಯ್ಯ ಕೆಲಸ ಮಾಡುತ್ತಿದ್ದ ಸಿಂಡಿಕೇಟ್ ಬ್ಯಾಂಕ್‌ಗೆ ಹೋಗಿಬಿಟ್ಟೆ. ಆವತ್ತು ಶನಿವಾರ ಬ್ಯಾಂಕ್ ಮುಕ್ತಾಯಗೊಂಡು ಎಲ್ಲರೂ ನಿರ್ಗಮಿಸಿದ್ದರು. ಅಲ್ಲಿಂದ ಸೀದಾ ನಮ್ಮ ಮನೆಗೆ ಬಂದೆವು. ಸಂಜೆ ವೇಳೆಗೆ ಕೃಷ್ಣಪ್ಪ ಮತ್ತೆಲ್ಲರಿಗೂ ಸುದ್ದಿ ತಿಳಿಯಿತು.

ಮರುದಿನ ಭಾನುವಾರ. ಸಿದ್ದಯ್ಯನನ್ನು ಅವರು ವಾಸ ಮಾಡುತ್ತಿದ್ದ ಶಂಕರಘಟ್ಟದಿಂದ ಕರೆತರಬೇಕು. ಸೋಮವಾರದವರೆಗೆ ಇಬ್ಬರನ್ನು ನಿಗಾದಲ್ಲೇ ಇಟ್ಟುಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಶಂಕರಘಟ್ಟಕ್ಕೆ ಹೋಗುವ ಮಾರ್ಗ ಮಧ್ಯದಲ್ಲೇ ಇರುವ ಜಂಕ್ಷನ್‌ನಲ್ಲೇ ಫ್ಲಾರಿಯ ತಂದೆಯ ಮನೆ. ಇವಳು ಆದಿನ ಮನೆಗೆ ಹೋಗದೆ ಇದ್ದರೆ, ಭದ್ರಾವತಿಯ ಚೆಕ್ ಪೋಸ್ಟ್‌ಗಳಲ್ಲಿ ಕಾವಲಿರಿಸುವಷ್ಟು ತನ್ನ ತಂದೆಯ ಬಳಗ ಶಕ್ತ ಎಂಬುದನ್ನು ಆಕೆ ಹೇಳಿದ್ದಳು. ಫ್ಲಾರಿಯ ತಮ್ಮ ಶಂಕರಘಟ್ಟದಲ್ಲಿದ್ದ ಸ್ನಾತಕೋತ್ತರ ಕೇಂದ್ರದಲ್ಲಿ ರುದ್ರಪ್ಪ ಹನಗವಾಡಿಯವರ ಶಿಷ್ಯನಾಗಿದ್ದು ಅವನಿಗೆ ತನ್ನ ಅಕ್ಕ ಕಚೇರಿಗೆ ಸಿದ್ಧಯ್ಯನೊಡನೆ ಬೈಕ್ ಮೇಲೆ ಹೋಗುತ್ತಿದ್ದುದು ತಿಳಿದುದಲ್ಲದೆ ಆಗ ರೂಪುಗೊಂಡಿದ್ದ ಅಂತರ್ಜಾತೀಯ ವಿವಾಹಿತರ ಜಾಲದ ವ್ಯಾಪ್ತಿ ಕೂಡ ಗೊತ್ತಿತ್ತು. ಹಾಗಾಗಿ ಹುಡುಗಿಯ ಮನೆಯವರು ಹುಡುಗಿಯನ್ನು ಹುಡುಕುತ್ತಾ ಮೊದಲು ರುದ್ರಪ್ಪ; ನಂತರ ನಮ್ಮ ಮನೆಗೆ ಬಂದೇ ಬರುವರೆಂದು ನಿರೀಕ್ಷಿಸಿ ಆಕೆಯನ್ನು ಬಚ್ಚಿಮ್ಮಾ ಮನೆಯಲ್ಲಿರಿಸಿದೆವು. ನಮ್ಮ ಶಂಕೆಯಂತೆ ಅವರು ನಮ್ಮ ಮನೆಗೂ ಬಂದು ವಿಚಾರಿಸಿದ್ದರು. ಈ ಮಧ್ಯೆ ರುದ್ರಪ್ಪನ ಮೂಲಕ ಶಂಕರಘಟ್ಟದಲ್ಲಿದ್ದ ಸಿದ್ಧಯ್ಯನನ್ನು ಮುಖಕ್ಕೆ ಮುಸುಕು ಹಾಕಿ ಬೈಕ್‌ನಲ್ಲಿ ಕಾಡು ಹಾದಿಹಿಡಿದು ಭದ್ರಾವತಿಗೆ ಕರೆತರಲಾಯಿತು. ಕೃಷ್ಣಪ್ಪ ದಸಂಸದ ಗೆಳೆಯರನ್ನು ಜೊತೆಮಾಡಿ ಪ್ರೇಮಿಗಳಿಬ್ಬರನ್ನೂ ತರೀಕೆರೆಗೆ ಕಳುಹಿಸಿ, ವಿವಾಹದ ಏರ್ಪಾಡು ಮಾಡಿಸಿದರು.

ನಂತರದ ದಿನಗಳಲ್ಲಿ, ಹುಡುಗಿಯ ಅಣ್ಣತಮ್ಮಂದಿರು ರುದ್ರಪ್ಪನವರಿಂದ ಮಾಹಿತಿ ಪಡೆದು, ಇವರೊಂದಿಗೆ ಬೆರೆತರು. ಈಗ ಎರಡೂ ಕಡೆಯವರು ಪರಸ್ಪರ ಬೆರೆತು ಬದುಕು ನಡೆಸುತ್ತಿದ್ದಾರೆ. ಜಾತೀಯ ಕಟ್ಟುಗಳನ್ನು ಮೀರುವಂತಹ ವೈವಾಹಿಕ ಸಂಬಂಧಕ್ಕಾಗಿ ಹುಡುಗ ಹುಡುಗಿಯರು ಪೂರ್ವಾಪರ ಯೋಚಿಸದೆ ಧೈರ್ಯವಾಗಿ ಮುನ್ನುಗ್ಗುತ್ತಿದ್ದ ಆ ದಿನಗಳನ್ನು ನೆನೆಸಿಕೊಂಡರೆ, ಈಗ ಸಖೇದಾಶ್ಚರ್ಯವೂ ನಮ್ಮ ಆ ಕಾಲದ ಬಗ್ಗೆ ಹೆಮ್ಮೆಯೂ ಆಗುತ್ತದೆ.

(ಮುಂದುವರೆಯುವುದು)

## ಕೈಮಗ್ಗ ಉಳಿಸಲು ನೇಕಾರರ ಹೋರಾಟ : ಕೊನೆಗೂ ಮಣಿದ ಸರ್ಕಾರ



ಗ್ರಾಮೀಣ ಭಾರತದಲ್ಲಿ ಕೃಷಿಯ ನಂತರ ಅತಿ ಹೆಚ್ಚು ಉದ್ಯೋಗ ಸೃಷ್ಟಿಗೆ ಕಾರಣವಾದ ಕೈಮಗ್ಗ ಉದ್ಯಮದ ಬಗೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ತಳೆದಿರುವ ನಿರ್ಲಕ್ಷ್ಯ ಮತ್ತು ಉದ್ಯಮವನ್ನು ಯಾಂತ್ರೀಕರಣಕ್ಕೊಳಪಡಿಸಿ ಹೊಸಕಿ ಹಾಕಲು ಹೊರಟಿರುವ ಅಧಿಕಾರಶಾಹಿಯ ಹುನ್ನಾರದ ವಿರುದ್ಧ ಜನವರಿ ತಿಂಗಳಿನಲ್ಲಿ ಅಖಿಲ ಭಾರತ ಕೈಮಗ್ಗ ನೇಕಾರರ ಒಕ್ಕೂಟದ ಪರವಾಗಿ ತೀವ್ರ ಹೋರಾಟವನ್ನು ಹಮ್ಮಿಕೊಳ್ಳಲಾಗಿತ್ತು. ಚರಕ ಮತ್ತು ದೇಸಿ ಸಂಸ್ಥೆಯ ಪ್ರಸನ್ನ ಈ ಹೋರಾಟದ ನಾಯಕತ್ವ ವಹಿಸಿದ್ದರು.

ಹೋರಾಟದ ಭಾಗವಾಗಿ ೧೫ ರಿಂದ ೨೭ರವರೆಗೆ ಗದಗ ಜಿಲ್ಲೆಯ ಗಜೇಂದ್ರಗಡದಿಂದ ಬಾಗಲಕೋಟೆ ಜಿಲ್ಲೆಯ ಬಾದಾಮಿವರೆಗೆ ಆಯ್ದ ಪ್ರಮುಖ ನೇಕಾರರ ಊರುಗಳನ್ನು ಹಾಯ್ದು ಸುಮಾರು ೨೪೫ ಕಿ.ಮೀ. ದೂರ ನೇಕಾರರ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಜಾಥಾ ಹೋದಲ್ಲೆಲ್ಲಾ ಸಾರ್ವಜನಿಕ ಸಭೆ ನಡೆದು ನೇಕಾರಿಕೆಗೆ ಬಂದೊದಗಿದ ಆಪತ್ತನ್ನು ಚರ್ಚಿಸಲಾಯಿತು. ಹೆಂಗಸರು, ಮಕ್ಕಳು, ವಯೋವೃದ್ಧರಾದಿಯಾಗಿ ಸಭೆಗಳಲ್ಲಿ ಭಾಗವಹಿಸಿದ ನೇಕಾರರು ಕಾಲ್ನಡಿಗೆಯಲ್ಲಿ ಸೇರಿಕೊಂಡರು.

ಬನಶಂಕರಿಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಸಂಸದೆ ಬಿ. ಜಯಶ್ರೀ, ನೇಕಾರರ ಅಖಿಲ ಭಾರತ ಒಕ್ಕೂಟದ ಅಧ್ಯಕ್ಷೆ ಮತ್ತು ದಸ್ತಕಾರ್ ಆಂಧ್ರ ಸಂಸ್ಥೆಯ ಸಂಸ್ಥಾಪಕಿ ಉಜ್ರಮ್ಮ ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗದುಗಿನ ತೋಂಟದಾರ್ಯ ಮಠದ ಸ್ವಾಮೀಜಿಯವರು "ಇದು ಯಾರೋ ಅಧಿಕಾರದ ಗದ್ದುಗೆಗೆ ಏರಲು ನಡೆಸಿದ ಬೂಟಾಟಿಕೆಯ ಹೋರಾಟವಲ್ಲ; ಈ ದೇಶದ ನೆಲ, ಜಲ ಮತ್ತು ಬಡ ನೇಕಾರರ ಪರವಾಗಿ ಮತ್ತು ಯಂತ್ರ ನಾಗರೀಕತೆಯ ವಿರುದ್ಧ ನಾಡಿನ ಪ್ರಗತಿಪರರು ನಡೆಸಿರುವ ಹೋರಾಟ, ಇದಕ್ಕೆ ಜಯ ಸಿಗಲಿದೆ ಎಂದರು.

ಕಾಲ್ನಡಿಗೆಯು ಸುಮಾರು ೧೪ ದಿನಗಳವರೆಗೆ ನಡೆದರೂ ತುಟಿಬಿಚ್ಚದ ಸರಕಾರದ ವಿರುದ್ಧ ಪ್ರಸನ್ನ ಅವರು ಕೊನೆಯ ಅಸ್ತ್ರವಾಗಿ ಗಾಂಧೀಜಿ ಹುತಾತ್ಮರಾದ ದಿನವಾದ ಜನವರಿ ೩೦ ರಂದು ಸರ್ವೋದಯ ದಿನಾಚರಣೆಯ ಮೂಲಕ ನಾ. ಡಿಸೋಜಾ, ಕಡಿದಾಳು ಶಾಮಣ್ಣ ಡಿ.ಎಸ್. ನಾಗಭೂಷಣ, ಅಗ್ರಹಾರ ಕೃಷ್ಣಮೂರ್ತಿ, ಸವಿತಾ ನಾಗಭೂಷಣ, ಕೆ.ಟಿ. ಗಂಗಾಧರ ಮುಂತಾದ ಲೇಖಕ–ಚಿಂತಕ– ಹೋರಾಟಗಾರರ ಸಮ್ಮುಖದಲ್ಲಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ರಾಜ್ಯದ ಹಲವೆಡೆ ಒಂದು ದಿನದ ಸಾಂಕೇತಿಕ ಮುಷ್ಕರದ ಮೂಲಕ ಸತ್ಯಾಗ್ರಹಕ್ಕೆ ಬೆಂಬಲ ಹರಿದುಬಂದಿತಲ್ಲದೆ ಡಾ. ಯು.ಆರ್. ಅನಂತಮರ್ತಿಯವರು ಸೇರಿದಂತೆ ರಾಜ್ಯದ ಹಲವಾರು ಸಾಹಿತಿಗಳು, ಚಿಂತಕರು, ಕಲಾವಿದರು ಹಾಗೂ ರೈತ ಮತ್ತು ದಲಿತ ಸಂಘಟನೆಗಳಿಂದ ಬೆಂಬಲ ವ್ಯಕ್ತವಾಯಿತು. ಎರಡು ಮೂರು ದಿನಗಳಲ್ಲೇ ಈ ಒತ್ತಡಕ್ಕೆ ಮಣಿದ ಸರಕಾರ ಒಕ್ಕೂಟದ ಈ ಮೂರು ಪ್ರಮುಖ ಬೇಡಿಕೆಗಳನ್ನು ಒಪ್ಪಿಕೊಂಡಿತು: ೧. ಕೈಮಗ್ಗಗಳಿಗೆ ಚಿಕ್ಕದೊಂದು ಯಂತ್ರ (ಮೋಟರ್) ಅಳವಡಿಸುವ ನಿರ್ಧಾರವನ್ನು ಕೈಬಿಡಬೇಕು. ೨. ಕೈಮಗ್ಗಕ್ಕೆ ಮೀಸಲಿರುವ ಉತ್ಪನ್ನಗಳನ್ನು ವಿದ್ಯುತ್ ಮಗ್ಗಗಳು ಉತ್ಪಾದಿಸದಂತೆ ಮೀಸಲು ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ೩. ಕೈಮಗ್ಗಗಳ ಕ್ಷೇತ್ರದಲ್ಲಿ ಪವರ್‌ಲೂಮ್‌ಗಳನ್ನು ಹಾಕಲು ಸರಕಾರ ಅವಕಾಶ ಕೊಡಬಾರದು.

(ವರದಿ: ಎನ್.ಎಂ. ಕುಲಕರ್ಣಿ)

# ನಾವು ಆಗಬಯಸಿರುವ ಅಮೆರಿಕಾ ಹೀಗಿದೆ ನೋಡಿ...

–ಡಾ. ಎ.ಎನ್. ನಾಗರಾಜ್

**ವಿಶ್ವಸಂಸ್ಥೆ ಅಡಿಯ ಆಹಾರ ಮತ್ತು ಕೃಷಿ ಸಂಸ್ಥೆಯಲ್ಲಿ ಹಲವಾರು ವರ್ಷಗಳ ಕಾಲ ವಿಜ್ಞಾನಿಯಾಗಿ ದುಡಿದ ಡಾ. ಎ.ಎನ್. ನಾಗರಾಜ್, ಬಹು ಹಿಂದೆಯೇ ಅಮೆರಿಕಾ ಪ್ರತಿನಿಧಿಸುವ ಬದುಕಿನ ಮೌಲ್ಯಗಳನ್ನು ತಿರಸ್ಕರಿಸಿ ಭಾರತಕ್ಕೆ ವಾಪಸು ಬಂದವರು. ಆದರೆ ಭಾರತದ ಸಾಮಾನ್ಯ ಜನಕ್ಕೆ, ಅಮೆರಿಕಾವೇ ಆದರ್ಶ; ಅದು ಸರ್ವ ಸುಖಗಳ ನೆಲೆವೀಡು. ಹಾಗೇ ಆ ಸುಖಗಳನ್ನು ಒದಗಿಸುವ ದುಡಿಮೆಯ ಮಾರ್ಗಗಳು ಮತ್ತು ನಿಯತ್ತು ಅಲ್ಲಿದ್ದಷ್ಟು ಎಲ್ಲಿಯೂ ಇಲ್ಲ ಎಂಬ ನಂಬಿಕೆ ನಿಜ. ಆದರೆ ಅಮೆರಿಕಾ ಬಿಟ್ಟು ಬಂದ ಮೇಲೂ ಆ ದೇಶಕ್ಕೆ ತಮ್ಮ ಬಂಧು–ಮಿತ್ರರನ್ನು ಕಾಣಲು ಪ್ರತಿವರ್ಷ ಹೋಗಿ ಬರುವ ನಾಗರಾಜ್‌ರ ಪ್ರಕಾರ ಆ ದುಡಿಮೆಯ ಮಾರ್ಗಗಳು ಮತ್ತು ನಿಯತ್ತನ್ನು ಒಳಗೊಂಡ ಒಟ್ಟಾರೆ ದುಡಿಮೆಯ ಸಂಸ್ಕೃತಿ ಮಾನವ ಸಂಬಂಧಗಳನ್ನೇ ಅಪ್ರಸ್ತುತಗೊಳಿಸಬಲ್ಲ ಮತ್ತು ಅದಕ್ಕಿಂತ ಹೆಚ್ಚಾಗಿ ಜೀವಜಗತ್ತಿಗೇ ಕುತ್ತನ್ನುಂಟು ಮಾಡುವ ಅಪಾಯಗಳನ್ನು ಒಳಗೊಂಡಿರುವಂತಹದ್ದು. ತಾವು ಕಂಡ ಈ ಸತ್ಯವನ್ನು ಇಲ್ಲಿ ನಾಗರಾಜ್ ಈಗಾಗಲೇ ನಮಗೆ ಗೊತ್ತಿದೆ ಎಂದು ಭಾವಿಸಲಾಗಿರುವ ಸಂಗತಿಗಳನ್ನು ಹೇಳುತ್ತಲೇ ನಮ್ಮನ್ನು ಆ ಸತ್ಯದ ಕಡೆ ಮತ್ತೆ ಮತ್ತೆ ನೋಡುವಂತೆ ಒತ್ತಾಯಿಸುತ್ತಾರೆ.**

**ವಿಶೇಷವಾಗಿ ಕಳೆದೆರಡು ದಶಕಗಳಲ್ಲಿ ಅಮೆರಿಕಾ ಪಿತ್ಥವನ್ನು ನೆತ್ತಿಗೇರಿಸಿಕೊಂಡಂತಿರುವ ಭಾರತ ಈಗ ಅದರಂತೆ 'ಜಾಗತಿಕ ಶಕ್ತಿ'ಯಾಗುವ ಹುಂಬತನದಲ್ಲಿ ಅದರೊಂದಿಗೇ ಸ್ಪರ್ಧೆಗೆ ಇಳಿದಂತಿದ್ದು, ಆ ಹಾದಿಯಲ್ಲಿ ಇಲ್ಲಿನ ಬದುಕು ಏನೆಲ್ಲವನ್ನು ಕಳೆದುಕೊಳ್ಳುವ ಆತಂಕಕ್ಕೆ ಸಿಕ್ಕಿದೆ ಎಂಬುದರ ಸೂಚನೆಗಳೂ ಇಲ್ಲಿ ಸಿಗುತ್ತವೆ.**–ಸಂ



**ನಾ**ನು ಅಮೆರಿಕಾದಲ್ಲಿ ಮತ್ತು ಅಮೆರಿಕದ ವ್ಯಾಪಾರೀ ಸಂಸ್ಕೃತಿಯಲ್ಲಿ ಮುಳುಗಿರುವ ಫಿಲಿಪೈನ್ಸ್ ದೇಶದಲ್ಲಿ ಒಟ್ಟು ಹನ್ನೊಂದು ವರ್ಷ ವಾಸ ಮಾಡಿದ್ದೇನೆ. ಇಂತಹ ಸಂಸ್ಕೃತಿಯ ಅನೇಕ ಹಾನಿಕರ ಪರಿಣಾಮಗಳನ್ನು ಸ್ವತಃ ನೋಡಿದ್ದೇನೆ. ಅವುಗಳ ಬಗ್ಗೆ ಲೇಖನಗಳನ್ನು ಮತ್ತು ಪುಸ್ತಕಗಳನ್ನು ಓದಿದ್ದೇನೆ. ನಾವು ಭಾರತದಲ್ಲಿ ಈ ವ್ಯವಸ್ಥೆಯನ್ನು ಈಗ ಸಾರಾಸಗಟಾಗಿ ಆಮದು ಮಾಡಿಕೊಂಡು ಅದರ ಕೆಲವು ಅಡ್ಡ ಪರಿಣಾಮಗಳನ್ನು ನೋಡುತ್ತಿದ್ದೇವೆ. ಈ ಲೇಖನದಲ್ಲಿ ಈ ಸಂಸ್ಕೃತಿಯಿಂದ ಅಮೇರಿಕದಲ್ಲಿ ಇದುವರೆಗೆ ಆಗಿರುವ ಅಂದರೆ ಮುಂದೆ ಭಾರತದಲ್ಲಿ ಆಗುವ ಕೆಲವು ಪರಿಣಾಮಗಳ ಬಗ್ಗೆ ಬರೆಯುತ್ತಿದ್ದೇನೆ.

ಅಮೆರಿಕದ ವ್ಯಾಪಾರೀ ಸಂಸ್ಕೃತಿಯ ಒಲವು ಹೆಚ್ಚಾಗಿರುವ ಭಾರತೀಯರು ಈಗ ಭಾರತದ ಆರ್ಥಿಕ ನೀತಿಯನ್ನು ರೂಪಿಸುತ್ತಿದ್ದಾರೆ. ಇವರೆಲ್ಲ ನನ್ನ ಹಾಗೆ ಅಮೇರಿಕದ ಈಗಿನ ಜನಜೀವನದಲ್ಲಿ ಎದ್ದು ಕಾಣುವ ಒಳಿತುಗಳನ್ನು ಅನುಭವಿಸಿದವರು, ನೋಡಿರುವವರು, ಅವುಗಳ ಬಗ್ಗೆ ಕೇಳಿರುವವರು, ಅಥವಾ ಓದಿರುವವರು. ಇವರಲ್ಲಿ ಅನೇಕ ರಾಜಕೀಯ ವ್ಯಕ್ತಿಗಳು, ಆರ್ಥಿಕ ತಜ್ಞರು, ವಿಜ್ಞಾನಿಗಳು, ಕೈಗಾರಿಕೋದ್ಯಮಿಗಳು ಮತ್ತು ಅಧಿಕಾರಿಗಳು ಅಮೇರಿಕದಲ್ಲಿ ವಿದ್ಯಾಭ್ಯಾಸ ಮಾಡಿದವರು ಮತ್ತು ಕೆಲವರು ಹಲವಾರು ವರ್ಷ ಅಲ್ಲಿ ಕೆಲಸ ಮಾಡಿ ಬಂದವರು. ಇಂತಹವರಲ್ಲಿ ಶೇಕಡ ೯೦ರಷ್ಟು ಜನಗಳಾದರೂ ಅಲ್ಲಿಯ ಸುಖ ಸವಲತ್ತುಗಳನ್ನು ಅನುಭವಿಸಿ ಅಲ್ಲಿಯ ಆರ್ಥಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ವಿದ್ಯಾಭ್ಯಾಸ ಕ್ರಮ ಇವುಗಳನ್ನು ಮೆಚ್ಚಿಕೊಂಡವರು. ನನ್ನಂಥವರಿಗೆ ಕಾಣುವ ವ್ಯಾಪಾರೀ ಸಂಸ್ಕೃತಿಯ ದೋಷಗಳಾದ ವ್ಯಾಪಕವಾದ ಕ್ರೌರ್ಯ, ಅಸಮರ್ಪಕ ಮಾನವ ಸಂಬಂಧಗಳು, ಮದ್ಯ–ಮಾದಕ ದ್ರವ್ಯ ವ್ಯಸನಿಗಳು, ಅತಿ ಹೆಚ್ಚಿನ ಪ್ರಮಾಣದ ವಿವಾಹ ವಿಚ್ಛೇದನ, ವಯಸ್ಸಾದ ತಂದೆ–ತಾಯಿಯರ ಬಗ್ಗೆ ಇರುವ ಅಸಡ್ಡೆ, ವ್ಯಾಪಕ ಪರಿಸರ ಮಾಲಿನ್ಯ ಇತ್ಯಾದಿಗಳು ಇಂಥವರಿಗೆ ಕಾಣುವುದಿಲ್ಲ ಅಥವಾ ಅವು ತಾಕ್ಷಣಿಕ ಪ್ರಯೋಜನಗಳ ಮಧ್ಯೆ ಮುಖ್ಯವೆನಿಸುವುದಿಲ್ಲ. ಭಾರತದ ಸಾಧಾರಣ ಜನತೆಗೆ ಮತ್ತು ಆಳುವ ವರ್ಗದ ಅನೇಕರಿಗೆ ಕೂಡ ಇವುಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇಲ್ಲ. ಆದ್ದರಿಂದಲೇ ನಾವು ದೊಡ್ಡ ಪ್ರಮಾಣದಲ್ಲಿ ಅಲ್ಲಿಯ ವ್ಯಾಪಾರೀ ಸಂಸ್ಕೃತಿಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ.

## ವಸ್ತುಗಳಿಗೆ ಅತಿ ಪ್ರಾಧಾನ್ಯತೆ ಮತ್ತು ಕಮರಿದ ಮಾನವ ಸಂಬಂಧಗಳು:



ಅಮೇರಿಕದಲ್ಲಿ ವ್ಯಾಪಾರೀ ಸಂಸ್ಕೃತಿಯು ಅಲ್ಲಿಯ ಜನಜೀವನದ ಮೇಲೆ ಆಳವಾದ ಅನೇಕ ಕೆಟ್ಟ ಪರಿಣಾಮಗಳನ್ನುಂಟು ಮಾಡಿದೆ. ಕೈಗಾರಿಕೋದ್ಯಮಿಗಳು ತಮ್ಮ ಸರಕುಗಳನ್ನು ಮಾರಾಟ ಮಾಡಲು ಜಾಹೀರಾತುಗಳ ಮೂಲಕ ಜನರ ಮನಸ್ಸಿನಲ್ಲಿ ಹಣಸಂಪಾದನೆ ಮಾಡುವುದು ಮತ್ತು ವಸ್ತುಗಳನ್ನು ಕೊಳ್ಳುವುದೇ ಜೀವನದಲ್ಲಿ ಸುಖ–ಸಂತೋಷಗಳನ್ನು ಪಡೆದುಕೊಳ್ಳುವುದಕ್ಕೆ ಅತ್ಯಂತ ಮುಖ್ಯವಾದದ್ದು ಎಂಬ ಗಾಢವಾದ ನಂಬಿಕೆಯನ್ನು ಬಿತ್ತಿ ಬೆಳೆಸಿವೆ. ಹಾಗೆ ಮಾಡುವುದಕ್ಕೆ ಬಹುತೇಕ ಜನಗಳು ತಮ್ಮ ಜೀವನದಲ್ಲಿ ಬೆಳಗಿನಿಂದ ಸಂಜೆಯವರೆಗೆ ಎರಡು–ಮೂರು ಕೆಲಸಗಳಲ್ಲಿ ದುಡಿಯುತ್ತಾರೆ. ಹಾಗೆ ದುಡಿದು ಮನೆಗೆ ಬಂದರೆ, ತಮ್ಮ ಹೆಂಡತಿ–ಗಂಡ–ಮಕ್ಕಳು ಮತ್ತು ಇತರರ ಜತೆ ಅನ್ಯೋನ್ಯವಾದ, ಅಮೂಲ್ಯವಾದ, ಜೀವನದಲ್ಲಿ ಅತ್ಯಂತ ತೃಪ್ತಿ ಮತ್ತು ಆನಂದಗಳನ್ನು ಕೊಡುವ ಪ್ರೀತಿ–ವಿಶ್ವಾಸಪ್ರಧಾನವಾದ ಸಂಬಂಧಗಳನ್ನು ಬೆಳೆಸಿಕೊಳ್ಳುವುದಕ್ಕೆ ಬೇಕಾದ ಸಮಯ ಮತ್ತು ತಾಳ್ಮೆ ಇರುವುದಿಲ್ಲ. ಅಷ್ಟೇ ಅಲ್ಲ, ಅಂತಹ ಸಂಬಂಧಗಳ ಪ್ರಾಮುಖ್ಯತೆಯ ಬಗ್ಗೆ ಅಥವಾ ಸಾಧ್ಯತೆಯ ಬಗ್ಗೆ ಅವರಿಗೆ ಅರಿವೇ ಇರುವುದಿಲ್ಲ. ಹಣ ಸಂಪಾದನೆಗೆ ದುಡಿದ ಮೇಲೆ ತಮಗೆ ಉಳಿದಿರುವ ಅಲ್ಪ ಸಮಯದಲ್ಲಿ ಬಹು ಭಾಗವನ್ನು ತಮಗಿಷ್ಟವಾದ ಟೀವಿ ಕಾರ್ಯಕ್ರಮವನ್ನು ನೋಡುವುದರಲ್ಲಿ ಕಳೆದುಬಿಡುತ್ತಾರೆ. ಹಾಗಾಗಿ ಜನಗಳ ಮಧ್ಯೆ ಅರ್ಥಪೂರ್ಣ ಮತ್ತು ಆತ್ಮೀಯ ಸಂಬಂಧಗಳು ಬೆಳೆಯುವುದು ಅಲ್ಲಿ ತುಂಬಾ ಕಷ್ಟ. ಅಲ್ಲದೆ ತಮ್ಮ ಸರಕುಗಳನ್ನು ಹೆಚ್ಚು ಮಾರಾಟ ಮಾಡುವುದಕ್ಕೆ, ಹೊಸ ವಸ್ತುಗಳ ಬಗ್ಗೆ ಅತಿಯಾದ ವ್ಯಾಮೋಹ ಮತ್ತು ಹಳೆಯ ವಸ್ತುಗಳ ಬಗ್ಗೆ ಅಸಹನೆ ಮತ್ತು ತಾತ್ಸಾರ ಮುಂತಾದ ಜೀವನ ಧೋರಣೆಗಳನ್ನು ಜನಗಳಲ್ಲಿ ಉದ್ಯಮಿಗಳು ಮತ್ತು ಮಾರಾಟಗಾರರು ವ್ಯವಸ್ಥಿತವಾಗಿ ಬೆಳೆಸಿದ್ದಾರೆ. ಇದೇ ಪ್ರವೃತ್ತಿಯು ಮಾನವ ಸಂಬಂಧಗಳಿಗೂ ಸಹಜವಾಗಿ ವ್ಯಾಪಿಸಿಬಿಡುತ್ತದೆ. ಮದುವೆಯಾದ ಕೆಲವು ವರ್ಷಗಳಲ್ಲಿ ಹೆಂಡತಿ–ಗಂಡ ಹಳೆಯ ವಸ್ತುಗಳಂತಾಗಿ ಬಿಡುತ್ತಾರೆ. ಮನೆಯೊಳಗೆ ಮೇಕಪ್ ಮಾಡಿಕೊಳ್ಳದ, ಕೆದರಿದ ತಲೆಯ ಸಂಗಾತಿಗಿಂತ, ಮನೆಯ ಹೊರಗಡೆ ಮಿರಿಮಿರಿ ಮಿಂಚುವ ಹೊಸ ಸ್ನೇಹಿತ/ಸ್ನೇಹಿತೆ ಹೆಚ್ಚು ಆಕರ್ಷಕವಾಗುತ್ತಾರೆ. ಹಳೆಯ ವಸ್ತುಗಳನ್ನು ಬಿಟ್ಟು ಹೊಸ ವಸ್ತುಗಳನ್ನು ಕೊಳ್ಳುವ ಹಾಗೆ ಹಳೆಯ ಸಂಗಾತಿಯಿಂದ ವಿಚ್ಛೇದನ ಪಡೆದು ಹೊಸ ಸಂಗಾತಿಯನ್ನು ಪಡೆದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡು ಆಘಾತ ಮತ್ತು ನೋವುಗಳನ್ನು ಅನುಭವಿಸುವ



ಮಕ್ಕಳ ಸಂಖ್ಯೆ ಅಮೇರಿಕದಲ್ಲಿ ಅಪಾರ. ಅಲ್ಲಿಯ ಅನೇಕ ರಾಜ್ಯಗಳಲ್ಲಿ ವಿವಾಹ ವಿಚ್ಛೇದನದ ಪ್ರಮಾಣವು ಶೇಕಡ ೫೦ಕ್ಕಿಂತ ಹೆಚ್ಚು. ಉಳಿದ ಶೇಕಡ ೨೫ ರಷ್ಟು ಸಂಸಾರಗಳಲ್ಲಿ ಗಂಡ–ಹೆಂಡಿರು ಸುಖವಾಗಿಲ್ಲದಿದ್ದರೂ ಮಕ್ಕಳಿಗೋಸ್ಕರವೋ ಅಥವಾ ಬೇರೆ ಸಂಗಾತಿಯನ್ನು ಹುಡುಕಲು ತಾಳ್ಮೆ ಇಲ್ಲದ ಕಾರಣಕ್ಕೋ ಒಟ್ಟಿಗೆ ಇರುತ್ತಾರೆ!

ಹಳೆಯ ವಸ್ತುಗಳ ಬಗ್ಗೆ ಇರುವ ತಾತ್ಸಾರ ಮತ್ತು ಜಿಗುಪ್ಸೆಯ ಧೋರಣೆಯು ಸಾಧಾರಣ ಜನಗಳಲ್ಲಿ ತಮ್ಮ ತಂದೆ–ತಾಯಿಯರೊಡನೆ ಇರುವ ಸಂಬಂಧಕ್ಕೂ ಚೆಲ್ಲುತ್ತದೆ. ಅವರೂ ಹಳೆಯ ವಸ್ತುಗಳಂತೆಯೇ ಅಲ್ಲವೇ? ಅನೇಕ ಅಮೇರಿಕನ್ನರು ತಮ್ಮ ತಂದೆಯ ಬಗ್ಗೆ ಇತರರ ಜತೆ ಮಾತನಾಡುವಾಗ 'ಆತ ನನ್ನ ಹಳೆಯ ಮನುಷ್ಯ' ಎಂದು ಹೇಳುವುದು ಅತಿ ಸಾಮಾನ್ಯ. ತಂದೆ–ತಾಯಿಯರೂ ಕೂಡ ತಮ್ಮ ಬೆಳೆದ ಮಕ್ಕಳ ಜತೆ ಇರಲು ಬಯಸುವುದಿಲ್ಲ. ಅವರಿಗೂ ತಾವು ಹಳೆಯ 'ವಸ್ತುಗಳು', ಹೊಸ ವಸ್ತುಗಳಂತಿರುವ ಮಕ್ಕಳ ಜತೆ ವಾಸ ಮಾಡುವುದು ಕಷ್ಟ ಎಂಬ ಭಾವನೆಯು ಅಲ್ಲಿಯ ವಾತಾವರಣದಲ್ಲಿ ತಾನಾಗಿಯೇ ಬರುತ್ತದೆ. ಆದ್ದರಿಂದಲೇ ಅವರ ಇಳಿ ವಯಸ್ಸಿನಲ್ಲಿ ಅವರಿಗೆ ವೃದ್ಧಾಶ್ರಮಗಳೇ ಸ್ವಾಭಾವಿಕ ತಾಣಗಳಾಗಿಬಿಡುತ್ತವೆ.

## ಮಾದಕ ವಸ್ತುಗಳ ವ್ಯಸನಿಗಳು:

ಆತ್ಮೀಯ ಮಾನವ ಸಂಬಂಧದಿಂದ ದೊರಕುವ ಬಹುಕಾಲ ನಿಲ್ಲುವ ಆನಂದ–ತೃಪ್ತಿಗಳು ವಸ್ತುಗಳಿಂದ ದೊರಕುವುದು ಅಸಾಧ್ಯ ಆದ್ದರಿಂದಲೇ ಅವು ದೊರಕದೇ ಇರುವ ಅಮೇರಿಕನ್ನರಲ್ಲಿ ಅನೇಕರು ಮದ್ಯ ಮತ್ತು ಇತರ ಮಾದಕ ದ್ರವ್ಯಗಳಿಗೆ ಮೊರೆ ಹೋಗುತ್ತಾರೆ. ಟೀವಿ ಮತ್ತು ಇತರ ಮಾಧ್ಯಮಗಳಲ್ಲಿ ಪದೇ ಪದೇ ಲೈಂಗಿಕ ಅತ್ಯಾಚಾರ, ಕೊಲೆ ಮತ್ತು ಇತರ ಹಿಂಸಾತ್ಮಕ ದೃಶ್ಯಗಳನ್ನು ಮತ್ತೆ ಕೆಲವರು ಹೆಣ್ಣಿನ ಮೇಲೆ ಅತ್ಯಾಚಾರ ಮಾಡುವುದು, ಇತರ ಜನರನ್ನು ಹಣಕ್ಕಾಗಿ ಅಥವಾ ಕೊಲೆಯಿಂದ ದೊರಕುವ ವಿಕೃತವಾದ ಆನಂದಕ್ಕಾಗಿ ಕೊಲೆಮಾಡುವುದು, ಅಮಾಯಕರನ್ನು ಹಿಂಸಿಸುವುದು ಇತ್ಯಾದಿ ಮಾನವ ವಿರೋಧಿ ಕೃತ್ಯಗಳನ್ನು ಸದಾ ನೋಡುತ್ತಿರುವುದರಲ್ಲಿ ಆನಂದ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಒಂದು ವೈಜ್ಞಾನಿಕ ಸಮೀಕ್ಷೆಯ ಪ್ರಕಾರ ಅಮೆರಿಕದ ಸಾಧಾರಣ ಮಕ್ಕಳು ತಮ್ಮ ಮೊದಲ ೧೮ ವರ್ಷಗಳಲ್ಲಿ ಟೀವಿಯಲ್ಲಿ ಸುಮಾರು ೫೦೦೦ ಅತ್ಯಾಚಾರಗಳನ್ನೂ, ೫೦೦೦ ಕೊಲೆಗಳನ್ನೂ, ಮತ್ತು ೧೦೦೦೦ ಇತರ ಹಿಂಸಾತ್ಮಕ ದೃಶ್ಯಗಳನ್ನೂ ನೋಡುತ್ತಾರಂತೆ! ಅಮೇರಿಕದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು, ಅದಕ್ಕೆ ಪೂರಕವಾಗಿ ನಿರ್ಮಿಸುತ್ತಿರುವ ಹಿಂಸೆಯನ್ನು ವೈಭವೀಕರಿಸುವ ಸಿನಿಮಾಗಳು, ಟೀವಿ ದೃಶ್ಯಗಳು, ಇಂಟರ್‌ನೆಟ್‌ನಲ್ಲಿ ದೊರಕುವ ಹಿಂಸಾತ್ಮಕ ಆಟಗಳು ಮತ್ತು ದೃಶ್ಯಗಳು ಇತ್ಯಾದಿಗಳನ್ನು ಕಳೆದ ಎರಡು ಮೂರು ದಶಕಗಳಲ್ಲಿ ಬೆಂಗಳೂರಿನಂತಹ ನಗರಗಳಲ್ಲಿ ಜನಗಳು ಅಧಿಕ ಪ್ರಮಾಣದಲ್ಲಿ ನೋಡುತ್ತಿರುವುದರಿಂದ, ಅಲ್ಲಿ ಹಿಂದೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದ ಕೊಲೆ ಮತ್ತು ಹೆಣ್ಣಿನ ಮೇಲೆ ಅತ್ಯಾಚಾರ ಮಾಡುವವರ ಸಂಖ್ಯೆ ಈಗ ಅತಿಯಾಗಿ ಹೆಚ್ಚಾಗುತ್ತಿದೆ.

## ಕಡೆಗಾಲದಲ್ಲಿ ತಂದೆ–ತಾಯಿಯರ ದಯನೀಯ ಸ್ಥಿತಿ:

ಹಣ–ವಸ್ತುಗಳ ಸಂಪಾದನೆಯಲ್ಲಿ ಮುಳುಗಿ ತಮ್ಮ ಸಮಯವನ್ನೆಲ್ಲಾ ಅದಕ್ಕಾಗಿ ಮೀಸಲಿಡುವ ಅಮೇರಿಕದ ಬಹುತೇಕ ತಂದೆ–ತಾಯಿಯರು ತಮ್ಮ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವುದಿಲ್ಲ. ತಂದೆ–ತಾಯಿಯರ ಗಮನ ಮತ್ತು ಪ್ರೀತಿ ಇಲ್ಲದೆ ಬೆಳೆದ ಮಕ್ಕಳಲ್ಲಿ ಅನಾಥ ಪ್ರಜ್ಞೆಯು ಸುಲಭವಾಗಿ ಬೆಳೆಯುತ್ತದೆ. ಮದ್ಯ–ಮಾದಕ ವಸ್ತುಗಳ ಮಾರಾಟಗಾರರ ಮತ್ತು ಜತೆಗಾರ ವ್ಯಸನಿಗಳ ಪ್ರಭಾವಕ್ಕೆ ಇಂತಹ ಮಕ್ಕಳು ಸುಲಭವಾಗಿ ಸಿಕ್ಕಿಹಾಕಿಕೊಳ್ಳುತ್ತಾರೆ. ಆದ್ದರಿಂದಲೇ, ಮಾದಕವಸ್ತುಗಳ ವ್ಯಸನಿಗಳಾಗಿರುವ ಮಕ್ಕಳ ಸಂಖ್ಯೆಯು ಅಲ್ಲಿಯ ಗ್ರಾಮಾಂತರ ಪ್ರದೇಶಗಳ ಪ್ರೈಮರಿ ಶಾಲೆಗಳಲ್ಲಿ ಕೂಡ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ! ಆದರೂ, ಕೆಲವು ತಂದೆ ತಾಯಿಯರು ಮಾತ್ರ ಪ್ರಜ್ಞಾಪೂರ್ವಕವಾಗಿ ವಸ್ತುಗಳ ಮತ್ತು ಹಣಸಂಪಾದನೆಯ ಬಗ್ಗೆ ಅತಿ ಹೆಚ್ಚು ಗಮನ ಕೊಡದೆ ತಮ್ಮ ಸಂಗಾತಿಗೆ ಮತ್ತು ಮಕ್ಕಳಿಗೆ ಹೆಚ್ಚು ಗಮನ ಕೊಟ್ಟು ಉತ್ತಮವಾದ ಮತ್ತು ಆತ್ಮೀಯವಾದ ಮಾನವ ಸಂಬಂಧಗಳನ್ನು ಬೆಳೆಸಿಕೊಳ್ಳುವುದೂ ಉಂಟು.

## ಮಕ್ಕಳ ಮನಸ್ಸಿನ ಬೆಳವಣಿಗೆಯ ಮೇಲೆ ಹಾನಿಕರ ಪರಿಣಾಮಗಳು:

ಕೆಲವು ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಟೀವಿ–ಕಂಪ್ಯೂಟರ್ ಮುಂತಾದ ದೃಶ್ಯ ಮಾಧ್ಯಮಗಳನ್ನು ಹೆಚ್ಚು ಬಳಸುವ ಮಕ್ಕಳಲ್ಲಿ ವೈಚಾರಿಕ ಶಕ್ತಿ, ತಾಳ್ಮೆ, ದಯೆ, ಕ್ಷಮೆ, ಪ್ರೀತಿಸುವ ಶಕ್ತಿ, ಪ್ರಶಾಂತ ಮನಸ್ಥಿತಿ ಮುಂತಾದ ಗುಣಗಳನ್ನು ನಿರ್ಧರಿಸುವ ಮಿದುಳಿನ ಮುಂಭಾಗದ ಎಡಭಾಗವು ಚೆನ್ನಾಗಿ ಬೆಳೆಯುವುದಿಲ್ಲ. ಆದ್ದರಿಂದಲೇ ಅಮೆರಿಕದ ಅಂತಹ ಅನೇಕ ಮಕ್ಕಳಲ್ಲಿ ಈ ಸಕಾರಾತ್ಮಕ ಗುಣಗಳು ಬೆಳೆಯದೆ ಬದಲಿಗೆ ಬಹುಬೇಗ ಬರುವ ಕೋಪ, ಸ್ವಾರ್ಥ, ಕ್ರೌರ್ಯ ಇತ್ಯಾದಿ ನಕಾರಾತ್ಮಕ ಗುಣಗಳನ್ನು ಬೆಳೆಸುವ ಮಿದುಳಿನ ಬಲಭಾಗವು ಚೆನ್ನಾಗಿ ಬೆಳೆದಿರುತ್ತವೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಕೊಲೆಗಳು, ಆತ್ಮಹತ್ಯೆಗಳು, ಹಿಂಸಾತ್ಮಕ ಕೃತ್ಯಗಳು ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ.

## ಸಣ್ಣ ವ್ಯಾಪಾರಿಗಳ–ಉದ್ದಿಮೆದಾರರ ನಿರ್ನಾಮ:

ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡುವ ಶಕ್ತಿ ಉಳ್ಳವರು ಮೊದಮೊದಲು ಎಲ್ಲ ವಸ್ತುಗಳು ಒಂದೇ ಕಡೆ ಸಿಕ್ಕುವ ಬೃಹದಾಕಾರದ 'ಮಾಲ್'ಗಳನ್ನು ಸ್ಥಾಪಿಸಿ, ಅಲ್ಲಿ ವಸ್ತುಗಳ ಬೆಲೆಯನ್ನೂ ಬಹುಮಟ್ಟಿಗೆ ಇಳಿಸಿಬಿಡುತ್ತಾರೆ. ಅಷ್ಟು ಕಡಿಮೆ ಬೆಲೆಗೆ ಸಣ್ಣ ವ್ಯಾಪಾರಿಗಳು ಮತ್ತು ಉದ್ದಿಮೆದಾರರು ವಸ್ತುಗಳನ್ನು ಉತ್ಪಾದಿಸುವುದು ಅಥವಾ ಮಾರುವುದು ಅಸಾಧ್ಯವಾಗಿ ಕಾಲಕ್ರಮೇಣ ಅವರುಗಳು ದಿವಾಳಿಯಾಗಿ ತಮ್ಮ ಅಂಗಡಿಗಳನ್ನು ಅಥವಾ ಉದ್ಯಮಗಳನ್ನು ಮುಚ್ಚಿಬಿಡುತ್ತಾರೆ. ಇಂತಹ ಮುಚ್ಚಿರುವ ಅಂಗಡಿಗಳಿರುವ ಪೇಟೆಗಳ ನಿರ್ಜನ ಬೀದಿಗಳು ಅನೇಕ ಊರುಗಳಲ್ಲಿ ಅತಿ ಸಾಮಾನ್ಯ. ಅಮೇರಿಕದಲ್ಲಿ ಈಗ ಸಣ್ಣ ಉದ್ಯಮಗಳಿಗೆ ಅವಕಾಶಗಳು ಅತ್ಯಂತ ಕಡಿಮೆ.

## ಬಡವ ಬಲ್ಲಿದರ ನಡುವಿನ ಕಂದರ:

ಬಹುತೇಕ ಉದ್ಯಮಗಳು ಕೆಲವೇ ಕೋಟ್ಯಾಧಿಪತಿಗಳ ಅಧೀನದಲ್ಲಿವೆ. ಶೇಕಡ ೯೯ ಕ್ಕಿಂತ ಹೆಚ್ಚು ಜನ ಇವರುಗಳ ಅಧೀನದಲ್ಲಿ ಕೆಲಸ ಮಾಡುವವರು. ಹಲವು ವರ್ಷಗಳಿಗೊಮ್ಮೆ ಇಡೀ ಆರ್ಥಿಕ ವ್ಯವಸ್ಥೆಯು ಕುಸಿದು ಬಿದ್ದಾಗ ಲಕ್ಷಾಂತರ ಜನ ತಮ್ಮ ಕೆಲಸಗಳನ್ನು ಕಳೆದುಕೊಳುತ್ತಾರೆ. ತಮ್ಮ ಮನೆಗಳ ಮೇಲಿರುವ ಸಾಲಗಳನ್ನು ತೀರಿಸಲಾರದೆ, ಸಾಲಗಾರರಿಗೆ ಅಡವಿಟ್ಟಿರುವ ತಮ್ಮ ಮನೆಗಳನ್ನು ಕಳೆದುಕೊಂಡು ತಮ್ಮ ಹಳೆಯ ಕಾರುಗಳಲ್ಲೇ ವಾಸ ಮಾಡುತ್ತಿರುವುದನ್ನು ನಾನು ನೋಡಿದ್ದೇನೆ. ಅದೇ ಸಮಯದಲ್ಲಿ ಕೋಟ್ಯಾಧಿಪತಿಗಳು ತಮ್ಮ





ಐಶ್ವರ್ಯವನ್ನು ಮತ್ತೂ ಹೆಚ್ಚಿಸಿಕೊಳ್ಳುತ್ತಾರೆ. ಈಗಲೂ ಶಿಕಾಗೊ, ನ್ಯೂಯಾರ್ಕ್ ಮುಂತಾದ ಪಟ್ಟಣಗಳಲ್ಲಿ ಆರ್ಥಿಕವಾಗಿ ಅನುಕೂಲವಾಗಿರುವ ಜನಗಳು ಪಟ್ಟಣದ ಒಂದು ಭಾಗದಲ್ಲಿ ವಾಸಿಸುತ್ತಿದ್ದರೆ, ಆ ಭಾಗಕ್ಕೆ ಸೇರಿದಂತಿರುವ ಮತ್ತೊಂದು ಭಾಗದಲ್ಲಿ ಕಡುಬಡವರು ವಾಸಿಸುತ್ತಿರುತ್ತಾರೆ. ಬಡವರು ಉಳ್ಳವರಿಗೆ ತೊಂದರೆ ಕೊಡದಂತೆ ಪೋಲೀಸರು ಸಾಧ್ಯವಾದಷ್ಟು ರಕ್ಷಣೆ ಕೊಟ್ಟರೂ, ಉಳ್ಳವರು ನಿಶ್ಚಿಂತೆಯಿಂದ ಇರುವಂತಿಲ್ಲ. ಹೋದ ವರ್ಷದ ನನ್ನ ಅಮೆರಿಕಾ ಪ್ರವಾಸದಲ್ಲಿ, ಶಿಕಾಗೊ ನಗರದಲ್ಲಿ ನನ್ನ ಮಗಳು ವಾಸ ಮಾಡುತ್ತಿರುವ ಮನೆಯಿಂದ ಅರ್ಧ ಕಿಲೊಮೀಟರು ದೂರದಲ್ಲಿರುವ ಕರಿಯ ಜನಗಳ ವಾಸಸ್ಥಳಗಳ ಹತ್ತಿರಕ್ಕೂ ಸುಳಿಯುವುದು ಅಪಾಯಕರ ಎಂದು ನನ್ನ ಮಗಳು ಎಚ್ಚರಿಕೆ ಕೊಟ್ಟಿದ್ದಳು. ಎರಡು ವರ್ಷದ ಹಿಂದೆ ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದಾಗ ಅಲ್ಲಿಯ ಪರಿಸ್ಥಿತಿಯು ಇಷ್ಟೊಂದು ಕೆಟ್ಟಿರಲಿಲ್ಲ. ಏಕೆಂದರೆ, ಪ್ರತಿ ವರ್ಷ ಅಲ್ಲಿ, ಬಡವರ ಮತ್ತು ಐಶ್ವರ್ಯವಂತರ ಮಧ್ಯೆ ಇರುವ ಅಂತರ ಹೆಚ್ಚಾಗುತ್ತಿದೆ. ಇಂತಹ ಬಡ ಜನಗಳು ಹಣಕ್ಕಾಗಿ ಕಳ್ಳತನ ಮಾಡುವುದಲ್ಲದೆ, ಕೊಲೆ ಮಾಡುವುದಕ್ಕೂ ಹೇಸುವುದಿಲ್ಲ. ಹಾಗೆ ಮಾಡುವುದೇ ಅನೇಕರ ವೃತ್ತಿಯಾಗಿಬಿಟ್ಟಿದೆ.

## ಪರಿಸರ ಮಾಲಿನ್ಯ:

ಅಮೇರಿಕದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಹುತೇಕ ಉದ್ಯಮಗಳು ಖಾಸಗಿ ವಲಯದಲ್ಲಿವೆ. ಯಾವ ಖಾಸಗಿ ಉದ್ಯಮವಾದರೂ ಅವುಗಳ ಮುಖ್ಯ ಉದ್ದೇಶ ಹೇಗಾದರೂ ಏನಾದರೂ ಮಾಡಿ ಅತ್ಯಧಿಕ ಲಾಭ ಗಳಿಸುವುದು. ಅಲ್ಲದೆ, ಯಾವುದೇ ವಸ್ತುವಿನ ಉತ್ಪಾದನೆ ಮತ್ತು ಮಾರಾಟದಿಂದ ಅತಿ ಹೆಚ್ಚು ಲಾಭ ಪಡೆಯಬೇಕಾದರೆ ಅದನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಬೇಕು ಮತ್ತು ಮಾರಾಟ ಮಾಡಬೇಕು. ಆ ವಸ್ತುವು ಬಹುಕಾಲ ಬಾಳುವ ರೀತಿಯಲ್ಲಿ ಅದನ್ನು ವಿನ್ಯಾಸಗೊಳಿಸಿದರೆ ಅದು ಹೆಚ್ಚು ಮಾರಾಟವಾಗುವುದಿಲ್ಲ. ಹಾಗಾಗಿ ಅನೇಕ ವಸ್ತುಗಳ ಉತ್ಪಾದಕರು ಅವು ಹೆಚ್ಚು ಕಾಲ ಬಾಳದ ರೀತಿಯಲ್ಲಿ ಅವನ್ನು ವಿನ್ಯಾಸಗೊಳಿಸುತ್ತಾರೆ. ಅವು ಹೆಚ್ಚು ಆಕರ್ಷಕವಾಗುವುದಕ್ಕೆ ಅವುಗಳ ಉತ್ಪಾದನೆಯಲ್ಲಿ, ಮಾನವರ ಆರೋಗ್ಯಕ್ಕೆ ಮತ್ತು ಪರಿಸರಕ್ಕೆ ಹಾನಿಕರವಾದ ಅನೇಕ ರಾಸಾಯನಿಕಗಳನ್ನು ಬಳಸುತ್ತಾರೆ. ಇದರ ಮತ್ತು ರಾಸಾಯನಿಕ ಕೃಷಿಯ ಪರಿಣಾಮವಾಗಿ ಸಾವಿರಾರು ಜನಗಳಿಗೆ ಕ್ಯಾನ್ಸರುಗಳು, ಅಲರ್ಜಿಗಳು ಮತ್ತು ಮತ್ತು ಅಂಗವಿಕಲ ಮಕ್ಕಳ ಜನನಕ್ಕೆ ಕಾರಣವಾಗುತ್ತಿವೆ. ಇಂತಹ 'ಅಭಿವೃದ್ಧಿ' ಚಟುವಟಿಕೆಗಳಿಂದ ಕೆಲವರು ಮಾತ್ರ ಹೆಚ್ಚು ಲಾಭ ಗಳಿಸಿಕೊಂಡು ಶ್ರೀಮಂತರಾಗುತ್ತಾರೆ. ಆದರೆ ಲಕ್ಷಾಂತರ ಜನಗಳು ಬಡವರಾಗಿಯೇ ಉಳಿದು, ಅವರ ಆರೋಗ್ಯ ಹಾಳಾಗಿ ಅವರ ಜೀವನ ನರಕಮಯವಾಗುತ್ತಿದೆ.

ಅಮೇರಿಕದಲ್ಲಿ ಪ್ರತಿ ವರ್ಷ ಲಕ್ಷಾಂತರ ಹಳೆಯ ಕಾರುಗಳು, ಕೋಟ್ಯಾಂತರ ಹಳೆಯ ಟೈರುಗಳು, ಬಾಟಲುಗಳು, ಹಲವಾರು ಕೋಟಿ ಟನ್ನುಗಳಷ್ಟು ಕೈಗಾರಿಕೆಗಳಿಂದ ಹೊರಬರುವ ಹೊಗೆ, ಲಕ್ಷಾಂತರ ಟನ್ನು ಕೀಟನಾಶಕಗಳು, ವಿಕಿರಣ ವಸ್ತುಗಳು, ಪಾದರಸ, ಆರ್ಸೆನಿಕ್ ಧಾತು, ನೈಟ್ರೇಟುಗಳು, ಪರಿಸರದಲ್ಲಿ ಎಂದೆಂದೂ ನಾಶವಾಗದೆ ಉಳಿದುಕೊಳ್ಳುವ ಡಿಟರ್ಜೆಂಟುಗಳು, ಪ್ಲಾಸ್ಟಿಕ್ ಪದಾರ್ಥಗಳು ಇತ್ಯಾದಿಗಳು ಬೃಹತ್ ಪ್ರಮಾಣದಲ್ಲಿ ಪರಿಸರವನ್ನು ಕಲುಷಿತಗೊಳಿಸುತ್ತಿವೆ. ಅಲ್ಲದೆ, ಗಾಳಿಯಲ್ಲಿ ಅನೇಕ ಕೈಗಾರಿಕೆಗಳಿಂದ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಇಂಗಾಲದ ಮತ್ತು ಇತರ ಧಾತುಗಳ ಆಕ್ಸೈಡುಗಳು ಭೂಮಿಯ ತಾಪಮಾನವನ್ನು ಹೆಚ್ಚಿಸಿ, ಉತ್ತರ ಮತ್ತು ದಕ್ಷಿಣ ಧೃವಗಳಲ್ಲಿ ಮತ್ತು ಹಿಮಾಲಯ ಮುಂತಾದ ಪರ್ವತಗಳಲ್ಲಿ ಶೇಖರವಾಗಿರುವ ಮಂಜುಗೆಡ್ಡೆಯ ಪರ್ವತಗಳನ್ನು ಕರಗಿಸಿ ಸಮುದ್ರಗಳ ನೀರಿನ ಮಟ್ಟವನ್ನು ಹೆಚ್ಚಿಸುತ್ತಿವೆ.

ವಿಜ್ಞಾನಿಗಳ ಪ್ರಕಾರ, ಭೂಮಿಯ ತಾಪಮಾನವು ಹೀಗೆಯೇ ಹೆಚ್ಚುತ್ತಿದ್ದರೆ, ಮುಂದಿನ ಎರಡು–ಮೂರು ದಶಕಗಳಲ್ಲಿ, ಸಮುದ್ರ ಮಟ್ಟದಲ್ಲಿರುವ ಅನೇಕ ಜನಭರಿತ ಪಟ್ಟಣಗಳು ಮತ್ತು ದ್ವೀಪಗಳು ಮುಳುಗಿ ಹೋಗಿ ಲಕ್ಷಾಂತರ ಜನಗಳು ನಿರ್ವಸಿತರಾಗುತ್ತಾರೆ. ಇಂಗಾಲದ ಆಕ್ಸೈಡುಗಳನ್ನು ಹೀರಿಕೊಳ್ಳುತ್ತಿದ್ದ ಲಕ್ಷಾಂತರ ಎಕರೆ ಕಾಡುಗಳು ನಾಶವಾಗಿರುವುದರಿಂದ ಕೂಡ, ಗಾಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ತುಂಬಿಕೊಳ್ಳುತ್ತಿರುವ ಕೆಲವು ಅನಿಲಗಳು ಮಳೆಯ ನೀರಿನಲ್ಲಿ ಕರಗಿ, ಆಮ್ಲಗಳು ತುಂಬಿದ ಮಳೆ ಸುರಿದು, ಭೂಮಿಯ ತಾಪಮಾನ ಹೆಚ್ಚುತ್ತಿದೆ. ಪರಮಾಣು ಕೈಗಾರಿಕೆಯಲ್ಲಿ ಪ್ರಪಂಚದಾದ್ಯಂತ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಪ್ಲುಟೋನಿಯಂ ಎಂಬ ಧಾತುವು ಇದುವರೆಗೆ ಪ್ರಪಂಚದಲ್ಲಿ ಪ್ರಾಕೃತಿಕವಾಗಿ ಗಣನೀಯ ಪ್ರಮಾಣದಲ್ಲಿ ಇರದೇ ಇದ್ದ ಅತ್ಯಂತ ವಿಷಪ್ರಾಯ ವಸ್ತು. ಐದು ಕೇಜಿ ಪ್ಲುಟೋನಿಯಂ ಧಾತುವು ಪ್ರಪಂಚದ ಎಲ್ಲ ಜನರ ದೇಹಗಳಿಗೂ ಸಮನಾಗಿ ಸೇರಿದರೆ ಅದು ಎಲ್ಲರನ್ನೂ ಕೊಲ್ಲುವಷ್ಟು ವಿಷಕಾರಕ ವಸ್ತು. ಇದು ಈಗ ಸುಮಾರು ೩೦೦೦ ಟನ್ನುಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಪಂಚದ ಅನೇಕ ದೇಶಗಳಲ್ಲಿ ಶೇಖರವಾಗಿದೆ! ಭಯೋತ್ಪಾದಕ ಉಗ್ರರ ಕೈಗೆ ಇದು ಸಿಕ್ಕದಂತೆ ತಡೆಯುವುದು ಸುಲಭವಲ್ಲ.

## ರಾಜಕೀಯದ ಮೇಲಾಗುವ ಪರಿಣಾಮಗಳು:

ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಐಶ್ವರ್ಯದ ಬಲದಿಂದ ತಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸಿದ ಸರ್ಕಾರಗಳನ್ನು ಈಜಿಪ್ಟ್, ಇಂಡೊನೇಷಿಯ, ಲಿಬ್ಯ, ಇರಾಕ್, ಚಿಲಿ, ಡಾಮಿನಿಕನ್ ರಿಪಬ್ಲಿಕ್ ಇತ್ಯಾದಿ ದೇಶಗಳಲ್ಲಿ ಉರುಳಿಸಿ, ತಮಗೆ ಬೇಕಾದ, ತಮ್ಮ ಹಿತಾಸಕ್ತಿಗಳನ್ನು ಕಾಯುವ ಸರ್ಕಾರಗಳನ್ನು ರಚಿಸಿಕೊಂಡಿವೆ. ಭಾರತದಲ್ಲಿ ಕೂಡ, ಕೇಂದ್ರದಲ್ಲಿ ಇದುವರೆಗೆ ಅಧಿಕಾರದಲ್ಲಿದ್ದ ಬಹುತೇಕ ಸರ್ಕಾರಗಳು ಬಹುರಾಷ್ಟ್ರೀಯ ಕಂಪನಿಗಳ ಸೇವಕರಾಗಿಯೇ ಕೆಲಸ ಮಾಡಿವೆ. ಈ ಪರಿಣಾಮಗಳನ್ನು ತಪ್ಪಿಸಬೇಕಾದರೆ, ಇವೆಲ್ಲ ಪರಿಣಾಮಗಳ ಬಗ್ಗೆ ಅರಿವಿರುವ ಜನಗಳು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಕೊಳ್ಳಬೇಕು. ತಮಗೆ ಹಣ, ಮದ್ಯ ಇತ್ಯಾದಿ ಸವಲತ್ತುಗಳನ್ನು ಕೊಡುವವರಿಗೆ ಓಟು ಮಾಡದೆ ನಿಜವಾಗಿಯೂ ಜನತೆಯ ಸೇವಕರಾಗಿರುವ, ಅವರ ಹಿತವನ್ನು ಕಾಯುವ ಪ್ರತಿನಿಧಿಗಳನ್ನೆ ಚುನಾಯಿಸಬೇಕು. ಅಲ್ಲಿಯವರೆಗೆ, ಬಹುತೇಕ ಜನಗಳ ವಿರೋಧಿಗಳಾಗಿರುವ, ಬಹುರಾಷ್ಟ್ರೀಯ ಕಂಪನಿಗಳ ಹಿತ ಕಾಪಾಡುವ ಜನಪ್ರತಿನಿಧಿಗಳೇ ಹೆಚ್ಚು ಹೆಚ್ಚಾಗಿ ಆಯ್ಕೆಯಾಗಿ ಬರುತ್ತಾರೆ. ಬಡತನದ ನಿವಾರಣೆ, ಎಲ್ಲರಿಗೂ ಸಮಾನ ಅವಕಾಶಗಳು, ಪರಿಶುದ್ಧ ಪರಿಸರ ಇತ್ಯಾದಿಗಳು ಇರಬೇಕೆಂದು ನಂಬುವ ಸಮಾಜವಾದಿಗಳ ಕನಸುಗಳೆಲ್ಲ ಕನಸಾಗಿಯೇ ಉಳಿದುಕೊಳ್ಳುತ್ತವೆ. ಹಾಗಾಗಿ ಈಗ ದೇಶಾದ್ಯಂತ ಬೀಸತೊಡಗಿರುವ ರಾಜಕೀಯ ಬದಲಾವಣೆಯ ಗಾಳಿಗೆ ನಾವು ಸ್ಪಂದಿಸಬೇಕಿದೆ.

*

## ಸಮಕಾಲೀನ

# ಆಂ ಆದ್ಮಿ ಪಕ್ಷ ಎತ್ತ ಸಾಗಿದೆ?

(ಎರಡನೇ ಪುಟದಿಂದ)

ಈ ಸಂಬಂಧ ತಾನು ಈ ಮುನ್ನ ನಡೆಸಿದ ಚಳುವಳಿಗೆ ಬೆಂಬಲ ನೀಡದೆ ಪೂರ್ಣ ವಿದ್ಯುತ್ ಬಿಲ್ ಸಂದಾಯ ಮಾಡಿದವರಿಗೆ ನಿರಾಕರಿಸುವ ಮೂಲಕ ತನ್ನ ರಾಜಕೀಯ ಬಾಲಿಶತನವನ್ನು ಪ್ರದರ್ಶಿಸಿತು ಎಂದೇ ಹೇಳಬೇಕು. ಆದರೆ ಈ ತಪ್ಪುಗಳು ಅನುಭವದ ಮೂಲಕ ಸರಿ ಮಾಡಿಕೊಳ್ಳಬಹುದಾದ ತಪ್ಪುಗಳು. ಮುಖ್ಯ ಸಂಗತಿ ಎಂದರೆ ಈ ಪಕ್ಷ ಭ್ರಷ್ಟಾಚಾರದ ಹತ್ತಿರವೂ ಸುಳಿದಿಲ್ಲ. ಜಾತಿವಾದ, ಸ್ವಜನ ಪಕ್ಷಪಾತದ ಯಾವ ಆರೋಪಗಳಿಗೂ ಸಿಕ್ಕಿಲ್ಲ. ತಾನು ಘೋಷಿಸಿದ ಸರಳ ಜೀವನದ ಮೌಲ್ಯಗಳ ವಿಷಯದಲ್ಲಿ ರಾಜಿ ಮಾಡಿಕೊಂಡಿಲ್ಲ. ಇದೆಲ್ಲದರ ದ್ಯೋತಕವೆಂಬಂತೆ, ಮಾಜಿ ಕಾಂಗ್ರೆಸ್ಸಿಗನಾದ ಶಾಸಕನ ಹೊರತಾಗಿ ಈ ಪಕ್ಷದ ಎಲ್ಲ ೨೭ ಶಾಸಕರೂ ಪಕ್ಷಕ್ಕೆ ನಿಷ್ಠರಾಗಿದ್ದು, ವಿಧಾನ ಸಭೆಯನ್ನು ರಾಜ್ಯಪಾಲರು ವಿಸರ್ಜಿಸದೆ ಅಮಾನತ್ತಿನಲ್ಲಿಟ್ಟು ಹೊಸ ರಾಜಕೀಯ ಸಂಯೋಜನೆಗಳ ಸಾಧ್ಯತೆಗಳ ಪರಿಶೀಲನೆಯ ಹೆಸರಿನಲ್ಲಿ ರಾಜಕೀಯ ವ್ಯಾಪಾರದ ಅಂಗಡಿ ತೆರೆಯಲು ಅವಕಾಶ ಮಾಡಿಕೊಟ್ಟಿದ್ದರೂ, ಯಾರೊಬ್ಬರೂ ಯಾವ ರಾಜಕೀಯ ಆಮಿಷಕ್ಕೂ ಒಳಗಾಗಿದಿರುವುದು ಪಕ್ಷದ ತಾತ್ವಿಕ ತಳಪಾಯ ಭಾವನಾತ್ಮಕವಾಗಿಯಾದರೂ ಎಷ್ಟು ಭದ್ರವಾಗಿದೆ ಎಂಬುದನ್ನು ಸೂಚಿಸುತ್ತದೆ.

ಈ ಪಕ್ಷದ ಬಗೆಗಿರುವ ಒಂದು ಗಂಭೀರವಾದ ಅಸಮಧಾನವೆಂದರೆ ಇದಿನ್ನೂ ತನ್ನ ರಾಜಕೀಯ ಸೈದ್ಧಾಂತಿಕತೆಯನ್ನು ಸ್ಪಷ್ಟಪಡಿಸಿಲ್ಲ ಎಂಬುದು. ಅಂದರೆ ಕೃಷಿ, ಕೈಗಾರಿಕೆ, ವಿದೇಶೀ ಬಂಡವಾಳ ಕುರಿತ ತನ್ನ ನಿಲುವನ್ನಾಗಲೀ, ವಿದೇಶಾಂಗ ವ್ಯವಹಾರಗಳ ರಾಜಕೀಯ ನೀತಿಯನ್ನಾಗಲಿ ಅಥವಾ ಸಾಮಾಜಿಕ ನ್ಯಾಯ ಪರಿಕಲ್ಪನೆ ಕುರಿತ ತನ್ನ ಅಭಿಪ್ರಾಯವನ್ನಾಗಲಿ ಅದು ಈವರೆಗೆ ಪ್ರಕಟಿಸಿಲ್ಲ. ಯೋಗೇಂದ್ರ ಯಾದವ್, ಪ್ರೊ. ಆನಂದ ಕುಮಾರ್, ಪ್ರೊ. ಚಿನೋಯ್‌ರಂತಹ ರಾಜಕೀಯ ಚಿಂತಕರು; ಮೇಧಾ ಪಾಟ್ಕರ್, ಮಲ್ಲಿಕಾ ಸಾರಾಭಾಯಿರಂತಹ ಸಾಮಾಜಿಕ ಹೋರಾಟಗಾರರ ಮತ್ತು ರಾಜಮೋಹನ ಗಾಂಧಿ, ಶಿವ ವಿಶ್ವನಾಥನ್ ಮುಂತಾದ ಬುದ್ಧಿಜೀವಿ ಬೆಂಬಲಿಗರ ಬಳಗವನ್ನುಳ್ಳ ಆಪ್ ಏಕೆ ತನ್ನ ಸಮಗ್ರ ರಾಜಕೀಯ ನೀತಿಯನ್ನು ಘೋಷಿಸಿಲ್ಲ ಎಂಬುದು ಆಶ್ಚರ್ಯವನ್ನುಂಟು ಮಾಡುವ ಸಂಗತಿ. ಸ್ವತಃ ನಾನು ಕೇಜ್ರಿವಾಲ್‌ರಿಗೆ ಮತ್ತು ಯೋಗೇಂದ್ರ ಯಾದವ್ ಅವರಿಗೆ ಈ ಕುರಿತು ಹಲವು ಈ ಮೇಲ್ ಮತ್ತು ದೂರವಾಣಿ ಸಂದೇಶಗಳನ್ನು ಕಳಿಸಿರುವೆ.

ಅಂತಹ ನೀತಿ ನಿರೂಪಣೆಯ ಹೇಳಿಕೆ ಹೊರಬರುವವರೆಗೆ ಪಕ್ಷಕ್ಕೆ ಅಸಂದಿಗ್ಧ ಬೆಂಬಲ ಸೂಚಿಸುವುದು ಕೆಲವರಿಗೆ ಅಸಾಧ್ಯವಾಗಬಹುದು. ಏಕೆಂದರೆ ಈ ಪಕ್ಷ ಎಲ್ಲ ರೀತಿಯ ಜನರಿದ್ದ ಅಣ್ಣಾ ಹಜಾರೆ ಆಂದೋಲನದಿಂದ ಒಡೆದು ಬಂದದ್ದು. ನಿಜ.ಅಂಬಾನಿಯನ್ನು ಎದುರು ಹಾಕಿಕೊಂಡಿರುವುದು, ಮೋದಿಯ ರಾಜಕಾರಣಕ್ಕೆ ಸವಾಲೆಸೆದಿರುವುದು ಮತ್ತು ಶಾಂತಿಭೂಷಣ್ ಕಾಶ್ಮೀರದ ಮುಸ್ಲಿಂ ಪ್ರಜೆಗಳ ಬಗೆಗೆ ಮತ್ತು ಬಂಧನದಲ್ಲಿರುವ ಹಲವು ಜನಪರ



ಹೋರಾಟಗಾರರ ಮೂಲಭೂತ ಹಕ್ಕುಗಳಿಗಾಗಿ ನ್ಯಾಯಾಲಯಗಳಲ್ಲಿ ನಡೆಸಿರುವ ಕಾನೂನಿನ ಹೋರಾಟಗಳನ್ನು ಗಮನಿಸಿದಾಗ ಅದು ತನ್ನ ರಾಜಕೀಯ ನೀತಿಯ ಬಗ್ಗೆ ಒಂದು ಸ್ಥೂಲ ಸೂಚನೆ ನೀಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಭ್ರಷ್ಟತೆಯೇ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಅವನತಿಗೆ ಮುಖ್ಯ ಕಾರಣವೆಂದು ಗುರುತಿಸಿ, ರಾಜಕೀಯ ಅಧಿಕಾರದ ವಿಕೇಂದ್ರೀಕರಣವನ್ನು ಆಧರಿಸಿದ 'ಸ್ವರಾಜ್'ನ್ನು ತನ್ನ ಗುರಿಯನ್ನಾಗಿರಿಸಿಕೊಂಡಿರುವ ಅದರ ಈ ಎರಡು ಸಾರ್ವಜನಿಕ ನೀತಿ ಬದ್ಧತೆಗಳು ನಮ್ಮಲ್ಲಿ ಯಾವುದೇ ಗಂಭೀರ ಅನುಮಾನಗಳನ್ನು ಸದ್ಯಕ್ಕಾದರೂ ಹುಟ್ಟಿಸಬಾರದು. ಆದರೆ ಮುಖ್ಯ ಪ್ರಶ್ನೆ ಎಂದರೆ ಅದೇಕೆ ಅಂತಹ ನೀತಿ ನಿರೂಪಣೆಯನ್ನು ಸಾರ್ವಜನಿಕವಾಗಿ ಪ್ರಕಟಿಸುತ್ತಿಲ್ಲ ಎಂಬುದು.

ಅದೇನೇ ಇರಲಿ, ಬರೀ ಮಾತಾಡುವ, ನಾನಾಗಲೀ, ನೀವಾಗಲಿ ಮಾಡಲಾಗದ ಕೆಲಸವನ್ನು ಕೇಜ್ರಿವಾಲ್ ಮತ್ತು ಅವರ ಸಂಗಡಿಗರು ಮಾಡಿದ್ದಾರೆ. ಹೊಸ ರಾಜಕೀಯ ಸಂಸ್ಕೃತಿ ಬೆಳೆಸಲು ಸಾಧ್ಯವಾಗುವಂತಹ ಒಂದು ಅಪರೂಪದ ವೇದಿಕೆಯನ್ನು ಅವರು ನಿರ್ಮಿಸಿದ್ದಾರೆ. ಅದನ್ನು ವಿಶ್ವಾಸವಿಟ್ಟು ನೋಡೋಣ. ಅದಕ್ಕೆ ಸ್ಪಷ್ಟ ಮತ್ತು ಅಂತಿಮ ರೂಪ ಕೊಡುವಲ್ಲಿ ನಮ್ಮ ಪಾಲಿನ ಸಾಧ್ಯತೆಗಳನ್ನು ಪರಿಶೀಲಿಸೋಣ. ಅದೇ ಸದ್ಯಕ್ಕೆ ವಿವೇಕದ ಕ್ರಮ ಎನಿಸುವುದಿಲ್ಲವೇ? ಆಂ ಆದ್ಮಿ ಪಕ್ಷ ಕರ್ನಾಟಕದಲ್ಲೂ ತನ್ನ ಸಂಘಟನೆಯನ್ನು ಕಟ್ಟಿಕೊಂಡು ತನ್ನ ಪ್ರಭಾವ ಜಾಲವನ್ನು ವಿಸ್ತರಿಸುತ್ತಿದೆ. ನಾಡಿನ ಹಲವು ಪ್ರಮುಖ ಚಿಂತಕರು, ಹೋರಾಟಗಾರರು ಅದರ ಬಗೆಗೆ ಕುತೂಹಲ ತಾಳಿದ್ದಾರೆ;ಕೆಲವರು ನೇರ ಬೆಂಬಲ ವ್ಯಕ್ತಪಡಿಸಿದ್ದರೆ, ಇನ್ನು ಕೆಲವರು ಸಹಾನುಭೂತಿ ತೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪತ್ರಿಕೆ ಇಲ್ಲಿ ಆದ್ಮಿ ಪಕ್ಷ ಕುರಿತು ವಿವಿಧ ಪ್ರದೇಶಗಳ ಮತ್ತು ವಿವಿಧ ಕೇತ್ರಗಳ ಜನರು ರೂಪಿಸಿಕೊಂಡಿರುವ ಅಭಿಪ್ರಾಯಗಳನ್ನು ಮತ್ತು ಹುಟ್ಟಿಸಿಕೊಂಡಿರುವ ನಿರೀಕ್ಷೆಗಳನ್ನೂ ಸಂಗ್ರಹಿಸಿ ನೀಡುತ್ತಿದೆ. ಪಕ್ಷದ ನಾಯಕರು ಗಮನಿಸುವರೆಂದು ಆಶಿಸುತ್ತೇವೆ

–ಸಂಪಾದಕ

## ಬದಲಾವಣೆಯ ನಂಬಿಕೆ ಹುಟ್ಟಿಸಿರುವ ಭಿನ್ನ ಪಕ್ಷ

ಅಣ್ಣಾ ಹಜಾರೆಯವರು ಬಂದರು. ಭಾರತದಾದ್ಯಂತ ಮಲಗಿದ್ದ ಭಾರತೀಯ ಕುಂಭಕರ್ಣರನ್ನು ಬಡಿದೆಬ್ಬಿಸಿದರು. ಈ ಕೆಲಸ ನನಗೂ ನಾಗಭೂಷಣ ಅವರಿಗೂ ಸಾಧ್ಯವಾಗಿರಲಿಲ್ಲ. ಅಣ್ಣಾ ಹಜಾರೆಯವರು ಆಗಲೇ ಒಂದು ಸುತ್ತು ಭಾರತವನ್ನು ಸುತ್ತಿದ್ದರೆ ಅದರ ಪರಿಣಾಮವೇ ಬೇರೆ ಆಗುತ್ತಿತ್ತು. ಇರಲಿ.

ಜನತೆಯನ್ನು ಎಬ್ಬಿಸಲು ಸಹಕಾರಿಯಾದ ಕೇಜ್ರೀವಾಲ್ ಅವರು ಎದ್ದ ಜನರನ್ನು ಅವಲಂಬಿಸಿ ಸರ್ಕಾರದ ಭ್ರಷ್ಟಾಚಾರವನ್ನು ಕಡಿತಗೊಳಿಸಲು ಒಂದು ಪ್ರಯೋಗ ಮಾಡಲು ಒಳಗೇ ನಿಶ್ಚಯಿಸಿದರು. ಅದರ ಮುಂದಿನ ಹೆಜ್ಜೆಯಾಗಿ ಆಮ್ ಆದ್ಮಿ ಪಕ್ಷ ಹುಟ್ಟಿಕೊಂಡಿತು. ಇಡೀ ಭಾರತದಲ್ಲಿ ಯುವಕರು, ಅದರಲ್ಲೂ ಮುಖ್ಯವಾಗಿ ಐಟಿ, ಬಿಟಿ ಯುವಕರು ತಮ್ಮ ನೆಟ್‌ವರ್ಕ್ ಮೂಲಕ ಅದ್ಭುತ ಕೆಲಸ ಮಾಡಿದರು.



ಎಲ್ಲ ರಾಜಕೀಯ ಪಕ್ಷಗಳೂ ಚುನಾವಣೆಗೆ ನಿಲ್ಲಿಸುವವರನ್ನು ತಮ್ಮ ಪಕ್ಷದ ಅಭ್ಯರ್ಥಿ ಎಂದು ಗುರುತಿಸುತ್ತದೆ. ಇವರಿಗೆ ಮತದಾರರು ಮತ ನೀಡಿ ಗೆಲ್ಲಿಸುತ್ತಾರೆ. ಹೀಗೆ ಗೆದ್ದವರೆಲ್ಲಾ ಆಯಾ ಪಕ್ಷದ ಲೋಕಸಭಾ ಸದಸ್ಯರಾದ ಮೇಲೆ, ಪ್ರಜೆಗಳ ಪ್ರತಿನಿಧಿ ಎಲ್ಲಿ? ಕೇಜ್ರೀವಾಲರು ನಿಜವಾದ ಜನಪ್ರತಿನಿಧಿಗಳನ್ನು ನಿಲ್ಲಿಸಿ ಗೆಲ್ಲಿಸಬೇಕೆಂದು ಬಯಸಿದರು. ಪ್ರಯೋಗಾರ್ಥವಾಗಿ ದೆಹಲಿಯಲ್ಲಿ ನಿಜವಾದ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಯೋಗ ಮಾಡಿದರು. ಉಮೇದುದಾರರಾಗಬಯಸಿದ ಎಲ್ಲರನ್ನೂ ಜರಡಿ ಆಡಿ ಅಂತಿಮವಾಗಿ ಒಬ್ಬರನ್ನು ತಮ್ಮ ಅಭ್ಯರ್ಥಿ ಎಂದು ಘೋಷಿಸಿದರು.

ಚುನಾವಣೆ ನಡೆಯಿತು. ಭ್ರಷ್ಟಾಚಾರಕ್ಕೆ ಜನ ರೋಸಿಹೋಗಿದ್ದರು. ಆದ್ದರಿಂದ ಆಮ್ ಆದ್ಮಿ ಪಕ್ಷದಿಂದ ೨೮ ಜನ ಆರಿಸಿ ಬಂದರು. ಈಗ ಈ ಪ್ರಯೋಗವನ್ನು ಭಾರತದಾದ್ಯಂತ ಮುಂದುವರೆಸಲು ಕೇಜ್ರೀವಾಲ್ ಮನಸ್ಸು ಮಾಡಿದ್ದಾರೆ.

ಕೇಜ್ರೀವಾಲ್ ದೆಹಲಿ ಸರ್ಕಾರ ನಡೆಸುವಾಗ ಅನೇಕ ತಪ್ಪು ಹೆಜ್ಜೆಗಳನ್ನಿಟ್ಟಿದ್ದಾರೆ ನಿಜ. ಅಂಬೆಗಾಲಿಡುವ ಮಗು ತಪ್ಪು ಹೆಜ್ಜೆಗಳನ್ನು ಇಡುವುದು ಸಹಜ. ವಿರೋಧ ಪಕ್ಷಗಳು ೬೫ ವರ್ಷಗಳಿಂದ ಆಡಳಿತ ನಡೆಸಿ ಅನುಭವ ಪಡೆದಿದ್ದರೂ ಅವು ಇಂದಿಗೂ ಭ್ರಷ್ಟಾಚಾರದಲ್ಲಿ ಮುಳುಗಿ ಶುದ್ಧ ಆಡಳಿತ ಕೊಡಲು ಅಸಮರ್ಥವಾಗಿವೆ. ಕೋಟಿ ಕೋಟಿ ರೂಪಾಯಿಗಳನ್ನು ದೋಚಿವೆ. ಇವೆಲ್ಲಾ ಕೂಡಿಕೊಂಡು, ಈಗ ತಾನೇ ಹುಟ್ಟಿದ ಆಮ್ ಆದ್ಮಿ ಪಾರ್ಟಿಯ ಕಾಲೆಳೆಯುವ ಪ್ರಯತ್ನದಲ್ಲಿವೆ. ಸಸಿಯಾಗಿರುವಾಗಲೇ ಕಿತ್ತೆಸೆಯುವ ಪ್ರಯತ್ನ ಮಾಡುತ್ತಿವೆ.

ಒಟ್ಟಿನಲ್ಲಿ ಭ್ರಷ್ಟಾಚಾರದ ವಿರೋಧವಾಗಿ ಒಂದು ಹೊಸಗಾಳಿ ದೇಶದಾದ್ಯಂತ ಬೀಸುತ್ತಿದೆ. ಅದರಿಂದ ದೇಶದ ರಾಜಕೀಯದಲ್ಲಿ ಬದಲಾವಣೆಯನ್ನು ನಿರೀಕ್ಷಿಸಬಹುದೆಂದು ನನ್ನ ನಂಬಿಕೆ.

**–ಎಚ್.ಎಸ್. ದೊರೆಸ್ವಾಮಿ,**
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು

## ಅರ್ಥಪೂರ್ಣ ಕೆಲಸ; ಆದರೆ ಅನುಮಾನಗಳೂ ಇವೆ...

ಆಮ್ ಆದ್ಮಿ ಪಕ್ಷದ ಬಗ್ಗೆ ಬರೆಯುತ್ತಿರುವ ಈ ಟಿಪ್ಪಣಿ ನನಗೆ ಅನ್ನಿಸಿದ್ದರ ಆಧಾರದ ಮೇಲೆ ಅಂದರೆ impressionist ಆದ ಟಿಪ್ಪಣಿಯಾಗಿದೆ. ಎಎಪಿಯ ಪ್ರಣಾಳಿಕೆ ಹಾಗೂ ಸೈದ್ಧಾಂತಿಕ ಹೇಳಿಕೆಗಳನ್ನು ನಾನು ಈವರೆಗೆ ಅಧ್ಯಯನ ಮಾಡಿಲ್ಲ.

ಈ ಪಕ್ಷವು ವಿಶೇಷವಾಗಿ ಮಧ್ಯಮ ವರ್ಗದ ಶಿಕ್ಷಿತ ವ್ಯಕ್ತಿಗಳಿಗೆ ಮತ್ತು ಈಗ ಕ್ರಮೇಣವಾಗಿ ಇತರ ವರ್ಗದ ಜನರಿಗೆ ನಮ್ಮ ಬಿಕ್ಕಟ್ಟುಗಳಿಗೆ ಪರಿಹಾರವಾಗಿ ಕಾಣುತ್ತಿರುವುದಕ್ಕೆ ನಮ್ಮೆದುರಿಗೆ ಇರುವ ಬಿಕ್ಕಟ್ಟುಗಳ ಸ್ವರೂಪವೇ ಕಾರಣವಾಗಿದೆ. ಈ ಬಿಕ್ಕಟ್ಟುಗಳನ್ನು ಸಂಗ್ರಹವಾಗಿ ವಿವರಿಸುವುದಾದರೆ ಅವು ಪ್ರಜಾಪ್ರಭುತ್ವವಾದಿ ಆಶಯಗಳು ಹಾಗೂ ಸಂಸ್ಥೆಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿ ತಲುಪಿರುವ ಅಧೋಗತಿಯ ಬಿಕ್ಕಟ್ಟುಗಳಾಗಿವೆ. ಈ ಆಶಯಗಳು ಮರೆತುಹೋಗಿವೆ ಎನ್ನುವಷ್ಟರ ಮಟ್ಟಿಗೆ ಮೂಲೆಗೆ ತಳ್ಳಲ್ಪಟ್ಟಿವೆ. ಪ್ರಜಾಪ್ರಭುತ್ವದ ಸಂಸ್ಥೆಗಳು ತಮ್ಮ ಮೂಲ ಉದ್ದೇಶವನ್ನು ಕಳೆದುಕೊಂಡು ಬೇರೆ ಉದ್ದೇಶಗಳಿಗೆ ಕಬಳಿಕೆಯಾಗಿಬಿಟ್ಟಿವೆ. ಹೀಗಾಗಿ ಅವು ಪ್ರಜಾಪ್ರಭುತ್ವದ ಹೊರ ಆವರಣವನ್ನು ಹೊಂದಿದ್ದರೂ ಅವುಗಳ ಒಳಗಿನ ಹೂರಣ ಬೇರೆ ಇನ್ನೇನೋ ಆಗಿದೆ. ಈಗಿನ ಪರಿಸ್ಥಿತಿಯು ಆಳವಾಗಿ ಅಸ್ವಸ್ಥವಾಗಿರುವ ಸಮಾಜವೊಂದು ಅನೇಕ ಬಗೆಯ ಹಿಂಸೆಗಳ ಮೂಲಕ ತನ್ನ ಅವಸಾನದತ್ತ ತೆವಳುತ್ತಿರುವ ಸ್ಥಿತಿಯಾಗಿದೆ.

ಒಟ್ಟಾರೆಯಾಗಿ ಭಾರತದ ಸಂವಿಧಾನದ ಆಶಯವಾಗಿದ್ದ ಹಾಗೂ ಗಾಂಧೀಪ್ರೇರಿತ ಸ್ವಾತಂತ್ರ್ಯ ಚಳುವಳಿಯ ಆಶಯವಾಗಿದ್ದ ಸಮಾನತೆಗಳ ಪ್ರಜಾಪ್ರಭುತ್ವವಾದಿ ಪರಿಕಲ್ಪನೆಯೇ ನಾಶವಾಗಿದೆ. ಇದಕ್ಕೆ ಪೂರಕವಾಗಿ ಪ್ರಜಾಪ್ರಭುತ್ವದ ಸಂಸ್ಥೆಗಳಾದ ಚುನಾವಣೆ, ಶಾಸಕಾಂಗ, ಆಡಳಿತಾಂಗ, ನಾಗರೀಕರ ಸಮುದಾಯ ಇವೆಲ್ಲವೂ ತಮ್ಮ ಮೂಲಸತ್ವವನ್ನು ಕಳೆದುಕೊಂಡಿವೆ. ಆದ್ದರಿಂದಾಗಿ ಅವು ಬಂಡವಾಳಶಾಹಿಗಾಗಿ ದುಡಿಯುತ್ತಿರುವ ಸಂಸ್ಥೆಗಳಾಗಿ ಪರಿವರ್ತಿತವಾಗಿವೆ. ಹೀಗೆ ಆದಾಗ ಅನಿವಾರ್ಯವಾಗಿಯೇ ಹುಟ್ಟಿಕೊಳ್ಳುವ ಸಾಮಾಜಿಕ–ಸಾಂಸ್ಕೃತಿಕ ಅಸ್ವಸ್ಥತೆಯ ಎರಡು ಪ್ರಧಾನ ಲಕ್ಷಣಗಳೆಂದರೆ ಹಿಂಸೆ ಹಾಗೂ ಭ್ರಷ್ಟಾಚಾರ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಪರಿಹಾರಾತ್ಮಕ ರಾಜಕೀಯವು ಇವೆರಡು ಸಂಗತಿಗಳನ್ನು ತನ್ನ ಮುಖ್ಯ ಕ್ರಿಯಾಸೂಚಿಯಲ್ಲಿ ತರಬೇಕು.

ಆಮ್ ಆದ್ಮಿ ಪಕ್ಷವು ಭ್ರಷ್ಟಾಚಾರವನ್ನು ಬಹುದೊಡ್ಡದಾಗಿ ತನ್ನ ಕ್ರಿಯಾಸೂಚಿಯಲ್ಲಿ ತಂದಿರುವುದರಿಂದ ಅದು ಆಕರ್ಷಕವಾಗಿ ಕಾಣುತ್ತಿದೆ. ಇನ್ನುಳಿದ ಪ್ರತಿಯೊಂದು ರಾಜಕೀಯ ಪಕ್ಷವು ಭ್ರಷ್ಟಾಚಾರವು ಅನಿವಾರ್ಯವೆಂದು ಜನರನ್ನು ಒಪ್ಪಿಸುತ್ತಿದ್ದಾಗ ಅದು ಹಾಗಲ್ಲವೆಂದು ಹೇಳುವ ಮೂಲಕ ಮತ್ತು ಅದನ್ನು ತನ್ನ ಕ್ರಿಯಾಸೂಚಿಯಲ್ಲಿ ತರುವ ಮೂಲಕ ಎಎಪಿ ಒಂದು ಸಂಚಲನವನ್ನು ಉಂಟುಮಾಡಿದೆ.



ಎರಡನೇಯದಾಗಿ ಪ್ರಜಾಪ್ರಭುತ್ವದ ಮುಖ್ಯ ಸಂಸ್ಥೆಯಾದ ಚುನಾವಣಾ ವ್ಯವಸ್ಥೆಯನ್ನು ಭಾರತದ ಎಲ್ಲಾ ಪಕ್ಷಗಳು ವಿಕಾರಗೊಳಿಸಿಬಿಟ್ಟಿವೆ. ಬಲಿಷ್ಠವಾದ ಭ್ರಷ್ಟಾಚಾರ ರಾಜಕೀಯ ವರ್ಗವು ಚುನಾವಣೆಗಳಲ್ಲಿ ಜಾತಿ, ಹಣ ಹಾಗೂ ಹಿಂಸೆಯಿಲ್ಲದೇ ಗೆಲುವೇ ಸಾಧ್ಯವಿಲ್ಲವೆಂಬ ಪುರಾಣವನ್ನು ಸೃಷ್ಟಿಸಿದೆ. ಈ ಮಿಥ್ಯೆಯನ್ನು ಬಯಲಿಗೆಳೆದು ಚುನಾವಣೆಗೆ ಭ್ರಷ್ಟಾಚಾರ ಅನಿವಾರ್ಯವಲ್ಲವೆಂದು ಸಾಬೀತುಮಾಡುವುದರ ಮೂಲಕ ಈ ದುಷ್ಟ ರಾಜಕೀಯ ವರ್ಗದ ಬುಡವನ್ನೇ ಅಲ್ಲಾಡಿಸಿಬಿಟ್ಟಿದೆ. "ನಾವು ಎಷ್ಟೇ ಕೊಳಕರಾಗಿದ್ದರೂ ಚುನಾವಣಾ ರಾಜಕೀಯದಲ್ಲಿ ಗೆಲ್ಲುವವರು ನಾವೇ" ಎಂದು ಜನರನ್ನು ನಂಬಿಸಿ ಅವರನ್ನು ಸಿನಿಕರು ಹಾಗೂ ಭ್ರಷ್ಟರನ್ನಾಗಿಸಿದ್ದ ರಾಜಕೀಯವರ್ಗವು ನಮಗೆ ಅನಿವಾರ್ಯವಲ್ಲವೆನ್ನುವುದನ್ನು ತೋರಿಸಿದೆ. ಎಎಪಿಯ ಈ ಕೆಲಸವು ಅತ್ಯಂತ ಅರ್ಥಪೂರ್ಣವಾಗಿದೆ. ನನ್ನ ಅನುಮಾನಗಳು ಹೀಗಿವೆ. ಇಂದಿನ ಕಾಲದ ಭ್ರಷ್ಟಾಚಾರವು ಜಾಗತೀಕರಣಗೊಳ್ಳುತ್ತಿರುವ ಬಂಡವಾಳಶಾಹಿಗೆ ನೇರವಾಗಿ ಸಂಬಂಧಪಟ್ಟಿರುವಂಥದ್ದು. ಇತ್ತೀಚೆಗೆ ಸುದ್ದಿಯಾದ ಪ್ರತಿಯೊಂದು ಹಗರಣವೂ ರಾಜಕೀಯ ಪಕ್ಷಗಳು ಹಾಗೂ ಪ್ರಭುತ್ವವೇ (State) ಬಂಡವಾಳಶಾಹಿಗೆ ಅನುಕೂಲ ಮಾಡಿಕೊಡುವ ಕೆಲಸದಲ್ಲಿ ಹುಟ್ಟಿರುವಂಥ ಹಗರಣವಾಗಿದೆ. ಆದ್ದರಿಂದ ಇಂಥ ವಿಶಿಷ್ಟವಾದ ಭ್ರಷ್ಟಾಚಾರವನ್ನು ನೈತಿಕ ಆಕ್ರೋಶದಿಂದ ವಿರೋಧಿಸುವುದು ಅಸಾಧ್ಯ. ಈಗ ಭ್ರಷ್ಟಾಚಾರವನ್ನು ವಿರೋಧಿಸುವುದೆಂದರೆ ನೇರವಾಗಿ ಬಂಡವಾಳಶಾಹಿಯನ್ನು ವಿರೋಧಿಸುವುದಾಗಿದೆ. ಈವರೆಗೆ ಎಎಪಿ ಇಂಥ ಸೈದ್ಧಾಂತಿಕ ಸ್ಪಷ್ಟತೆಯನ್ನು ತೋರಿಸಿಲ್ಲ. ಬಂಡವಾಳಶಾಹಿಯನ್ನು ತಡೆಯುವ ತನ್ನ ಕಾರ್ಯಕ್ರಮಗಳನ್ನು ವಿವರಿಸಿಲ್ಲ. ಸದ್ಯದ ಸ್ಥಿತಿಯಲ್ಲಿ ಅದು ನೈತಿಕ ಆಕ್ರೋಶದ ಮಟ್ಟದಲ್ಲಿ ತನ್ನ ಪ್ರಭಾವವನ್ನು ಬೀರಿದೆ. ವೈಯಕ್ತಿಕವಾಗಿ ಬಂಡವಾಳಶಾಹಿಯ ವಿರುದ್ಧ long term politics ಮಾಡುವ ಸೈದ್ಧಾಂತಿಕ ಬದ್ಧತೆ ಇಲ್ಲದ ಯಾವುದೇ ಪಕ್ಷವು ತಾತ್ಕಾಲಿಕ ಪ್ರಭಾವ ಬೀರಿ ಸೋತುಹೋಗುತ್ತದೆ ಎಂದು ನಾನು ನಂಬಿದ್ದೇನೆ. ಆದರೆ ಭಾರತದ ಎಲ್ಲಾ ಸಾಮಾನ್ಯ ಪ್ರಜೆಗಳ ಹಾಗೆ ಎಎಪಿಗೆ ಇಂಥ ಸೈದ್ಧಾಂತಿಕ ಶಕ್ತಿ ಹಾಗೂ ರಾಜಕೀಯ ಕ್ರಿಯಾಶಕ್ತಿ ಬರಲಿ ಎಂದು ಆಶಿಸುತ್ತೇನೆ.

**–ರಾಜೇಂದ್ರ ಚೆನ್ನಿ**
ಅಧ್ಯಾಪಕರು ಮತ್ತು ಸಂಸ್ಕೃತಿ ಚಿಂತಕರು

# ದೆಹಲಿಯಲ್ಲಿ ಹಿನ್ನಡೆಯಾಗಿದೆ; ಆದರೆ ಕಾಲ ಮಿಂಚಿಲ್ಲ...

ಸ್ವಾತಂತ್ರ್ಯ ನಮ್ಮ ದೇಶಕ್ಕೆ ಬರುವ ಮೊದಲು ಗಾಂಧೀಜಿಯವರು ಹೇಳುತ್ತಿದ್ದುದು ಏನಂದ್ರೆ, ಕಾಂಗ್ರೆಸ್ ಪಕ್ಷ ಕೇವಲ ಭಾರತಕ್ಕೆ ಸ್ವಾತಂತ್ರ್ಯ ತರುವುದಕ್ಕೆ ನಡೆಸುತ್ತಿರುವ ಸತ್ಯಾಗ್ರಹ, ಹೋರಾಟಕ್ಕೆ ಮಾತ್ರ. ಎಂದು. ಸ್ವಾತಂತ್ರ್ಯ ಬಂದ ನಂತರ ಈ ಕಾಂಗ್ರೆಸ್ಸನ್ನು ವಿಸರ್ಜಿಸಿ ದೇಶದ ಆಡಳಿತಕ್ಕೆ ಬೇರೆಯೇ ಒಂದು ರಾಜಕೀಯ ಪಕ್ಷವನ್ನು ರಚಿಸಿಕೊಂಡು ಸರ್ಕಾರವನ್ನು ರಚಿಸಿಕೊಳ್ಳಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಆದರೆ ನೆಹರೂ ಮುಂತಾದ ಮುಖಂಡರು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ತಕ್ಷಣ ಗಾಂಧೀಜಿಯವರನ್ನು ಕತ್ತಲೆಯಲ್ಲಿ ಇರಿಸಿ ತಾವು ತಮಗೆ ತಿಳಿದಂತೆ ಹಳೆಯ ಕಾಂಗ್ರೆಸ್ಸನ್ನೇ ರಾಜಕೀಯ ಪಕ್ಷ ಎಂದು ಹೇಳುತ್ತ ಸರ್ಕಾರವನ್ನೂ ರಚಿಸಿಕೊಂಡು ಗಾಂಧೀಜಿ ಹೇಳಿದ ಮಾತನ್ನು ಮರೆತುಬಿಟ್ಟರು.

ಸ್ವಾತಂತ್ರ್ಯ ಬಂದು ೬೭ ವರ್ಷ ಕಳೆದರೂ ಗಾಂಧೀಜಿ ಹೇಳಿದ್ದನ್ನು ನಮ್ಮ ದೇಶದ ರಾಜಕೀಯ ಮುತ್ಸದ್ದಿಗಳು ಮರೆತ ಮುಖ್ಯ ವಿಷಯವನ್ನು ನೆನಪಿಸಿಕೊಂಡು ಅಣ್ಣಾ ಹಜಾರೆಯವರ ಚಳುವಳಿಯ ಪ್ರೇರಣೆಯಿಂದ ಅರವಿಂದ್ ಕೇಜ್ರೀವಾಲ್ ಮುಂತಾದ ಯುವಕರ ಗುಂಪೊಂದು ದೆಹಲಿಯಲ್ಲಿ ಆಂ ಆದ್ಮಿ ಪಕ್ಷವೆಂಬ ಹೆಸರಿನಲ್ಲಿ ಪೊರಕೆಯನ್ನು ಚುನಾವಣಾ ಗುರುತಾಗಿ ಇಟ್ಟುಕೊಂಡು ದೆಹಲಿಯಲ್ಲಿ ಸಾಮಾನ್ಯ ಜನರ, ಬಡವರ ಓಟಿನಿಂದ ಗೆದ್ದು ಕಾಂಗ್ರೆಸ್ಸಿನಲ್ಲಿ ನಡುಕ ಹುಟ್ಟಿಸಿದ್ದಾರೆ. ಆದರದು ಖಚಿತ ಬಹುಮತವಿಲ್ಲದೆ ಕೇವಲ ೪೮ ದಿನದಲ್ಲಿ ಜನಲೋಕಪಾಲ್ ಮಸೂದೆಗೆ ಮಹತ್ವ ಸಿಗುತ್ತಿಲ್ಲ, ಕಾಂಗ್ರೆಸ್ಸಿಗರಿಂದ ಎಎಪಿ ಪಕ್ಷಕ್ಕೆ ಹಿನ್ನಡೆಯಾಗುತ್ತಿದೆ, ಹಳೆಯ ಕಾಂಗ್ರೆಸ್ ಚಾಳಿಗಳನ್ನು ಬೆಳೆಸಲು ಅವಕಾಶಗಳಾಗುತ್ತಿದೆ, ನಾನಿದನ್ನು ಸಹಿಸಲಾರೆನೆಂದು ದೆಹಲಿ ರಾಜ್ಯ ಸರ್ಕಾರ ರಾಜೀನಾಮೆ ಸಲ್ಲಿಸಿದೆ. ಇದೊಂದು ದೊಡ್ಡ ಆದರ್ಶ.

ಆದರೆ ಇಡೀ ದೇಶವನ್ನು ಮುಂದಿನ ಅಸೆಂಬ್ಲಿ ಚುನಾವಣೆ ಹೊತ್ತಿಗೆ ವ್ಯಾಪಿಸಬೇಕಾಗಿರುವ ಎಎಪಿ ಪಕ್ಷಕ್ಕೆ ಇದರಿಂದ ವ್ಯಾವಹಾರಿಕವಾಗಿ ಹಿನ್ನಡೆಯೇ ಆಗಿದೆ. ನಗರ ಪ್ರದೇಶಕ್ಕೆ ಸೀಮಿತಗೊಳಿಸಿಕೊಂಡಂತೆ ಎಎಪಿ ಪಕ್ಷ ಬೆಳೆದಿದೆಯೇ ಹೊರತು ಕೃಷಿ ಪ್ರಧಾನವಾದ, ರೈತರೇ ಹೆಚ್ಚಾಗಿರುವ ಭಾರತ ದೇಶಕ್ಕೆ ಹೊಂದುವ ರಾಜಕೀಯ ಪಕ್ಷವಾಗಿ ಇನ್ನೂ ಬೆಳೆಯಬೇಕಾಗಿದೆ. ಹಾಗೆ ಬೆಳೆಸುವ ಚಾಣಾಕ್ಷತೆ ಈ ಪಕ್ಷದ ಮುಖಂಡರಲ್ಲಿ ಕಂಡುಬರುತ್ತಿಲ್ಲ. ಜನಲೋಕಪಾಲ್ ಮಸೂದೆ, ಮತದಾರರೇ ತಾವು ಆರಿಸಿದ ಪ್ರತಿನಿಧಿಗಳನ್ನು (ರೈಟ್ ಟು ರಿಕಾಲ್) ವಾಪಸ್ ಕರೆಸುವ ಅಧಿಕಾರ, ಇವೆಲ್ಲವನ್ನೂ ದೆಹಲಿ ಸರ್ಕಾರ ಅಧಿಕಾರದಲ್ಲಿದ್ದುಕೊಂಡೇ, ಸಂಸತ್ ಚುನಾವಣೆ ಮುಗಿಯುವವರೆಗೆ ಪ್ರಚಾರದಲ್ಲಿಟ್ಟೇ, ದೆಹಲಿಯಲ್ಲಿ ಗೆದ್ದಂತೆ ಭಾರತದಾದ್ಯಂತ ಅದು ಗೆದ್ದು ಸಂಸತ್ತಿಗೆ ಪ್ರವೇಶ ಪಡೆಯಬೇಕಿತ್ತು. ಇನ್ನೆರಡು ತಿಂಗಳು ತಡೆಯಬಹುದಿತ್ತು. ಒಂದು ಸಾರಿಯಾದ ಹಿನ್ನಡೆ ಮತ್ತೆ ಚುರುಕುಗೊಳ್ಳಲು ತುಂಬಾ ಕಷ್ಟವಾಗುತ್ತದೆ.



ಕರ್ನಾಟಕಕ್ಕೆ ಅನ್ವಯಿಸಿದರೆ ಎಎಪಿಯ ಪ್ರತಿ ಜಿಲ್ಲಾವಾರು ತಂಡದ ರಚನೆ ತುಂಬಾ ನಿಧಾನಗತಿಯಲ್ಲಿ ಸಾಗಿದೆ. ದೆಹಲಿಯಲ್ಲಿ ನಡೆದಂತೆ ಅತ್ಯಲ್ಪ ಸಮಯದಲ್ಲಿ ಹಳೆಯ ರಾಜಕೀಯದ ಕೆಟ್ಟ ಚಾಳಿಗಳನ್ನು ಬಿಟ್ಟು ಬರುವುದು ಕೃಷಿಕ್ಷೇತ್ರದ ಮತದಾರರಿಗೆ ಕಷ್ಟಸಾಧ್ಯವಾಗುತ್ತದೆ. ಯಾವುದೇ ಹೊಸ ಸುದ್ದಿ ಹಳ್ಳಿಯಿಂದ ಹಳ್ಳಿಗೆ ಹಬ್ಬುವುದಕ್ಕೆ ಮತ್ತು ಆ ಜನ ಸಮೂಹ ಅರ್ಥಮಾಡಿಕೊಳ್ಳಲು ನಿಧಾನವಾಗುತ್ತದೆ. ಈಗ ನಮಗಿರುವ ಸಮಯ ಕಡಿಮೆ. ಆದ್ದರಿಂದ ಕಾರ್ಯಕರ್ತರು ಹೆಚ್ಚಾಗಿ ಶ್ರಮಿಸಬೇಕಾಗುತ್ತದೆ. ಸದ್ಯಕ್ಕೆ ಎಎಪಿಯಲ್ಲಿ ಈ ಗುಣಲಕ್ಷಣಗಳು ಕಂಡುಬರುತ್ತಿಲ್ಲ.

ಈಗಲೂ ಕಾಲ ಮಿಂಚಿಲ್ಲ. ಉಳಿದ ಹಳೆಯ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಕಾರ್ಯಕ್ರಮದ ರೀತಿ ನೀತಿಗೂ ಹೊಸ ಪಕ್ಷ ಎಎಪಿಯ ನೀತಿಗೂ ವ್ಯತ್ಯಾಸವಿರಬೇಕು. ಈಗಿರುವ ರಾಜಕೀಯ ಪಕ್ಷಗಳ ತಂತ್ರಗಾರಿಕೆ ಹಣದ ಮೇಲೆ, ಜಾತಿಯ ಮೇಲೆ ನಿಂತಿದೆ. ಎಎಪಿ ಕಾರ್ಯಕರ್ತರು ಇದಕ್ಕೆ ಸಂಪೂರ್ಣ ಭಿನ್ನವಾಗಿರಬೇಕು. ಆಯಾಯಾ ನಿಟ್ಟಿನ ಪ್ರಚಾರಕರು, ಮುಖ್ಯಸ್ಥರು ದಿನನಿತ್ಯ ಅನುಕೂಲವಾದ ಒಂದು ಪ್ರದೇಶದಲ್ಲಿ ಸೇರಿ ಸರಿ, ತಪ್ಪುಗಳನ್ನು ತಿಳಿದುಕೊಳ್ಳುವಂತಿರಬೇಕು.

ಶಿವಮೊಗ್ಗಾ ಜಿಲ್ಲೆಯನ್ನೇ ನಾನು ನೋಡಿರುವಂತೆ ಈ ಪಕ್ಷದ 'ನೆಟ್‌ವರ್ಕ್' ಇನ್ನೂ ಸರಿಯಾಗಿ ರಚನೆಯಾಗಿಲ್ಲ. ಕಾರ್ಯಕರ್ತರೆಂದರೆ ಎದುರಾಳಿ ಚಾಪೆಕೆಳಗೆ ನುಸುಳಿ ಕೆಲ್ಸ ಮಾಡುತ್ತೇನೆಂದರೆ ತಾನು ರಂಗೋಲಿ ಕೆಳಗೆ ನುಸುಳಿ ಕೆಲಸ ಮಾಡುತ್ತೇನೆಂದೆನ್ನುವಷ್ಟು ನಿಪುಣರಾಗಿರಬೇಕು. ಆಯಾ ಗ್ರಾಮವನ್ನು ಆಯಾ ಗ್ರಾಮದ ಕಾರ್ಯಕರ್ತರು ನೋಡಿ ಮತಯಾಚಿಸಿದರೂ ಸಾಕು. ಅದರಲ್ಲಿ ತೀವ್ರತೆ ಇರಬೇಕು. ಪ್ರಣಾಳಿಕೆಯನ್ನು ತಪ್ಪಿಲ್ಲದೆ ಸರಳವಾಗಿ ಮುದ್ರಿಸಿಕೊಂಡು ಮತದಾರರಿಗೆ ತಲುಪಿಸಬೇಕು. ಸುಳ್ಳು ಸುಳ್ಳು ಆಶ್ವಾಸನೆ ಕೊಡಬಾರದು. ತಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿದರೆ ಆಯಾ ಊರಿನ ಪ್ರಗತಿಯ ಕೆಲ್ಸವನ್ನು ಸರ್ಕಾರ ಹಿಡಿದು ಮಾಡಿಸಿಕೊಡುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಈ ರೀತಿ ಎಎಪಿ ನಡೆದುಕೊಂಡರೆ ಖಂಡಿತ ಗೆಲುವು ನೂರಕ್ಕೆ ನೂರರಷ್ಟು ಸಾಧ್ಯ.ಎಂಬುದು ನನ್ನ ನಂಬಿಕೆ.

**–ಕಡಿದಾಳು ಶಾಮಣ್ಣ**

ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡರು

---

# ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟ ಜತೆಯಾಗಿ ನಡೆಯಲಿ



ಭ್ರಷ್ಟಾಚಾರದ ಬೆನ್ನು ಹತ್ತಿದ ಹಿಡಿಯಷ್ಟು ಜನ ಸ್ಥಾಪಿತ ರಾಜಕೀಯ ಪಕ್ಷಗಳ ಉದ್ಧಟತನ ಮತ್ತು ಚುನಾವಣೆ ಗೆದ್ದು ತೋರಿಸಿ ಎನ್ನುವ ಆ ಪಕ್ಷಗಳ ಆಹ್ವಾನವನ್ನು ಸವಾಲಾಗಿ ಸ್ವೀಕರಿಸಿ ಅಲ್ಪಾವಧಿಯಲ್ಲಿ ಜನ ಬೆಂಬಲ ಪಡೆದು ರಾಜಧಾನಿಯ ಆಡಳಿತ ಚುಕ್ಕಾಣಿ ಹಿಡಿದದ್ದು ಸಣ್ಣ ವಿಷಯವೇನಲ್ಲ. ಜಡ್ಡುಗಟ್ಟಿರುವ ರಾಜಕೀಯ ಪಕ್ಷಗಳು, ವ್ಯಕ್ತಿಗಳು, ಅವರ ಭ್ರಷ್ಟಾಚಾರವನ್ನು ಕಣ್ಣಾರೆ ಕಾಣುತ್ತಾ ಬರುತ್ತಿರುವ ಜನಕ್ಕೆ 'ಆಮ್ ಆದ್ಮಿ ಪಕ್ಷ' ಆಶಾಕಿರಣವಾಗಿ ಕಂಡುದುದರಲ್ಲಿ ಆಶ್ಚರ್ಯವೇನಿಲ್ಲ. ಈ ಪಕ್ಷಕ್ಕೆ ಬೇಸತ್ತು ಆ ಪಕ್ಷಕ್ಕೆ, ಆ ಪಕ್ಷಕ್ಕೆ ಬೇಸತ್ತು ಈ ಪಕ್ಷಕ್ಕೆ ಮತ ನೀಡಬೇಕಾಗಿ ಬಂದಿರುವ ಭಾರತದ ಮತದಾರನಿಗೆ ಪರ್ಯಾಯವಿಲ್ಲದ ರಾಜಕೀಯ ಕ್ಷೇತ್ರದಲ್ಲಿ ಸರಳ, ಸಾಚಾತನ, ಜನಪರ ಕಾಳಜಿಯಿಂದ ಕೂಡಿದಂತೆ ಕಂಡುಬರುವ 'ಆಮ್....'ಗೆ ಮತ ನೀಡಿದ್ದಾನೆ. ಜನಾಕ್ರೋಶದ ಪ್ರತೀಕವಾಗಿ ಅಧಿಕಾರಕ್ಕೆ ಬಂದಿರುವ ಎಎಪಿ ಮೇಲೆ ಗುರುತರ ಜವಾಬ್ದಾರಿಯಿದೆ. ದೆಹಲಿಗಷ್ಟೇ ಅಲ್ಲದೆ ಇಡೀ ದೇಶಕ್ಕೊಂದು ಆಶಾಕಿರಣವಾಗಿ ಕಂಡುಬಂದಿರುವ ಎಎಪಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವ ಮೂಲಕ ಹಳೆಯ ಪಕ್ಷಗಳು ಮತ್ತೆ ತಲೆ ಎತ್ತದಂತೆ ಮಾಡಬೇಕಾಗಿದೆ.

ಎಎಪಿಯ ಈವರೆಗಿನ ನಡೆ ಸಂಪೂರ್ಣ ತೃಪ್ತಿಕರ ಇಲ್ಲ. ಚುನಾವಣೆ ಭರವಸೆಗಳನ್ನು ಬೆಳಗಾಗುವುದರೊಳಗೆ ಈಡೇರಿಸುವ

ಭರದಲ್ಲಿ ಅವುಗಳ ದೀರ್ಘಾವಧಿ ಪರಿಣಾಮಗಳ ಬಗ್ಗೆ ಚಿಂತನೆ ಮಾಡಿದಂತಿಲ್ಲ. ಗಡಿಬಿಡಿಯ ನಿರ್ಧಾರಗಳ ಬದಲು ಸಾವಧಾನದಿಂದ ಆಡಳಿತದಲ್ಲಿ ಬಿಗು ಮತ್ತು ಸುಧಾರಣೆ ತಂದು ಅದರ ಫಲ ಜನರಿಗೆ ತಲುಪಬೇಕು. ಜನಪ್ರಿಯ ನಿರ್ಧಾರಗಳು ಬಹಳ ಕಾಲ ಬದುಕಲಾರವು.

ಭ್ರಷ್ಟಾಚಾರ ವಿರುದ್ಧದ ಹೋರಾಟ ಎಎಪಿಯ ಮೂಲ ಸೆಲೆಯಾಗಿರುವುದರಿಂದ ಭ್ರಷ್ಟಾಚಾರದ ಮಾರ್ಗಗಳನ್ನು ಬಂದು ಮಾಡುತ್ತಾ ಪಾರದರ್ಶಕ ಆಡಳಿತ, ಪಾರದರ್ಶಕ ನಿರ್ಣಯಗಳನ್ನು ತೆಗೆದುಕೊಳ್ಳತೊಡಗಿದಲ್ಲಿ ಎಎಪಿ ಮೇಲೆ ಜನರ ವಿಶ್ವಾಸ ಗಟ್ಟಿಗೊಳ್ಳತೊಡಗಬಹುದು. ಪ್ರಚಾರದ ಹಂಬಲವನ್ನು ಕಡಿಮೆ ಮಾಡಿಕೊಂಡು ವ್ಯವಸ್ಥೆ ಸುಧಾರಣೆಗೆ ಹೆಚ್ಚು ಗಮನ ನೀಡಿದರೆ ಅದರ ಫಲ ಜನಸಾಮಾನ್ಯರಿಗೆ ತಲುಪುತ್ತದೆ. ಸರಕಾರ ಜನರ ದೂರು ದುಮ್ಮಾನಗಳಿಗೆ ಸ್ಪಂದಿಸುವ ಸಂಸ್ಥೆಯಾಗಿ ಪರಿವರ್ತನೆ ಆದಲ್ಲಿ ಅದು ಎಎಪಿಯ ದೊಡ್ಡ ಸಾಧನೆ.

ಮುಂಬರುವ ಲೋಕಸಭಾ ಚುನಾವಣೆಗೆ ಭ್ರಷ್ಟ ರಾಜಕಾರಣಿಗಳ ಹೆಸರು ಬಿಡುಗಡೆ ಮಾಡಿ ಅಂಥವರ ವಿರುದ್ಧ ಎಎಪಿ ಸ್ಪರ್ಧಿಸುವ ಬಗ್ಗೆ ಕೇಜ್ರೀವಾಲ್ ಹೇಳಿದ್ದಾರೆ. ಭ್ರಷ್ಟನಿಗೆ 'ನೀನು ಭ್ರಷ್ಟ' ಅಂತ ಹೇಳುವುದೂ ನಮ್ಮಲ್ಲಿ ಕ್ಲಿಷ್ಟಕರವಾಗಿರುವಾಗ ಹಾಗೇ ಹೇಳಿ ಅವರ ವಿರುದ್ಧ ಜನ ಬೆಂಬಲ ಕೇಳುವುದು ಪ್ರಜಾಪ್ರಭುತ್ವ ಗಟ್ಟಿಗೊಳ್ಳುವ ದಿಶೆಯಲ್ಲಿ ಮಹತ್ವದ ಹೆಜ್ಜೆಯೇ. ಆದರೆ ಕಾಂಗ್ರೆಸ್ ಬೆಂಬಲದ ಮೇಲೆ ನಿಂತು ವಂಚನೆಗೊಳಗಾದ ಪಕ್ಷ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟವನ್ನು ಜತೆಯಾಗಿಯೇ ಕೊಂಡೊಯ್ಯಬೇಕಿದೆ. ಜನರಿಗೆ ಭ್ರಮನಿರಸನವಾಗದಂತೆ ಕಾರ್ಯನಿರ್ವಹಿಸುವ ಜವಾಬ್ದಾರಿ ಎಎಪಿ ಮೇಲಿದೆ. ಜನರಿಗೆ ಮತ್ತೆ ಹಳೆಯ ಗಂಡನ ಪಾದವೇ ಗತಿ ಎಂಬ ಭಾವ ಮೂಡಲು ಅವಕಾಶ ನೀಡಬಾರದು.

–ವೆಂಕಟೇಶ ಮಾಚಕನೂರು

ನಿವೃತ್ತ ಶಿಕ್ಷಣ ಆಯುಕ್ತರು ಹಾಗೂ ಲೇಖಕರು

## ಉತ್ಸಾಹದೊಂದಿಗೆ ತಾಳ್ಮೆ, ವಿವೇಕಗಳೂ ಇರಲಿ

ತಂತಿಯ ಮೇಲೆ ನಡೆಯುವವನು ಎಷ್ಟು ವೇಗದಲ್ಲಿ ಹೋಗಲು ಸಾಧ್ಯ? ನೂರು ಕಿ.ಮೀ.ವೇಗದಲ್ಲಿ ಹೋದರೆ ಏನಾಗಬಹುದು? ಆಮ್‌ಆದ್ಮಿ ಪಕ್ಷದ ದೆಹಲಿ ಸರ್ಕಾರಕ್ಕೆ ಅದೇ ಗತಿಯಾಗಿದೆ. ಈ ಪಕ್ಷದ ನಾಯಕ, ಆಮ್‌ಆದ್ಮಿ ಸರ್ಕಾರದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಐವತ್ತು ದಿನಗಳನ್ನೂ ಪೂರೈಸದೆ ನೆಲಕ್ಕೆ ಬಿದ್ದಿದ್ದಾರೆ. ಅವರ ಸರ್ಕಾರವನ್ನೂ ಬೀಳಿಸಿದ್ದಾರೆ.

ಕೇಜ್ರಿವಾಲ್ ಅವರ ಬಗ್ಗೆ ಅನೇಕ ಟೀಕೆಗಳಿವೆ. 'ಹುಚ್ಚ', 'ಅಪ್ರಬುದ್ಧ' ಎಂದವರಿದ್ದಾರೆ. ಈ ಸರ್ಕಾರಕ್ಕೆ ಕಾರ್ಯಸೂಚಿಯೇ ಇರಲಿಲ್ಲ ಎಂಬ ಟೀಕೆಯೂ ಇದೆ. 'ದುಃಸ್ವಪ್ನ'ವೊಂದು ಕೊನೆಯಾಯಿತೆಂದು ನಿಟ್ಟುಸಿರು ಬಿಟ್ಟವರೂ ಇದ್ದಾರೆ. ಕೇಜ್ರಿವಾಲರಿಗೆ ಧರಣಿ ಮಾಡುವುದು ಗೊತ್ತೇ ಹೊರತು ಆಡಳಿತ ನಡೆಸುವುದು ಗೊತ್ತಿಲ್ಲ ಎಂಬ ಮಾತುಗಳೂ ಗಾಳಿಯಲ್ಲಿವೆ.

ಇಂಥ ಟೀಕೆಗಳು ಏನೇ ಇರಲಿ, ಆಮ್‌ಆದ್ಮಿ ಪಕ್ಷ ಹುಟ್ಟಿದಾಗಲೂ ಅದರ ಜೊತೆಯಲ್ಲಿ ಜನರಿದ್ದರು. ಅದು ಬಿದ್ದಾಗಲೂ ಜನರಿದ್ದಾರೆ. ಮಧ್ಯಮ, ಕೆಳಮಧ್ಯಮ ಮತ್ತು ಸಾಮಾನ್ಯ ವರ್ಗದ ಜನರೇ ಹೆಚ್ಚಾಗಿರುವ ಈ ಸಮುದಾಯ ಕೇಜ್ರಿವಾಲ್ ಅವರಿಂದ ದೂರವಾಗಿಲ್ಲ. ಈ ಸಮುದಾಯದ ಉತ್ಸಾಹವೂ ತಗ್ಗಿಲ್ಲ.

ಮೇಲುನೋಟಕ್ಕೆ ಈ ಚಿತ್ರ ಕಾಣಿಸುತ್ತಿದೆ. ಒಳಗೆ ಯಾವ ತಂತ್ರಗಳು ಅಡಗಿ ಕುಳಿತಿವೆಯೋ. 'ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಕೇಜ್ರಿವಾಲ್ ತಂಡ ಬಳಸಿರುವ ರಾಜಕೀಯ ತಂತ್ರದ ಪರಿಣಾಮವಾಗಿ ಈ ಸರ್ಕಾರ ಬಿದ್ದಿದೆ. ನಿಜವಾದ ಆಟ ಇನ್ನು ಶುರುವಾಗಬೇಕಷ್ಟೆ' ಎನ್ನುವ ಅಭಿಪ್ರಾಯಗಳೂ ಇವೆ.

ರಾಜಕೀಯದಲ್ಲಿ ತಂತ್ರಗಾರಿಕೆ ಮುಖ್ಯ. ಅತ್ಯಂತ ಪ್ರಾಮಾಣಿಕವಾಗಿದ್ದ, ಒಳ–ಹೊರಗುಗಳು ಕಾಣುವಂತೆ ಬದುಕಿದ್ದ ಗಾಂಧೀಜಿಯವರ ಹೋರಾಟದ ಹಿಂದೆಯೂ ತಂತ್ರಗಾರಿಕೆಯೊಂದು ಕ್ರಿಯಾಶೀಲವಾಗಿತ್ತು. ತಂತ್ರಗಾರಿಕೆ ಎಂದರೆ ಮೋಸವಲ್ಲ; ಎದುರಾಳಿಯನ್ನು ಹಣಿಯುವ ಹುನ್ನಾರವೂ ಅಲ್ಲ. ತನ್ನ ಶಕ್ತಿಯನ್ನು ಅರಿತು, ಎದುರಾಳಿಯ ಬಲವನ್ನು ಅರ್ಥಮಾಡಿಕೊಂಡು ತಾನು ಎಸೆಯಬೇಕಾದ ದಾಳವನ್ನು ಬಳಸುವುದೇ ತಂತ್ರಗಾರಿಕೆ. ಇದು ವಿವೇಕದಿಂದ, ಅನುಭವದ ಬೆಳಕಿನಲ್ಲಿ ಕಂಡುಕೊಂಡ ದಾರಿ. ಕೇಜ್ರಿವಾಲ್ ಮತ್ತು ಅವರ ಮಿತ್ರರಲ್ಲಿ ಈ ತಂತ್ರಗಾರಿಕೆ ಇರಲಿಲ್ಲವೇ?

ಆಮ್ ಆದ್ಮಿ ಪಕ್ಷ ಹುಟ್ಟಿದ್ದರ ಹಿಂದೆ ಇದ್ದ ಮುಖ್ಯ ಗುರಿ: ಭ್ರಷ್ಟಾಚಾರದ ವಿರುದ್ಧ ಹೋರಾಟ. ಈ ಪಕ್ಷ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದದ್ದೂ ಈ ತತ್ವದ ಆಧಾರದ ಮೇಲೆಯೇ. ಸ್ವಾತಂತ್ರ್ಯಾನಂತರದ ಭಾರತೀಯ ರಾಜಕಾರಣದಲ್ಲಿ ಈ ಭ್ರಷ್ಟಾಚಾರ ಎಷ್ಟು ವೇಗವಾಗಿ ಬೆಳೆಯಿತು, ಎಷ್ಟು ಆಳಕ್ಕೆ ಬೇರನ್ನು ಇಳಿಸಿತು, ಎಷ್ಟು ವಿಸ್ತಾರಕ್ಕೆ ಈ ಬೇರುಗಳು ಚಾಚಿಕೊಂಡವು, ಇದರಿಂದಾಗಿ ಈ ರಾಷ್ಟ್ರದ ಜನ ಎಂಥ ವೇದನೆಯನ್ನು ಅನುಭವಿಸಿದರು, ಅನುಭವಿಸುತ್ತಿದ್ದಾರೆ ಎಂಬುದನ್ನೆಲ್ಲ ವಿವರಿಸುವಂತೆ 'ಆಪ್' ಹುಟ್ಟಿ, ಬೆಳೆಯಿತು.



ತನ್ನ ತತ್ವಕ್ಕೆ, ಮೌಲ್ಯಕ್ಕೆ ನಿಷ್ಠವಾಗಿಯೇ ಆಪ್, ಜನಲೋಕಪಾಲ (ಭ್ರಷ್ಟಾಚಾರ ವಿರೋಧದ) ಮಸೂದೆಯನ್ನು ಮಂಡಿಸಿತು. ಈ ಕಾರಣಕ್ಕಾಗಿಯೇ ಆಪ್ ಸರ್ಕಾರ ಅಧಿಕಾರವನ್ನು ಕಳೆದುಕೊಂಡಿತು.

ಈ ಭ್ರಷ್ಟಾಚಾರವೆಂಬ ಮಹಾ ವೃಕ್ಷವನ್ನು ಕಡಿದುಹಾಕಲು ಹೊರಟ ಕೇಜ್ರಿವಾಲ್ ಅವರ ಕೊಡಲಿ ತೀರ ಸಣ್ಣದು. ಎಷ್ಟೇ ಬಲವನ್ನು ಬಳಸಿ ಈ ಕೊಡಲಿಯಿಂದ ಹೊಡೆದರೂ ಈ ರಾಕ್ಷಸ ಮರಕ್ಕೆ ಏನೂ ಆಗುವುದಿಲ್ಲ. ಇದು ಕೇಜ್ರಿವಾಲ್ ಅವರಿಗೆ ತಿಳಿಯಬೇಕಾಗಿತ್ತು. ಒಂದೇ ಏಟಿಗೆ ಈ ಮಹಾಮರವನ್ನು ಬೀಳಿಸಿಬಿಡುತ್ತೇನೆ ಎನ್ನುವುದು ಹುಂಬತನವಾಗುತ್ತದೆ. ಹುಮ್ಮಸ್ಸು ಇರಬೇಕು. ಆದರೆ ಹುಂಬತನ ಸರಿಯಲ್ಲ.

ಭಾರತದಲ್ಲಿನ ಭ್ರಷ್ಟಾಚಾರ ಬಹಳ ಸಂಕೀರ್ಣ ಸ್ವರೂಪದ್ದು. ಅಧಿಕಾರ, ಹಣ, ಜಾತಿ, ತೋಳ್ಬಲ, ವಂಶಪಾರಂಪರ್ಯ ಆಡಳಿತ ಮತ್ತು ಇತ್ತೀಚೆಗೆ ಸೇರ್ಪಡೆಯಾದ ಕಾರ್ಪೊರೇಟ್ ವ್ಯವಹಾರ. ಇಡೀ ಜಗತ್ತಿಗೇ ವ್ಯಾಪಿಸಿದ ಕಾರ್ಪೊರೇಟ್ ವ್ಯವಹಾರ ರಾಜಕೀಯ ಪಕ್ಷಗಳನ್ನು ನಿಯಂತ್ರಿಸುವಷ್ಟು ಪ್ರಭಾವಶಾಲಿಯಾಗಿದೆ. ಇದಕ್ಕೆ ಮುಖಾಮುಖಿಯಾಗುವುದೆಂದರೆ ಸಾಮಾನ್ಯವಲ್ಲ. ಆದರೆ ಜನಶಕ್ತಿಯನ್ನು ಪಡೆದ ಆಪ್ ಈ ಭ್ರಷ್ಟಾಚಾರಕ್ಕೆ ಎದುರಾಗಿ ನಿಲ್ಲಬಲ್ಲದು. ಆದರೆ ತಾಳ್ಮೆ, ವಿವೇಕ, ಒಳಗಿದ್ದುಕೊಂಡೇ ಹೋರಾಡುವ ಛಲ ಬೇಕಾಗುತ್ತವೆ. ಕೇಜ್ರಿವಾಲ್ ತಂಡ ಸರ್ಕಾರವನ್ನು ವಿಸರ್ಜಿಸಿ ಹೋರಾಡಬೇಕಾದ ಪ್ರಮೇಯ ಇರಲಿಲ್ಲ. ಕೇಜ್ರಿವಾಲರ ಉತ್ಸಾಹ ಮೆಚ್ಚುವಂಥದ್ದೇ. ಆದರೆ ಹುಡುಗಾಟ ಒಳ್ಳೆಯದೆಂದೇನೂ ಅನ್ನಿಸುವುದಿಲ್ಲ. ಇನ್ನಷ್ಟು ಗಂಭೀರವಾಗಿ ವರ್ತಿಸಿದ್ದರೆ, ತನ್ನ ಮೂಲೋದ್ದೇಶಕ್ಕೆ ಭಂಗಬಾರದ ರೀತಿಯಲ್ಲಿಯೂ ಸರ್ಕಾರವನ್ನು ಉಳಿಸಿಕೊಂಡು ಹೋರಾಟವನ್ನೂ ಮುಂದುವರಿಸಬಹುದಿತ್ತು.

ಈಗ ದಿಲ್ಲಿಯಲ್ಲಿ ಸರ್ಕಾರ ಇಲ್ಲ. ಅಷ್ಟರಮಟ್ಟಿಗೆ ಕಾಂಗ್ರೆಸ್, ಬಿಜೆಪಿ ಪಕ್ಷಗಳಿಗೆ ಮತ್ತು ಭ್ರಷ್ಟ ರಾಜಕಾರಣಿಗಳಿಗೆ ನೆಮ್ಮದಿ. ಈ ನೆಮ್ಮದಿಯನ್ನು ಕೊಟ್ಟು ಕೇಜ್ರಿವಾಲ್ ತಪ್ಪು ಮಾಡಿದರು ಎಂದೇ ಅನಿಸುತ್ತಿದೆ.

–ಜಿ.ಪಿ. ಬಸವರಾಜು

ಹಿರಿಯ ಪತ್ರಕರ್ತರು ಮತ್ತು ಲೇಖಕರು

# ಸದ್ಯಕ್ಕೀಗ ನಮಗೆ ಬೇರೆ ಆಯ್ಕೆಯೇ ಇಲ್ಲ!

ಈ ಲೇಖನದ ಮೊದಲ ಪದ ಬರೆಯುವದರೊಳಗೆ ಕೇಜ್ರಿವಾಲರ ರಾಜೀನಾಮೆ ಸುದ್ದಿ ಟಿ.ವಿ ಪರದೆಗಳ ಮೇಲೆ ಗಿರಕಿ ಹೊಡೆಯುತ್ತಿದೆ. ಅನಿರೀಕ್ಷಿತವಾದದ್ದೇನಲ್ಲ, ಆದರೆ ವಿಶ್ಲೇಷಣೆಗೆ ಯೋಗ್ಯವಾದುದ್ದು.

ಆಮ್ ಆದ್ಮಿ ಪಕ್ಷ ಸಾಮೂಹಿಕ ಭ್ರಮ ನಿರಸನದ ಒಂದು ವ್ಯುತ್ಪತ್ತಿ. ಭಾರತದ ಶ್ರೀ ಸಾಮಾನ್ಯರಿಗೆ ಯಾವುದೇ ರಾಜಕೀಯ ಸಂಘಟನೆಯ ಬಗ್ಗೆ ಪೂರ್ಣ ಭರವಸೆ ಇದೆ ಎಂದು ನನಗನಿಸುವುದಿಲ್ಲ. ಎಲ್ಲರನ್ನೂ ಟೀಕೆ ಮಾಡುತ್ತಾ, ನಾವೇನು ಮಾಡಲಿಕ್ಕಾಗುತ್ತೆ ಎಂದು ಕೈಚಲ್ಲಿ ಕುಳಿತವರು ಬಹುತೇಕರಾದರೆ, ಸುಮ್ಮನಿರಲಾರದೆ ತೀವ್ರ ಎಡಪಂಥೀಯರಾಗಿ ಹಿಂಸಾಚಾರದ ಹಾದಿ ಹಿಡಿದು ಸಮಸ್ಯೆಯನ್ನೂ ಬಗೆ ಹರಿಸಲಾಗದೆ, ಸಿಕ್ಕ ಸುಳಿಯಿಂದಲೂ ಹೊರಬರಲಾಗದೆ ಡೋಲಾಯಮಾನ ಸ್ಥಿತಿಯಲ್ಲಿ ಹಲವರಿರುವುದೂ ಸತ್ಯ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಣ್ಣಾ ಹಜಾರೆ ಪ್ರೇರಿತ ಭ್ರಷ್ಟಾಚಾರ ವಿರೋಧಿ ಆಂದೋಲನ ಒಂದು ಆಶಾಕಿರಣವಾಗಿ ಮೂಡಿ ರಾಜಕೀಯ ತಲ್ಲಣ ಉಂಟು ಮಾಡಿದ್ದು ಈಗ ಇತಿಹಾಸ. ದೆಹಲಿ ಕೇಂದ್ರಿತವಾಗಿದ್ದ ಈ ಚಳುವಳಿಗಳಿಗೆ ದೇಶದ ಇತರ ಪ್ರಮುಖ ನಗರಗಳಲ್ಲೂ ಬೆಂಬಲದ ಪ್ರದರ್ಶನವಾಯಿತು.

ಚಳುವಳಿಯ ಪ್ರಮುಖ ಪಾತ್ರಧಾರಿಗಳಲ್ಲಿ ಕೆಲವರು ಸಕ್ರಿಯ ರಾಜಕಾರಣಕ್ಕೆ ಧುಮುಕುತ್ತಿದ್ದಂತೆ ದೆಹಲಿಯಲ್ಲಿ ವಿಧಾನಸಭಾ ಚುನಾವಣೆ ನಡೆದು, ರಾಜಕೀಯ ವಿಶ್ಲೇಷಕರ ನಿರೀಕ್ಷೆಯನ್ನೂ ಮೀರಿ ಎ.ಎ.ಪಿ. ಪಕ್ಷಕ್ಕೆ 28 ಸ್ಥಾನಗಳು ದೊರೆತವು. ಆದರೆ ಪಕ್ಷಕ್ಕೆ ಇದು ಎಡವಟ್ಟಿನ ಸಂಖ್ಯೆಯಾಯಿತು. ಸ್ವಂತ ಸರ್ಕಾರ ರಚನೆಯ ಸಾಧ್ಯತೆ ಇರಲಿಲ್ಲ. ಕಾಂಗ್ರೆಸ್ ಪಕ್ಷ ಬೆಂಬಲ ಸೂಚಿಸಿದಾಗ ಜವಾಬ್ದಾರಿಯಿಂದ ನುಣುಚಿಕೊಂಡಿದ್ದಲ್ಲಿ ಮತದಾರನ ವಿಶ್ವಾಸಕ್ಕೆ ವಂಚನೆ ಮಾಡಿದಂತಾಗುತ್ತಿತ್ತು. ಕೇಜ್ರಿವಾಲರು ದೆಹಲಿಯ ಮುಖ್ಯಮಂತ್ರಿಯಾದರು.

ಭಾರತದ ತೀರ ಇತ್ತೀಚಿನ ರಾಜಕೀಯ ಇತಿಹಾಸದಲ್ಲಿ ಎ.ಎ.ಪಿ ಯ ಉದಯ ಮತ್ತು ಪ್ರಥಮ ಹೆಜ್ಜೆಗಳು ಒಂದು ಪ್ರಯೋಗ. ವಿರೋಧಿ ಸ್ಥಾನದಲ್ಲಿ ಕುಳಿತು, ಆಡಳಿತಾರೂಢರನ್ನು ಏರಿದ ಧ್ವನಿಯಲ್ಲಿ ಟೀಕೆ ಮಾಡಿ ಎಲ್ಲರ ಗಮನ ಸೆಳೆಯಬಹುದು. ಚುನಾವಣಾ ಪೂರ್ವದಲ್ಲಿ ಭರವಸೆಗಳನ್ನು ನೀಡುವುದೂ, ಅವಕ್ಕೊಂದು ಕಾಲಮಿತಿ ಘೋಷಣೆ ಮಾಡಿಬಿಡುವುದು ಸುಲಭವೇ. ಆದರೆ ಅಧಿಕಾರ ಸಿಕ್ಕಿಬಿಟ್ಟರೆ ಸಂಕಷ್ಟಗಳ ಸರಮಾಲೆ ಪ್ರಾರಂಭವಾಗುತ್ತದೆ.

ಕೇಜ್ರಿವಾಲರಿಗೆ ಸರ್ಕಾರ ರಚನೆ, (ಒಂದು ಘಟನೆ ಬಿಟ್ಟರೆ) ಕಗ್ಗಂಟಾಗಲಿಲ್ಲ. ಆದರೆ ಅವರ ಸರ್ಕಾರ ಅಧಿಕಾರ ಹಿಡಿದ ಕ್ಷಣದಿಂದ ನೀಡಿದ ಭರವಸೆಗಳ ಮತ್ತು ಅದಕ್ಕೆ ನಿಗದಿಪಡಿಸಿದ್ದ ಕಾಲಮಿತಿಗಳ ಗೋಜಲಿನಲ್ಲಿ ಸಿಕ್ಕಿಹಾಕಿಕೊಂಡಂತೆ ಕಾಣುತ್ತದೆ. ಪುಕ್ಕಟ್ಟೆ ನೀರು ನೀಡುವುದು ಅತಿಯಾಯಿತೆಂದೆನಿಸುತ್ತದೆ. ಭ್ರಷ್ಟಾಚಾರ ನಿಯಂತ್ರಣವನ್ನು ಬಹು ಅವಸರದಲ್ಲೇ ಮಾಡಿ ಮುಗಿಸಿಬಿಡಬೇಕೆಂಬ ತವಕದಲ್ಲಿದ್ದಾರೆ.



ತಮ್ಮ ತಾಳಕ್ಕೆ ಪರಿಸ್ಥಿತಿ ಕುಣಿಯದಿದ್ದಾಗ ಮೊಂಡುತನ ಪ್ರದರ್ಶಿಸಿದ್ದಾರೆ. ಅಧಿಕಾರದ ಕುರ್ಚಿಯಲ್ಲಿ ಕುಳಿತವರು ಮೊಂಡುತನ ಪ್ರದರ್ಶಿಸುವ ಹಾಗಿಲ್ಲ. ಚಾಣಾಕ್ಷತನದಿಂದಲೇ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಸಾಮಾನ್ಯ ಮತದಾರ ನೀವು ಮೌಲ್ಯಗಳನ್ನು ಎಷ್ಟರಮಟ್ಟಿಗೆ ಕಾಪಾಡಿಕೊಂಡಿದ್ದೀರಿ ಎಂಬ ಲೆಕ್ಕಾಚಾರದಲ್ಲೇ ಸುಮ್ಮನಾಗುವುದಿಲ್ಲ. ನೀವು ಎಷ್ಟು ಪರಿಣಾಮಕಾರಿಯಾಗಿದ್ದೀರಿ ಎಂಬುದು ಮುಖ್ಯವಾಗಿ ಅವನನ್ನು ತಟ್ಟುತ್ತದೆ. ಮೌಲ್ಯಗಳೊಡನೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬುದು ನನ್ನ ಅಭಿಪ್ರಾಯವಲ್ಲ.

ಈ ಎ.ಎ.ಪಿ. ಪ್ರಯೋಗ ಸಫಲವಾಗಬೇಕಾದುದು ನಮ್ಮೆಲ್ಲರ ಹಿತದೃಷ್ಟಿಯಿಂದ ಅವಶ್ಯಕ. ಇದು ಜಾತಿ, ಧರ್ಮ, ಪ್ರಾದೇಶಿಕತೆ, ಹಣ ಮತ್ತು ಮತದಾನದ ಸಂದರ್ಭದಲ್ಲಿ ನಡೆಯುವ ಕುಟಿಲತೆಗಳ ಬೆಂಬಲವಿಲ್ಲದೆ ಉದಯವಾಗಿರುವ ಒಂದು ಶಕ್ತಿ, ಇಂತಹ ಒಂದು ಸಂಘಟನೆ ಮಾತ್ರ ವೈವಿಧ್ಯಮಯ ಭಾರತದ ಸಂಕೀರ್ಣ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಬಲ್ಲದು. ಆದರೀಗ ಅದು ಎರಡು ಮೈಲಿಗಲ್ಲುಗಳನ್ನು ದಾಟಬೇಕಾಗಿದೆ. ಸದ್ಯಕ್ಕೆ ಒಂದೆರಡು ಭಾವನಾತ್ಮಕ ವಿಷಯಗಳ ಆಧಾರದಿಂದ ಪುಟಿದೆದ್ದಿರುವ ಈ ಸಂಘಟನೆ ದೂರಗಾಮಿ ಅಸ್ತಿತ್ವದ ದೃಷ್ಟಿಯಿಂದ ಒಂದು ವಿಸ್ತಾರವಾದ ವೈಚಾರಿಕ ನೆಲೆಗಟ್ಟು ರೂಪಿಸಿಕೊಳ್ಳಬೇಕಾಗುತ್ತದೆ. ಎರಡನೆಯದಾಗಿ ಅಖಿಲ ಭಾರತ ಪ್ರಾತಿನಿಧ್ಯಕ್ಕಾಗಿ ಗ್ರಾಮೀಣ ಶ್ರೀಸಾಮಾನ್ಯನ ವಿಶ್ವಾಸ ಗಳಿಸಿಕೊಳ್ಳಬೇಕಾಗುತ್ತದೆ. ಗ್ರಾಮೀಣ ಮತದಾರನ ಚರ್ಚೆ ಬೇರೆಯದೇ ಇದೆ. ಅವನ ಅವಶ್ಯಕತೆಗಳು, ದಾಕ್ಷಿಣ್ಯಗಳು ಮತ್ತು ನಿರೀಕ್ಷೆಗಳನ್ನು ಅರ್ಥಮಾಡಿಕೊಂಡು ಅವಕ್ಕೆ ಪರಿಹಾರ ನೀಡುವ ಭರವಸೆ ಮೂಡಿಸಬೇಕು. ಇದು ಸುಲಭದ ಮಾತಲ್ಲ. ಅವಸರದಲ್ಲಿ ಆಗುವಂತಹದ್ದೂ ಅಲ್ಲ. ಬೇರೆಯವರು ತತ್‌ಕ್ಷಣದಲ್ಲಿ ಈ ರೀತಿಯ ಬದಲಾವಣೆ ತರುವ ಭ್ರಮೆ ಮೂಡಿಸಿ ಆಮಿಷಗಳನ್ನು ತೋರಿಸುವ ಷಡ್ಯಂತ್ರಗಳನ್ನು ಅನುಸರಿಸಹೊರಟರೆ ಅದು ಮೂರ್ಖತನವಾಗುತ್ತದೆ.

ಶಾಶ್ವತವಾದ ರಾಜಕೀಯ ಮನ್ವಂತರವಾಗಲು ಸಮಯಬೇಕು. ತಾಳ್ಮೆಬೇಕು. ಈ ಗುಣಗಳುಳ್ಳ ನಿಸ್ವಾರ್ಥ ಕಾರ್ಯಕರ್ತರ ದೊಡ್ಡ ದಂಡೇ ದೇಶದೆಲ್ಲೆಡೆ ಬೇಕಾಗುತ್ತದೆ. ಮುಂದಾಳತ್ವ ವಹಿಸುವವರು ಇತರರಿಗೆ ಮಾದರಿಯಾಗಿಯೇ ಮುನ್ನಡೆಸಬೇಕಾಗುತ್ತದೆ. ಸದ್ಯಕ್ಕೀಗ ನಮಗೆ ಬೇರೆ ಆಯ್ಕೆಯೇ ಇಲ್ಲ.

**–ಡಾ.ಬಿ. ಸುಜಯ್ ಕುಮಾರ್**

ವೈದ್ಯರು ಮತ್ತು ಸಾಮಾಜಿಕ ಕಾರ್ಯಕರ್ತರು

# ಕುರುಡುಗಣ್ಣಿಗಿಂತ, ಮೆಳ್ಳೆಗಣ್ಣು ವಾಸಿ ಎಂಬಂತೆ...



ದೆಹಲಿಯ ವಿಧಾನಸಭಾ ಚುನಾವಣೆಯಲ್ಲಿ 'ಆಮ್ ಅದ್ಮಿ ಪಕ್ಷ'ಕ್ಕೆ ಅಭೂತ ಪೂರ್ವ ಜನ ಬೆಂಬಲ ದೊರೆತು ಜನ ಸಮುದಾಯದ ನಡುವಿಂದ, ಜನನಾಯಕರಾಗಿ ಅರವಿಂದ್ ಕೇಜ್ರಿವಾಲ್ ಎದ್ದು ನಿಂತಾಗ, ಜೇನು ಗೂಡೊಂದರಲ್ಲಿ, ಕಾರ್ಮಿಕ ಹುಳುಗಳ ನಡುವಿನಿಂದಲೇ 'ರಾಣಿ ಹುಳು'ವೊಂದು ರೂಪುಗೊಳ್ಳುವುದು ಥಟ್ಟನೆ ನೆನಪಾಗಿತ್ತು. ಕೇಜ್ರಿವಾಲ್‌ರ ಜೊತೆಯಲ್ಲಿ ಸಮಾಜವಾದಿ ಚಿಂತಕರು ನಿಂತಿರುವುದನ್ನು ಟ.ವಿ., ಪತ್ರಿಕೆಗಳಲ್ಲಿ ನೋಡಿ ಖುಷಿಯಾಗಿತ್ತು.

ಸಾಂಪ್ರದಾಯಿಕ ರಾಜಕೀಯ ಪಕ್ಷಗಳು, ಚುನಾವಣೆಗಾಗಿ ಅಭ್ಯರ್ಥಿಗಳನ್ನು ನಿಲ್ಲಿಸುವುದರಿಂದ ಹಿಡಿದು, ಗೆಲ್ಲಿಸುವವರೆಗೂ ನಡೆಸುವ ಜಾತಿ, ಹಣ ಬಲಾ ಬಲಗಳ ಲೆಕ್ಕಾಚಾರಗಳನ್ನು, ಕೆಲವೆಡೆ ಕ್ಷೇತ್ರ ವಿಂಗಡಣೆಯೂ ಸಹ, ಜಾತಿ ಆಧಾರದ ಮೇಲೆ ರೂಪುಗೊಂಡಿರುವುದನ್ನು ನೋಡಿ ರೋಸಿ ಹೋಗಿದ್ದ ಮನಸ್ಸುಗಳಿಗೆ, ಎ.ಎ.ಪಿ.ಯ ಗೆಲುವು, ಬಿರು ಬಿಸಿಲಿನಲ್ಲಿ ಬೊಗಸೆ ತಣ್ಣೀರಿನಂತೆ ಅನಿಸಿ ಅಣ್ಣಾ ಹಜಾರೆಯವರ ನೇತೃತ್ವದ ಭ್ರಷ್ಟಚಾರ ವಿರೋಧಿ ಚಳುವಳಿ ವ್ಯರ್ಥವಾಗಲಿಲ್ಲ ಎಂಬ ಸಮಾಧಾನ.

ಜೊತೆಗೆ ಎ.ಎ.ಪಿ ಚುನಾವಣೆ ಎದುರಿಸಿದ ರೀತಿ (ಅಭ್ಯರ್ಥಿ ಆಯ್ಕೆ, ಪ್ರಚಾರ, ನಿಧಿ ಸಂಗ್ರಹ) ಮೆಚ್ಚುವಂತಹದಾಗಿತ್ತು. ಶಾಂತವೇರಿ

ಗೋಪಾಲಗೌಡರನ್ನು ರೈತ ಚಳುವಳಿಯು ಹಸಿರು ಕುಂಕುಮ ಕೊಟ್ಟು, ಓಟು ಕೇಳಿದ್ದು ಮತ್ತು 'ಒಂದು ನೋಟು ಒಂದು ಓಟು' ನೆನಪಿಸಿತು.

ಎ.ಎ.ಪಿ.ಗೆ ದೊರೆತ ಜಯದಿಂದ, ಖುಷಿಗೊಂಡು ಕೆಲವೆಡೆ ಬಿಜೆಪಿ ಭಕ್ತರು ಸಿಹಿ ಹಂಚಿ ಸಂಭ್ರಮಿಸಿದಾಗ ಎಎಪಿ, ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳದಿರಲಿ ಎಂದು ಆಶಿಸಿದ್ದೆವು. ಹಾಗೇ, ಎಎಪಿ ಕಾಂಗ್ರೆಸ್ ಬೆಂಬಲ ಪಡೆದದ್ದು ಸಹ, ಇಷ್ಟವಾಗಲಿಲ್ಲ. ಯಾವ ಸರ್ಕಾರದ ಭ್ರಷ್ಟ ಆಡಳಿತವನ್ನು ವಿರೋಧಿಸಿ ಎ.ಎ.ಪಿ. ಜನ ಬೆಂಬಲ ಪಡೆಯಿತೋ, ಅದೇ ಪಕ್ಷದ ಜೊತೆ ಕೈ ಜೋಡಿಸಿ ಅಧಿಕಾರ ಹಿಡಿದಿದ್ದು ಸರಿ ಅಲ್ಲವೇನೋ? ಅದರ ಬದಲು ಸಮರ್ಥ ವಿರೋಧ ಪಕ್ಷವಾಗಿ ನಿಂತು, ಅಧಿಕಾರ ಹಿಡಿದವರ ಮೇಲೆ ಒತ್ತಡ ಹೇರುವ ಮೂಲಕ ಜನ ಸಾಮಾನ್ಯರ ಕೆಲಸ ಕಾರ್ಯಗಳನ್ನು ಮಾಡಿಸಬಹುದಿತ್ತೇನೊ, ಕೇಜ್ರಿವಾಲರ ಇತ್ತೀಚಿನ ನಡವಳಿಕೆ ಹೇಳಿಕೆಗಳನ್ನು ಗಮನಿಸಿದರೆ, ಎಎಪಿ ಗೆಲುವಿನ ಸಂಭ್ರಮ ಬಹಳ ದಿನ ಉಳಿಯಲಾರದು ಎನಿಸುತ್ತೆ.

ಮುಂಬರಲಿರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ನೋಡಿದಾಗ, ಸಾಂಪ್ರದಾಯಿಕ ರಾಜಕೀಯ ಪಕ್ಷಗಳ ಎದಿರು ಎಎಪಿ ಗೆಲುವು ಒಂದು ಆಶಾವಾದವನ್ನು ಸೃಷ್ಟಿಸಿದ್ದರೂ, ಪಕ್ಷದ ಮುಖ್ಯ ಪ್ರಣಾಳಿಕೆ ಭ್ರಷ್ಟಾಚಾರ ವಿರೋಧವಷ್ಟೆ ಇರುವುದು ಮಿತಿಯೂ ಇರಬಹುದೇನೋ. ಅಸಮಾನತೆ, ತಾರತಮ್ಯದ ವಿರುದ್ಧ ಹೋರಾಟ ರೂಪಿಸಿದ ದಲಿತ, ರೈತ ಚಳುವಳಿಗಳ ಮುಂದುವರಿಕೆ ಎಎಪಿ ಅಂತ ನನಗೆ ಅನ್ನಿಸುತ್ತಿಲ್ಲ. ಯಾಕಂದ್ರೆ ಇವತ್ತು ಧಾವಿಸಿ ಹೋಗಿ ಎಎಪಿಗೆ ನೋಂದಣಿ ಮಾಡಿಕೊಳ್ಳುತ್ತಿರುವ ಜನಸಾಮಾನ್ಯರಲ್ಲಿ ಬಹಳಷ್ಟು ಜನ ಜಾತಿ ಸಂಘಟನೆಗಳಲ್ಲಿ ಇರುವವರು, ಮೆರಿಟ್ ಪರವಾಗಿ, ಮೀಸಲಾತಿ ವಿರೋಧವಾಗಿ ಮಾತಾಡುವವರು ಇದ್ದಾರೆ. ಎಎಪಿ ಸೇರುವುದು 'ಫ್ಯಾಷನ್' ಎನ್ನುವಂತೆ ಆಗಿದೆ. ಹಾಗಂತ ಎಎಪಿಯನ್ನು ಕಡೆಗಣಿಸಲು ಆಗುವುದಿಲ್ಲ.

ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಎಎಪಿಯೊಂದೆ ಬಹುಮತ ಪಡೆದು ಅಧಿಕಾರ ಹಿಡಿಯುವುದು ಕಷ್ಟವಿದೆ. ಬಿಜೆಪಿ ಬರುವುದನ್ನು ತಡೆಯಬೇಕೆಂದರೆ, ಎಎಪಿ ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳಲೆಂದು ಆಶಿಸುತ್ತಾ, ಬೆಂಬಲಿಸಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ನಾವಿದ್ದೇವೆ. ಯಾಕಂದ್ರೆ ಕುರುಡುಗಣ್ಣಿಗಿಂತ, ಮೆಳ್ಳೆಗಣ್ಣು ವಾಸಿ ಅಲ್ವಾ?

**–ಮಲ್ಲಿಕಾ ಬಸವರಾಜು**

ಸಾಮಾಜಿಕ ಕಾರ್ಯಕರ್ತೆ ಹಾಗೂ ಕವಯತ್ರಿ

---

# ಕೇಜ್ರಿವಾಲರಂತಹ 'ಹುಚ್ಚ'ರ ಸಂಖ್ಯೆ ಹೆಚ್ಚಲಿ!

ಜನಾಂದೋಲನದ ಮೂಲಕ ದೆಹಲಿಯಲ್ಲಿ ಸರಕಾರ ರಚಿಸಿದ್ದ, ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ನೇತೃತ್ವದ ಸರಕಾರ ೧೫-೦೨-೨೦೧೪ರಂದು ರಾಜೀನಾಮೆ ಸಲ್ಲಿಸಿದೆ. ಈ ಸಂಬಂಧ ಸ್ಥಾಪಿತ ರಾಜಕೀಯ ಪಕ್ಷಗಳು ಹಾಗೂ ಬಹುಪಾಲು ರಾಜಕೀಯ ವಿಶ್ಲೇಷಕರು, ಕೇಜ್ರಿವಾಲರನ್ನು ಅಣಕಿಸುವ ರೀತಿಯಲ್ಲಿ ಮಾತನಾಡುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಬಹುಮತ ಬಂದಿರಲಿಲ್ಲ. ಉಳಿದ ಪಕ್ಷಗಳು ಸರಕಾರ ರಚಿಸಲು ನಿರಾಕರಿಸಿದಾಗ, ಸಂಕೀರ್ಣ ಸಂದರ್ಭದಲ್ಲಿ, ಕಾಂಗ್ರೆಸ್ ಪಕ್ಷದ ಸ್ವಯಂಪ್ರೇರಿತ ಬೆಂಬಲದಿಂದ ಸರಕಾರ ರಚನೆಯಾಗಿತ್ತು. ಅಣ್ಣಾ ಹಜಾರೆಯವರ, ಗ್ರಾಮಸ್ವರಾಜ್ಯ ಹಾಗೂ ಲೋಕಪಾಲ ಮಸೂದೆಗೆ ಆಗ್ರಹಿಸಿ ನಡೆದ ಆಂದೋಲನದಲ್ಲಿ ಭಾಗಿಯಾಗಿ ಆಂದೋಲನವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಸಂದರ್ಭದಲ್ಲಿ ಕ್ರೋಢೀಕೃತವಾದ ಜನಾಭಿಪ್ರಾಯದ ಮೂಲಕ ಅರವಿಂದ ಕೇಜ್ರಿವಾಲರು ಆಮ್ ಆದ್ಮಿ ಪಕ್ಷ ಸ್ಥಾಪಿಸಿ ಚುನಾವಣೆಗಿಳಿದಿದ್ದರು. ಪಕ್ಷದ ಪ್ರಣಾಳಿಕೆಯಂತೆ ಲೋಕಪಾಲ ಮಸೂದೆಗೆ ಕಾಂಗ್ರೆಸ್-ಬಿ.ಜೆ.ಪಿ ಪಕ್ಷಗಳು ಸಹಕರಿಸದಿದ್ದಾಗ ಅಧಿಕಾರ ತ್ಯಜಿಸಿರುವ ಅರವಿಂದ ಕೇಜ್ರಿವಾಲರ ನಡೆಯಲ್ಲಿ ರಾಜಕೀಯ ಪಕ್ಷದ ನಾಯಕನ ಲೆಕ್ಕಾಚಾರ ಅಡಗಿರುವುದು ನಿಜ.

ದೇಶದ ಜನತೆಯ ಮನದಲ್ಲಿ ವ್ಯವಸ್ಥೆವಿರೋಧಿ ನಿಲುವು ವ್ಯಕ್ತವಾಗುತ್ತಿರುವುದನ್ನು ಗ್ರಹಿಸಿರುವ ಕೇಜ್ರಿವಾಲ್, ಮುಂಬರುವ ಲೋಕಸಭೆ ಚುನಾವಣೆಯಲ್ಲಿ, ಸಾಂಕೇತಿಕವಾದರೂ ಸರಿ ತಮ್ಮ ಪಕ್ಷದ ಶಕ್ತಿಯನ್ನು ಪರೀಕ್ಷೆಗೊಳಪಡಿಸುವ ತೀರ್ಮಾನವನ್ನು ಒಂದು ರಾಜಕೀಯ ಪಕ್ಷದ ನಾಯಕನಾಗಿ ತೆಗೆದುಕೊಂಡದ್ದು ಸರಿಯಾದುದಾಗಿದೆ ಎಂಬುದು ನನ್ನ ಅನಿಸಿಕೆ. ನಮ್ಮ ದೇಶದಲ್ಲಿ ಜನಾಂದೋಲನಗಳು ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ, ನಮಗೆ ಮುಖ್ಯವಾಗಿ ಗೋಚರಿಸುವುದು, ಗಾಂಧೀಜಿಯವರ ನೇತೃತ್ವದಲ್ಲಿ ಜರುಗಿದ ದೇಶದ ಸ್ವಾತಂತ್ರ್ಯ ಆಂದೋಲನ. ಇದರ ಮುಖ್ಯ ಗುರಿ ದೇಶದ ಸ್ವಾತಂತ್ರ್ಯವಾದರೂ, ಕೇವಲ ಅಧಿಕಾರ ಕೇಂದ್ರಗಳು ಬದಲಾವಣೆಯಾದರೆ, ಸಂಕೀರ್ಣ ಸಮಸ್ಯೆಗಳನ್ನು ಹೊಂದಿರುವ ನಮ್ಮ ದೇಶದ ಪ್ರಜೆಗೆ ನೆಮ್ಮದಿಯ ಬದುಕು ಸಾಧ್ಯವಿಲ್ಲ ಎಂಬುದನ್ನು ಗಾಂಧೀಜಿ ಮನಗಂಡಿದ್ದರು. ಆ ಕಾರಣಕ್ಕೆ ಸ್ವಾತಂತ್ರ್ಯ ಆಂದೋಲನದ ಜೊತೆಗೆ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಒತ್ತು ಕೊಡುತ್ತಾ, ಸರಳ ಸ್ವಾವಲಂಬಿ ಜೀವನ ಕ್ರಮ, ಅಹಿಂಸಾತ್ಮಕ ಪ್ರಾಮಾಣಿಕ ನಡವಳಿಕೆಗಳ ಆಧಾರದ ಮೇಲೆ ತಮ್ಮ ಬದುಕನ್ನು ರೂಪಿಸಿಕೊಂಡು ಆಂದೋಲನವನ್ನು ವ್ಯವಸ್ಥೆಯ ಬದಲಾವಣೆಗಾಗಿ ರೂಪಿಸಿದ್ದರು. ದುರಂತದ ಸಂಗತಿಯಂದರೆ,



ದೇಶಕ್ಕೆ ಸ್ವಾತಂತ್ರ್ಯ ಲಭಿಸಿತಾದರೂ, ಗಾಂಧೀಜಿಯವರು ಪ್ರತಿಪಾದಿಸಿದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ನಿರಾಕರಿಸಿದ ಪಟ್ಟಭದ್ರ ವ್ಯವಸ್ಥೆ ದೇಶವನ್ನು ಇಂದಿನ ಸ್ಥಿತಿಗೆ ತಂದು ನಿಲ್ಲಿಸಿದೆ. ತಾವು ಪ್ರತಿಪಾದಿಸಿದ ಮೌಲ್ಯಗಳಿಗೆ ಪ್ರತಿಯಾಗಿ ಗಾಂಧೀಜಿಯವರು, ಸುಂಕದ ರೂಪವಾಗಿ ಸ್ವಾತಂತ್ರ್ಯ ಆಂದೋಲನಕ್ಕೆ ತಮ್ಮ ಜೀವವನ್ನೇ ಬಲಿ ಕೊಟ್ಟ ಕರಾಳ ಇತಿಹಾಸ ನಮ್ಮೆದುರುಗಿದೆ.

೭೦ರ ದಶಕದಲ್ಲಿ ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಪಕ್ಷದ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ, ದೇಶವ್ಯಾಪಿ ಆಂದೋಲನಕ್ಕೆ, ಪಕ್ಷಾತೀತವಾಗಿ ಕರೆಕೊಟ್ಟ, ಜೆ.ಪಿ. ಯವರನ್ನು ಜನತೆ ಬೆಂಬಲಿಸಿ ಕಾಂಗ್ರೆಸ್ ಸರಕಾರವನ್ನು ಕಿತ್ತೆಸಿಯಿತು. ಅಧಿಕಾರಕ್ಕೆ ಬಂದ ಚಳುವಳಿಯ ನಾಯಕರು ತಮ್ಮ ಸ್ವಹಿತಾಸಕ್ತಿಗಳಿಗಾಗಿ ಕಿತ್ತಾಡಿ ಚಳುವಳಿಯ ಆಶಯಗಳನ್ನು ನಿರರ್ಥಕಗೊಳಿಸಿದರು. ವ್ಯಕ್ತಿಸ್ವಾತಂತ್ರ್ಯದಂತಹ ಮೌಲ್ಯಗಳಿಗೆ ಧಕ್ಕೆಬಂದರೆ ಜನತೆ ಸಹಿಸಲಾರದು ಎಂಬ ಸಂದೇಶ ನೀಡುವಲ್ಲಿ ಆಂದೋಲನ, ಸಫಲವಾಯಿತು. ಆದರೆ ಗಾಂಧೀಜಿಯವರ ಹತ್ಯೆಯ ನಂತರ ಅಪ್ರಸ್ತುತವಾಗಿದ್ದ ಕೋಮು ಆಧಾರಿತ ಸಂಘಟನೆ, ಜೆ.ಪಿ.ಯವರು ನೀಡಿದ ಪಕ್ಷಾತೀತ ಕರೆಯನ್ನು ಬಳಸಿಕೊಂಡು, ದೇಶದ ರಾಜಕಾರಣದಲ್ಲಿ ಮುಕ್ತ ಪ್ರವೇಶ ಪಡೆಯಿತು. ಹೀಗೆ ಒಂದು ಜನಾಂದೋಲನವೇ ಇಂದು ದೇಶ ಎದುರಿಸುತ್ತಿರುವ ಕೋಮು ದಳ್ಳುರಿಗೆ ಕಾರಣವಾಗಿರುವುದನ್ನು ಮರೆಯಲಾಗದು.

ಈ ಎಲ್ಲ ಆಂದೋಲನಗಳ ಹಿನ್ನೆಲೆಯಲ್ಲಿ, ಆಮ್ ಆದ್ಮಿ ಪಕ್ಷದ ನಡೆಗಳನ್ನು ವಿಶ್ಲೇಷಿಸಿದಾಗ, ದೇಶದ ಬಹುಪಾಲು ಜನತೆ ದೈನಂದಿನ ಬದುಕಿನಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣವಾಗಿರುವ, 'ಭ್ರಷ್ಟಾಚಾರ'ವನ್ನು ಹೋಗಲಾಡಿಸುವುದನ್ನು ಮುಖ್ಯ ಗುರಿ ಮಾಡಿಕೊಂಡು ಹೋರಾಡುತ್ತಿದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಸಮಾಜದ ಹಿತಾಸಕ್ತಿ ಗೌಣವಾಗಿ ಸ್ವಹಿತಾಸಕ್ತಿ ಆದ್ಯತೆ ಪಡೆದಿದೆ. ಬಹುಪಾಲು ಜನತೆ ತಮ್ಮ ತಮ್ಮ ಮಿತಿಯಲ್ಲಿ ಶ್ರೀಮಂತರಾಗಲು ಮುನ್ನುಗ್ಗುತ್ತಿದ್ದಾರೆ. ಆದರೆ ಎಲ್ಲರೂ ಶ್ರೀಮಂತರಾಗಲು ಸಾಧ್ಯವಿಲ್ಲ ಎಂಬ ಸರಳ ಸತ್ಯವನ್ನು ಗ್ರಹಿಸದೆ

ನೆಮ್ಮದಿ ಮರೆಯಾಗಿದೆ. ಇಂತಹ ಸನ್ನಿವೇಶದಲ್ಲಿ ಸ್ವಹಿತಾಸಕ್ತಿಯನ್ನು ತ್ಯಜಿಸಿ ಸಮರ್ಪಣಾಭಾವದಿಂದ ಸಮಾಜದ ಹಿತಕ್ಕಾಗಿ ಕೇಜ್ರಿವಾಲರು ಸ್ಥಾಪಿಸಿದ ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸುವ ಮೂಲಕ ಜನತೆ ತಮ್ಮ ಸಿಟ್ಟನ್ನು ದೆಹಲಿ ಚುನಾವಣೆಯಲ್ಲಿ ತೋರಿಸಿದ್ದಾರೆ. ಜನಾಂದೋಲನಗಳ ಮುಖ್ಯ ಆಶಯ ವ್ಯವಸ್ಥೆಯ ಬದಲಾವಣೆ, ಮೌಲ್ಯಯುತ ಸಮಾಜ ನಿರ್ಮಾಣ. ಇದು ಆಂದೋಲನಗಳ ಆದರ್ಶ. ಪರಿಪೂರ್ಣತೆಯನ್ನು ನಾಗರಿಕ ಸಮಾಜ ಜೀರ್ಣಿಸಿಕೊಳ್ಳಲಾರದು ಎಂಬ ನಿಸರ್ಗ ನಿಯಮದ ಎಚ್ಚರಿಕೆಯಲ್ಲಿ ಜನಾಂದೊಲನದ ನಾಯಕರು ಮುನ್ನಡೆಯಬೇಕು.

ದೇಶದ ಸ್ಥಾಪಿತ ರಾಜಕಿಯ ಪಕ್ಷಗಳ ಮುಖಂಡರು ಕೇಜ್ರಿವಾಲ್‌ರನ್ನು 'ಹುಚ್ಚ' ಎಂದು ಮೂದಲಿಸುತ್ತಿರುವುದು ಸರಿಯಾಗಿಯೇ ಇದೆ. ಶ್ರೀಮಂತ ಔದ್ಯೋಗಪತಿ ಕುಟುಂಬದ ಅಣ್ಣ–ತಮ್ಮಂದಿರ ನಡುವಿನ ಸಂಪತ್ತಿನ ಪಾಲಿನ ಜಗಳವನ್ನು ಬಗೆ ಹರಿಸಲು ಭಾರತ ಸರಕಾರದ ಆರ್ಥಮಂತ್ರಾಲಯ ಆಸಕ್ತಿ ವಹಿಸಿರುವಾಗ, ಇಂತಹವರ ವಿರುದ್ಧ ವಂಚನೆ ಆರೋಪ ದಾಖಲಿಸಲು ಸೂಚಿಸಿರುವ ಕೇಜ್ರಿವಾಲ್ ಹುಚ್ಚರೆ ಸರಿ. ಇಂತಹದೆ ನಡೆಗಳಿಗಾಗಿ ಸ್ವಾತಂತ್ರ್ಯಾನಂತರ ವ್ಯವಸ್ಥೆ ಬದಲಾವಣೆಗೆ ಜನಾಂದೋಲನ ರೂಪಿಸಿ ಜೀವನದುದ್ದಕ್ಕೂ ಶ್ರಮಿಸಿದ್ದ ಮಹಾ ಮಾನವತಾವಾದಿ ಸಮಾಜವಾದಿ ಚಿಂತಕ ಡಾ. ರಾಮ ಮನೋಹರ ಲೋಹಿಯಾ, ಅಂದಿನ ಅಧಿಕಾರ ಕೇಂದ್ರಗಳಿಂದ ಪಡೆದ ಬಿರುದು ಕೂಡಾ ಅರಾಜಕತೆ ನಿರ್ಮಿಸುವ 'ಹುಚ್ಚ' ಎಂಬುದಾಗಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕಾಗಿದೆ. ಆ ಮುಖಾಂತರ ಲೋಹಿಯಾ ರವರ ಚಿಂತನೆ ಜನರಿಗೆ ತಲುಪದಂತೆ ಸಂಚು ರೂಪಿಸಿದ್ದ ಕರಾಳ ಅಧ್ಯಾಯ ನಮ್ಮೆದುರಿಗಿದೆ. ಇಂದಿನ ಸಂದರ್ಭದಲ್ಲಿ ಕೇಜ್ರಿವಾಲ್‌ರಂತಹ 'ಹುಚ್ಚ'ರ ಸಂಖ್ಯೆ ಹೆಚ್ಚಾಗುವುದರಲ್ಲಿ ದೇಶದ ಉಜ್ವಲ ಭವಿಷ್ಯ ಅಡಗಿದೆ ಎಂಬುವುದು ನನ್ನ ಅನಿಸಿಕೆ.

**–ಅಜ್ಜಪ್ಪ ಬಿರಡಿ**

ಸಮಾಜವಾದಿ ಚಿಂತಕ ಹಾಗೂ ಕೃಷಿ ಸಹಕಾರಿ

# ಹೊಸ ಭಾರತದ ನಿರ್ಮಾಣದ ಆಶಯ

೧೯೪೯ ನವೆಂಬರ್ ೨೬ ರಂದು ನಮ್ಮ ಸಂವಿಧಾನವನ್ನು ಅಂಗೀಕರಿಸಿದ ದಿನವೇ ೨೦೧೨ ನವೆಂಬರ್ ೨೬ರಂದು ಆಮ್ ಆದ್ಮಿ ಪಾರ್ಟಿಯನ್ನು ಪ್ರಾರಂಭಿಸಲಾಯಿತು. ಕ್ರೇಜಿವಾಲ್‌ರು "ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ೧೯೭೬ರ ನಂತರ ಸಮಾಜವಾದಿ, ಜಾತ್ಯಾತೀತ, ಪ್ರಜಾಪ್ರಭುತ್ವ ಗಣರಾಜ್ಯ ಎಂದಿದೆ ಇದು ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ, ಇದು ಜಾರಿಗೆ ತರಲು ಆಮ್ ಆದ್ಮಿ ಪಾರ್ಟಿ ಪ್ರಾರಂಭಿಸಲಾಗಿದೆ" ಎಂದು ಹೇಳಿಕೆ ನೀಡಿದ್ದರು.

ಇದಕ್ಕೆ ಪೂರಕವಾಗಿ, ಆಂ ಆದ್ಮಿ ಪಕ್ಷದ ಸ್ವರೂಪ ನೋಡಿರಿ: ಈ ಪಕ್ಷದಲ್ಲಿ ಹೈಕಮಾಂಡ್ ವ್ಯವಸ್ಥೆಯಿಲ್ಲ. ಮತ್ತು ಕುಟುಂಬದಿಂದ ಒಬ್ಬರಿಗೆ ಮಾತ್ರ ಪಕ್ಷದಲ್ಲಿ ಟಿಕೆಟ್ ನೀಡಲಾಗುತ್ತದೆ, ಅಧ್ಯಕ್ಷ ಪರಿಕಲ್ಪನೆ ಇಲ್ಲ. ಸಂಚಾಲಕ, ಕಾರ್ಯದರ್ಶಿ, ರಾಷ್ಟ್ರೀಯ ಕಾರ್ಯಕಾರಿಣಿ, ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿ ಅಸ್ತಿತ್ವದಲ್ಲಿದೆ. ಪಾರ್ಟಿಗೆ ಯಾರು ಬೇಕಾದರೂ ಸದಸ್ಯರಾಗಬಹುದು. ಆದರೆ ಪಾರ್ಟಿಯಲ್ಲಿ ಅಂತರಿಕ ಲೋಕಪಾಲ್ ಜಾರಿಯಲ್ಲಿರುತ್ತದೆ. ಭ್ರಷ್ಟಾಚಾರದ ಆರೋಪ ಕಂಡು ಬಂದರೆ ಪಾರ್ಟಿಗೆ ಸಂಬಂಧಪಡದ ಕಾನೂನು ತಜ್ಞರಿಂದ ತನಿಖೆ ನಡೆಸಿ ಆರೋಪ ಸಾಬೀತಾದರೆ ಆ ವ್ಯಕ್ತಿಯನ್ನು ಪಕ್ಷದಿಂದ ತೆಗೆದು ಹಾಕಲಾಗುತ್ತದೆ. ಪಾರ್ಟಿಯಲ್ಲಿ ಭ್ರಷ್ಟ ರಾಜಕಾರಣಿಯನ್ನು ೫ ವರ್ಷ ಸಹಿಸಬೇಕಿಲ್ಲ. ಅವರನ್ನು ಜನರೇ ವಾಪಸ್ಸು ಕಳುಹಿಸುವ ಅಧಿಕಾರ ಆ ಕ್ಷೇತ್ರದ ಜನಗಳಿಗೆ ನೀಡಲಾಗಿದೆ.

ಆಮ್ ಆದ್ಮಿ ಪಾರ್ಟಿಯ ಕಸ ಪೊರಕೆಯ ಚಿಹ್ನೆಯನ್ನು ಪೌರ ಕಾರ್ಮಿಕ ಕಾಲೋನಿಯ ಮೂಲಕ ಉದ್ಘಾಟಿಸಿ ಇದು ಭ್ರಷ್ಟ ರಾಜಕರಣಿಯನ್ನು ತೊಡೆದು ಹಾಕಲು ಬಳಸಲಾಗುತ್ತದೆ ಎಂದು ಘೋಷಿಸಲಾಯಿತು. ಇದಕ್ಕೆ ಪೂರಕವಾಗಿ ರಾಖಿ ಬಿರ್ಲಾ ಎಂಬ ೨೬ ವರ್ಷದ ದಲಿತ ಯುವನಾಯಕಿಯನ್ನು ದೆಹಲಿ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾಗಿ ಮಾಡಲಾಯಿತು. ಇಂಥ ಆಲೋಚನೆ ಹಾಗೂ ಸಿದ್ಧಾಂತ ನಿಜಕ್ಕೂ ನನ್ನಂಥ ಯುವಜನರಲ್ಲಿ ಭರವಸೆ ಮೂಡಿಸುವಂತಿದೆ.

ಜನಲೋಕಪಾಲ್‌ಗಾಗಿ ಮುಖ್ಯಮಂತ್ರಿ ಸ್ಥಾನ ತ್ಯಜಿಸಿದ್ದು. ಜನ ರಾಜಕಾರಣಕ್ಕಾಗಿ ಸ್ವರಾಜ್ ಮಸೂದೆಯನ್ನು ತರಲು ಹೋರಾಡಿದ್ದು ಇದೆಲ್ಲಾ ಪಾರ್ಟಿಯ ವಿಭಿನ್ನತೆಯ ಲಕ್ಷಣಗಳೆಂದೇ ನಾನು ಭಾವಿಸುತ್ತೇನೆ. ಇಷ್ಟಾದರೂ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ ಈಗ ಕನ್ನಡ ಮಾಧ್ಯಮದ ಬಗ್ಗೆ ಸಮಸ್ಯೆ ಶುರುವಾಗಿದೆ. ಸುಪ್ರೀಂ ಕೋರ್ಟ್ ಕನ್ನಡದ ವಿರುದ್ಧವಾಗಿ ತೀರ್ಪು ನೀಡುವ ಸಾಧ್ಯತೆಯಿದೆ. ಒಕ್ಕೂಟ ವ್ಯವಸ್ಥೆಯ ಬಗ್ಗೆ, ಭಾಷಾ ನೀತಿಯ ಬಗ್ಗೆ ಆಮ್ ಆದ್ಮಿ ನಿಲುವೇನು? ಹಾಗೆಯೇ ಇಲ್ಲಿ ಬರುತ್ತಿರುವ ಯುವಕರಲ್ಲಿ ವ್ಯವಸ್ಥೆ ಬದಲಾವಣೆಯ ಬಗ್ಗೆ ತೀವ್ರತರವಾದ ಕಾಳಜಿಯಿದೆ. ಆದರೆ ರಾಜಕೀಯ ಇತಿಹಾಸ ಸಾಮಾಜಿಕ ಸ್ಥಿತಿಗತಿ, ಸಮಾನತೆಯ ಆಶಯಗಳ ಬಗ್ಗೆ ಅಧ್ಯಯನದ ಕೊರತೆಯಿದೆ.



ಇಂಥ ಯುವಕರ ಮನಸ್ಸನ್ನು ಕಟ್ಟುವ ಬಗ್ಗೆ ಆಮ್ ಆದ್ಮಿ ಏನು ಕ್ರಮ ಕೈಗೊಳ್ಳುತ್ತಿದೆ? ನಾವು ಶ್ರೀ ಸಾಮಾನ್ಯ ಪಕ್ಷವಾಗಿ ಆಮ್ ಆದ್ಮಿಯನ್ನು ಕಟ್ಟುವಾಗ ಇಲ್ಲಿನ ಸ್ಥಳೀಯ ಸಮಸ್ಯೆಗಳೇ ಕಣ್ಣುಂದೆ ಬರುತ್ತವೆ. ಈ ನಿಟ್ಟಿನಲ್ಲಿ ಆಮ್ ಆದ್ಮಿಯನ್ನು ಪ್ರಾದೇಶಿಕವಾಗಿ ಗಮನದಲ್ಲಿ ಇಟ್ಟುಕೊಂಡು ಪಕ್ಷವನ್ನು ಕಟ್ಟಬೇಕಾಗುತ್ತದೆ. ಹಾಗೂ ಪಾರ್ಟಿಗೆ ಹರಿದು ಬರುತ್ತಿರುವ ಕಾರ್ಪೋರೇಟ್ ಹಣದ ಬಗ್ಗೆ ಪಾರದರ್ಶಕವಾಗಿದ್ದರೂ ಅದರ ಬಗ್ಗೆ ಎಚ್ಚರಿಕೆಯೂ ಅಷ್ಟೆ ಮುಖ್ಯ. ಆದರೆ ಅನಿಲ ಸರಬರಾಜಿನಲ್ಲಿ ಭ್ರಷ್ಟಚಾರ ಎಸಗಿದ ಆರೋಪದ ಮೇಲೆ ಮುಖೇಶ್ ಅಂಬಾನಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಾರ್ಪೋರೇಟ್ ಕುಳಗಳನ್ನು ಎಚ್ಚರಿಸಿರುವುದು ಇಂದಿನ ರಾಜಕೀಯ ಸಂದರ್ಭದಲ್ಲಿ ಸಾಮಾನ್ಯ ಸಂಗತಿಯೇನಲ್ಲ.

ಅತ್ಯಾಚಾರಕ್ಕೊಳಗಾದ, ನೊಂದ ಮಹಿಳೆ ಸೂರಿಲ್ಲದ, ಶೌಚಾಲಯಗಳಿಲ್ಲದ ಕುಟುಂಬ, ಹಳ್ಳಿಯ ಅನಕ್ಷರಸ್ತ ವ್ಯಕ್ತಿ, ನೊಂದ ದಲಿತ ಇವರೆಲ್ಲ ಬಂಡುಕೋರರಾಗದಿದ್ದರೆ ಅಥವಾ ಇಂಥವರನ್ನು ಪ್ರತಿನಿಧಿಸಿದ ಪಕ್ಷ ಹಾಗೆ ನಡೆದುಕೊಳ್ಳದಿದ್ದರೆ ವ್ಯವಸ್ಥೆ ಇಂತವರನ್ನು ನೋವಲ್ಲೇ ಇಡುತ್ತದೆ. ಈ ಹಿನ್ನೆಲೆಯಲ್ಲಿ ಕ್ರೇಜಿವಾಲರು ನಡೆಸಿದ ಅರಾಜಕವೆಂದು ಕರೆಯಲ್ಪಟ್ಟ ಬೀದಿ ಬದಿಯ ರಾಜಕಾರಣ ಇಂಥವರ ನೋವಿಗೆ ಸ್ಪಂದಿಸಿ ಅವರ ಸಿಟ್ಟನ್ನು ವ್ಯವಸ್ಥೆಯ ಮುಖಕ್ಕೆ ಹಿಡಿಯಲು ಅನುಸರಿಸಿದ ನ್ಯಾಯಬದ್ಧ ಮಾರ್ಗ ಎಂದೇ ನನಗನಿಸುತ್ತದೆ. ಒಟ್ಟಿನಲ್ಲಿ ಈ ಪಕ್ಷ ಯುವಸಮೂಹ ಹೊಸ ಭಾರತ ನಿರ್ವಾಣಕ್ಕೆ ಮುಂದಾಗಿರುವುದರ ಪ್ರತೀಕವಾಗಿ ನನಗೆ ಕಾಣುತ್ತದೆ.

**–ಅಪೂರ್ವ ಡಿ'ಸಿಲ್ವ**

ವ್ಯಾಪಾರಿ ಹಾಗೂ ಯುವ ಸಮಾಜವಾದಿ

**' ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ಸಂಪಾದಕರಿಗೆ ತಿಳಿಸಬೇಕು. ಚಂದಾ ವಿವರ ಹಾಗೂ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.**–ಸಂಪಾದಕ

# ಹೀಗೇ ಮುಂದುವರಿದ ಟಿಪ್ಪಣಿಗಳು...

## ಸಾಹಿತ್ಯ-ಸಂಸ್ಕೃತಿ-ಸಮಾಜ ಇತ್ಯಾದಿ

**ಪ**ತ್ರಿಕೆಯ ಕಳೆದ ಸಂಚಿಕೆಯ ಈ ಪುಟದಲ್ಲಿ 'ಹೀಗೇ ಕೆಲವು ಬಿಡಿ ಟಿಪ್ಪಣಿಗಳು' ಶೀರ್ಷಿಕೆಯಡಿ ನಾನು ಬರೆದ ಕೆಲವು ಮಾತುಗಳ ಬಗ್ಗೆ 'ನಿಮ್ಮ ಮಾತು'ನಲ್ಲಿನ ಕೆಲವು ಅಭಿಪ್ರಾಯಗಳು ಸೂಚಿಸುತ್ತಿರುವಂತೆ ಮಿಶ್ರ ಪ್ರತಿಕ್ರಿಯೆ ಬಂದಿದೆ. ಇದಲ್ಲದೆ ನನ್ನ ಕೆಲವು ಮಿತ್ರರೂ ಕರೆ ಮಾಡಿ ಕೆಲ ಮಾತುಗಳನ್ನಾಡಿದ್ದಾರೆ. ಶ್ರೀನಿವಾಸ ಕಾರ್ಕಳರು ನನ್ನ ಭಾಷೆ ಅವರೂರಿನ ಸಂಜೆ ಪತ್ರಿಕೆಯ ಭಾಷೆಯಂತಿದೆ ಎಂದಿರುವುರಲ್ಲದೆ(ಹಾಗೆಂದರೇನೆಂದು ಈ ಊರಿನಲ್ಲಿರುವ ನನಗೆ ತಿಳಿಯದು!), ವೈಯುಕ್ತಿಕ ದ್ವೇಷ ಸಾಧನೆಗಾಗಿ ಪತ್ರಿಕೆ ಬಳಸಿಕೊಳ್ಳುತ್ತಿರುವ ಆರೋಪ ಮಾಡಿದ್ದಾರೆ. ನಾನು ಯಾರ್‍ಯಾರ ಬಗ್ಗೆ ಕಳೆದ ಬಾರಿ ಬರೆದಿರುವೆನೋ ಅವರ ಬಗ್ಗೆ ನನಗೆ ವೈಯುಕ್ತಿಕ ದ್ವೇಷವಿದೆ ಎಂಬುದಕ್ಕೆ ಕಾರ್ಕಳರ ಬಳಿ ಏನು ಆಧಾರವಿದೆಯೋ ನನಗೆ ತಿಳಿಯದು! ನನ್ನ ಇನ್ನೋರ್ವ ಸ್ನೇಹಿತರು ಕರೆ ಮಾಡಿ, ಅನಂತಮೂರ್ತಿಯವರು ಇಳಿ ವಯಸ್ಸಿನ ಅಸ್ವಸ್ಥತೆಯಲ್ಲಿರುವಾಗ ಹೀಗೆ ಟೀಕೆ ಮಾಡಬಾರದಿತ್ತು ಎಂದು 'ಮಾನವೀಯತೆ'ಯ ಪರಿಭಾಷೆಯಲ್ಲಿ ತಮ್ಮ ಪ್ರತಿಕ್ರಿಯೆ ನೀಡಿದರು. ಆದರೆ ಅನಂತಮೂರ್ತಿಯವರ ಯಾವ ಮಾತು ನನ್ನ ಟೀಕೆಗೆ ಒಳಗಾಗಿದೆಯೋ ಅದನ್ನು ಅನಂತಮೂರ್ತಿಯವರು ಆಡಿರುವುದೂ ಆ ಇಳಿವಯಸ್ಸಿನ ಅಸ್ವಸ್ಥತೆಯಲ್ಲಿಯೇ, ಧಾರವಾಡಕ್ಕೆ ದೂರ ಪ್ರಯಾಣ ಮಾಡಿ ಎಂಬುದನ್ನು ಇವರೇಕೆ ಮರೆಯುತ್ತಾರೋ ತಿಳಿಯದು! ವೈಯುಕ್ತಿಕ ದ್ವೇಷ ಸಾಧನೆಯ ಮಾತಾಡಿರುವವರು ಎರಡು ಸಂಚಿಕೆಗಳ ಹಿಂದೆ ಅನಂತಮೂರ್ತಿಯವರ ಬಗ್ಗೆ ನಾನು ಬರೆದಿರುವ ಮಾತುಗಳನ್ನು ದಯವಿಟ್ಟು ಗಮನಿಸಬೇಕು.

ಸಾಹಿತ್ಯ–ಸಂಸ್ಕೃತಿಗೆ ಸಂಬಂಧಪಟ್ಟಂತೆ ಆಡಲಾಗುವ ಮಾತುಗಳಿಗೆಲ್ಲ ವೈಯುಕ್ತಿಕ ದ್ವೇಷ ಸಾಧನೆಯ ಟೋಪಿ ಹಾಕತೊಡಗಿದರೆ, ಸಾಹಿತ್ಯ ಚರ್ಚೆ ಎಂಬುದು 'ಪಬ್ಲಿಕ್ ರಿಲೇಷನ್ಸ್'ನ ಕಸರತ್ತು ಮಾತ್ರ ಆದೀತೇನೋ. ನನ್ನ ಮಾತುಗಳು ಅನುಚಿತವಾದವು ಎನ್ನಿಸಿದವರು, ನಾನು ಮಾಡಿರುವ ಟೀಕೆಗಳಿಗೆ ಕಾರಣವಾಗಿರುವ ವಿಷಯವನ್ನೆತ್ತಿಕೊಂಡು ವಾದಿಸಿದ್ದರೆ ಹೆಚ್ಚು ಉಚಿತವಾಗುತ್ತಿತ್ತೇನೋ. ಮಾತುಗಳು ಉಗ್ರವಾದವು ಎನ್ನುವವರು, ಆ ಉಗ್ರತೆ ಹುಟ್ಟಿರುವುದು ಎತ್ತಿಕೊಂಡ ವಿಷಯದ ಸೂಕ್ಷ್ಮತೆಯಲ್ಲಿ, ಗಹನತೆಯಲ್ಲಿ, ಗಂಭೀರತೆಯಲ್ಲಿ ಎಂಬುದನ್ನು ಗಮನಿಸಿದಂತಿಲ್ಲ. ಸಾಹಿತ್ಯ–ಸಂಸ್ಕೃತಿ ಕ್ಷೇತ್ರಗಳಲ್ಲಿ ಅಭಿಮಾನಿ ಸಂಘಗಳ ರಾಜಕಾರಣ ತುಂಬ ಅಪಾಯಕಾರಿ ಎಂದಷ್ಟೇ ನಾನು ಇಲ್ಲಿ ಹೇಳಬಯಸುವೆ.

'ನುಡಿಸಿರಿ'ಯಲ್ಲಿ ವೀರೇಂದ್ರ ಹೆಗ್ಗಡೆಯವರ ಪಾತ್ರವಿದೆಯೆಂದು ಅದನ್ನು ವಿರೋಧಿಸಲಾಗುತ್ತದೆಯಂತೆ! ನನಗಿದು ನಿಜವಾಗಿಯೂ ಅರ್ಥವಾಗದ ವಿಷಯ. ಮೊದಲಿಗೇ ನಾನು ಸ್ಪಷ್ಟಪಡಿಸಿಬಿಡುವೆ: ನಾನು 'ನುಡಿಸಿರಿ'ಯ ಬೆಂಬಲಿಗನೂ ಅಲ್ಲ; ವೀರೇಂದ್ರ ಹೆಗ್ಗಡೆಯವರ ಅಭಿಮಾನಿಯಂತೂ ಅಲ್ಲವೇ ಅಲ್ಲ. ಅದರ ನಮ್ಮ ಸರ್ಕಾರಿ ಪ್ರಾಯೋಜಿತ ಸಾಹಿತ್ಯ ಸಮ್ಮೇಳನಗಳು ಸಂಪೂರ್ಣ ನಿರರ್ಥಕವೆನ್ನಿಸತೊಡಗಿರುವ ಈ ಹೊತ್ತಿನಲ್ಲಿ, 'ನುಡಿಸಿರಿ' ಅನಗತ್ಯವೆನ್ನಿಸುವ ತನ್ನ ಖಾಸಗಿ ವೈಭವದ ನಡುವೆಯೂ ಸಾಹಿತ್ಯ–ಸಂಸ್ಕೃತಿಗಳ ಸಂಬಂಧವಾಗಿ ಒಂದಿಷ್ಟು ಅರ್ಥಪೂರ್ಣ ಸಾಧನೆ ಮಾಡುತ್ತಿದೆ ಎಂದು ನನಗನ್ನಿಸುತ್ತಿದೆ. ಮೋಹನ ಆಳ್ವರು ವೀರೇಂದ್ರ ಹೆಗ್ಗಡೆಯವರೊಡಗೂಡಿ 'ನುಡಿಸಿರಿ'ಯ ಮೂಲಕ ಯಾವ ಸ್ವಾರ್ಥ ಸಾಧನೆಯಲ್ಲಿ ತೊಡಗಿದ್ದಾರೆ ಎಂಬುದನ್ನು ಯಾರಾದರೂ ವಿಷದವಾಗಿ ವಿವರಿಸಿದರೆ ಒಳ್ಳೆಯದು. ಯಾವುದೋ ಸಾಹಿತ್ಯೇತರ ವಿಷಯಕ್ಕೆ ಸಂಬಂಧಿಸಿದ ವೀರೇಂದ್ರ ಹೆಗ್ಗಡೆಯವರ ಬಗೆಗಿನ ಕ್ರೋಧ ಇಲ್ಲೇಕೆ ತಲೆಹಾಕಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಕಾರ ಸಾಹಿತ್ಯ ಕ್ಷೇತ್ರದಲ್ಲಿ ಕ್ರಿಯಾಶೀಲವಾಗುವ ವೈಯುಕ್ತಿಕ ದ್ವೇಷದ ಮಾದರಿ ಎಂದರೆ ಇದು!

ನನ್ನ ಇನ್ನೋರ್ವ ಗೆಳೆಯರು ಕರೆ ಮಾಡಿ ಸಾಹಿತ್ಯದ ಸ್ವಾಯತ್ತತೆಯ ಬಗ್ಗೆ ನಾನು ಆಡಿರುವ ಮಾತನ್ನು ಒಪ್ಪುವುದಿಲ್ಲ ಎಂದರು. .ಒಪ್ಪುವುದು ಬಿಡುವುದು ಅವರ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಷಯ. ಆದರೆ ಸಾಹಿತ್ಯ, ಬೇರೇನೋ ಆಗದೆ ಸಾಹಿತ್ಯವೇ ಅನ್ನಿಸಿಕೊಳ್ಳುವುದು ಅದರೊಳಗಿನ ತನ್ನದೇ ಆದ ಒಳಶಕ್ತಿಯ ಸ್ಫುರಣದಿಂದ ಎಂದು ಅರಿಯದವರೊಂದಿಗೆ ನನ್ನ ಚರ್ಚೆಯೇ ಇಲ್ಲ. ಏಕೆಂದರೆ ಇವರು ಮನುಷ್ಯ ಮೂಲತಃ ಸಮಾಜದಲ್ಲಿ ಬದುಕುವುದರಿಂದ ಮತ್ತು ಹಾಗಾಗಿ ತಾನಿರುವ ಸಮಾಜದ ಸುಧಾರಣೆಗಾಗಿ ಪ್ರಯತ್ನಿಸುವುದು ಅವನ ಕರ್ತವ್ಯವೂ ಆಗಿರುವುದರಿಂದ ಸಾಹಿತ್ಯ ಸಮಾಜಕ್ಕೆ ಬದ್ಧವಾಗಿರಬೇಕು ಎಂಬ ವಾದ ಮಂಡಿಸುತ್ತಾರೆ. ಆದರೆ ಮನುಷ್ಯ ಎಂದರೇನು? ಸಮಾಜ ಎಂದರೇನು? ಸುಧಾರಣೆ ಎಂದರೇನು? ಬದ್ಧತೆ ಎಂದರೇನು? ಈ ಶಬ್ದಗಳ ಆಳ ವಿಸ್ತಾರಗಳೇನು ಎಂಬುದರ ಗೊಡವೆಗೇ ಹೋಗದ ಇವರೊಂದಿಗೆ ವಾದಕ್ಕಿಳಿಯುವುದು ವ್ಯರ್ಥವೆಂದು ನನ್ನ ಅನುಭವ ಹೇಳುತ್ತಿದೆ. ಸಾಹಿತ್ಯಕ್ಕೆ ಕೈ ಕಾಲು, ಬಾಯಿಗಳಷ್ಟೇ ಇರುವುದೆಂದು ಭಾವಿಸಿ ಅವನ್ನಷ್ಟೇ ಹಿಡಿದು ಅಲ್ಲಾಡಿಸುವ ಈ ಸಾಹಿತ್ಯದ ಸಾಮಾಜಿಕತಾವಾದಿಗಳು ಕಳೆದ ಮೂರು ದಶಕಗಳಲ್ಲಿ ಕನ್ನಡ ಸಾಹಿತ್ಯ ಹೃದಯ ಸ್ಪಂದನಕ್ಕೆ ಮಾಡಿರುವ ಆಘಾತ ಕಡಿಮೆಯೇನಲ್ಲ. ಆದರೆ ಕನ್ನಡ ಸಾಹಿತ್ಯ ಪರಂಪರೆ ದೀರ್ಘವಾದದ್ದು ಮತ್ತು ಭದ್ರ ಸಾಹಿತ್ಯಿಕ ಅಡಿಪಾಯಗಳ ಮೇಲೆ ನಿಂತಿರುವುದು. ಹಾಗಾಗಿ ಈ ಆಘಾತಗಳನ್ನೆಲ್ಲ ಸಹಿಸಿ ಅದು ತನ್ನ ಸಹಜ ದಾರಿಯಲ್ಲಿ ನಡೆದಿದೆ.

ಮೊನ್ನೆ ಒಬ್ಬರು ಕೇಳಿದರು: ಕುಂವೀ, ಅನಂತಮೂರ್ತಿ ಮತ್ತು ಕಾರ್ನಾಡರು ಜ್ಞಾನಪೀಠಕ್ಕೆ ಅನರ್ಹರು ಎಂದಿದ್ದಾರಲ್ಲ? ಅದಕ್ಕೆ ನನ್ನ ಉತ್ತರ: ಕುಂವೀಯವರು ಜ್ಞಾನಪೀಠ, ಅನಂತಮೂರ್ತಿ, ಕಾರ್ನಾಡರ ಬಗ್ಗೆ ಮಾತನಾಡಬಲ್ಲಷ್ಟು ಸಾಹಿತ್ಯಿಕ ಸಾಧನೆ ಮಾಡಿದ್ದಾರೆ ಎಂದು ಭಾವಿಸಿ ನೀವು ಈ ಪ್ರಶ್ನೆಯನ್ನು ಕೇಳುತ್ತಿದ್ದರೆ ನನ್ನಲ್ಲಿ ಉತ್ತರವಿಲ್ಲ.

**–ಡಿ.ಎಸ್. ನಾಗಭೂಷಣ**

Statement about Ownership and other particulars about Newspaper 'Hosa Manushya'

**FORM 1V(See Rule 8)**

| | | |
|---|---|---|
| 1. Place of publication: | | Shimoga |
| 2. Printers name: | | D.S. Nagabhushana |
| | Nationality: | Indian |
| | Address: | HIG-5, 'Nudi', Kallahalli Extn., Vinobanagara, Shimoga-577204 |
| 3. Publishers Name: | | D.S.Nagabhushana |
| | Nationality: | Indian |
| | Address: | Same as above |
| 4. Editor's name: | | D.S.Nagabhushana |
| | Nationality: | Indian |
| | Address: | Same as above |
| 5. Name of Individuals who own the News paper: | | D.S.Nagabhushana, |
| | Address: | Same as above |

I, D.S.Nagabhushana hereby declare that the particulars given above are true to the best of my knowledge and belief.

Shimoga Sd/-
31.3.2014 D.S.Nagabhushana

## ಪುಸ್ತಕಾವಲೋಕನ

ಪುಸ್ತಕ: *ಸಿರಿಗನ್ನಡ* ಪ್ರಧಾನ ಸಂ: **ಡಾ. ಮೋಹನ ಆಳ್ವಾ** ಸಂ: **ಪ್ರೊ. ಎ.ವಿ. ನಾವಡ ಹಾಗೂ ಇತರ ಐವ್ವರು** ಪ್ರ: **ಆಳ್ವಾಸ್ ಪ್ರಕಾಶನ. ಮೂಡುಬಿದ್ರಿ** ಪು: ೯೬೦ ಬೆಲೆ: ರೂ. ೧೦೦೦/-

# ಕನ್ನಡ ಸಂಸ್ಕೃತಿಗೊಂದು ಅಪರೂಪದ ಆಕರ ಗ್ರಂಥ




**ಕ**ಳೆದ ಹತ್ತು ವರ್ಷಗಳಿಂದ ಆಳ್ವಾಸ್ ನುಡಿಸಿರಿ ಮತ್ತು ಆಳ್ವಾಸ್ ವಿರಾಸತ್ ಎಂಬ ವಿಶಿಷ್ಟವಾದ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿರುವ ಮೂಡುಬಿದರೆಯ ಡಾ. ಮೋಹನ್ ಆಳ್ವ ಅವರು ಹತ್ತನೆಯ ವರ್ಷದಲ್ಲಿ ನಡೆಸಿದ ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್ ೨೦೧೩ರ ನೆನಪಿನ ಸಂಪುಟವೇ 'ಸಿರಿಗನ್ನಡ'. ಈ ಬೃಹತ್ ಸಂಪುಟದಲ್ಲಿ ಒಂಬತ್ತು ಭಾಗಗಳಲ್ಲಿ ಹರಡಿರುವ ೧೦೦ ಬರಹಗಳಿವೆ. ೭೫ ಪುಟಗಳಲ್ಲಿ ಕರ್ನಾಟಕದ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಜಗತ್ತನ್ನು ಅನಾವರಣ ಮಾಡುವ ನೂರಕ್ಕೂ ಹೆಚ್ಚು ಫೋಟೋಗಳಿರುವ ಈ ಗ್ರಂಥದ ಮುದ್ರಣ, ಅಚ್ಚುಕಟ್ಟು ಕಣ್ಮನ ಸೆಳೆಯುವಂತಿವೆ.

'ತೋರಣನಾಂದಿ' ಎಂಬ ಮೊದಲ ಭಾಗದಲ್ಲಿ ಕುವೆಂಪು ಅವರ ನಾಡಗೀತೆ, ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು', ಗೋವಿಂದ ಪೈ ಅವರ 'ಕನ್ನಡಿಗರ ತಾಯಿ' ಎಂಬ ಕವನಗಳೂ, ಹಲ್ಮಿಡಿ ಶಾಸನ ಮತ್ತು ಬಾದಾಮಿ ಶಾಸನಗಳನ್ನು ಪ್ರಕಟಿಸಿರುವುದು ಔಚಿತ್ಯಪೂರ್ಣವಾಗಿದ್ದು ಕನ್ನಡದ ಬಗ್ಗೆ ಅಭಿಮಾನ ಮೂಡಿಸುತ್ತವೆ. 'ಕನ್ನಡದ ಮನಸ್ಸು' ಎಂಬ ಎರಡನೆಯ ಭಾಗದಲ್ಲಿ ಬಿ.ಎಂ.ಶ್ರೀ ಅವರ 'ಕನ್ನಡ ಮಾತು ತಲೆ ಎತ್ತುವ ಬಗೆ' ಮತ್ತು ಕುವೆಂಪು ಅವರ 'ಪ್ರಸಾರಾಂಗ' ವಿಶೇಷ ಐತಿಹಾಸಿಕ ಮಹತ್ವ ಪಡೆದ ಲೇಖನಗಳು. ಆರ್.ವಿ.ಎಸ್.ಸುಂದರಂ ಅವರು 'ಶಾಸ್ತ್ರೀಯ ಭಾಷೆಯಾಗಿ ಕನ್ನಡ'ದ ಸ್ಥಿತಿಗತಿಗಳ ಬಗ್ಗೆ, ಬಂಜಗೆರೆ ಜಯಪ್ರಕಾಶ್ ಅವರು ಕರ್ನಾಟಕತ್ವದ ಬಗ್ಗೆ, ವಿವೇಕ ರೈ ಅವರು ಕನ್ನಡದ ವಿಶ್ವಾತ್ಮಕತೆ ಹಾಗೂ ಕನ್ನಡದಲ್ಲಿ ವಿಶ್ವಾತ್ಮಕತೆಯ ಬಗ್ಗೆ ವಿಚಾರ ಮಾಡಿದ್ದಾರೆ. ಯು.ಆರ್.ಅನಂತಮೂರ್ತಿ ಅವರು ಕನ್ನಡ ಜ್ಞಾನ ಸೃಷ್ಟಿಸುವ ಭಾಷೆಯಾಗಬೇಕು, ಇಂಗ್ಲಿಷ್ ಸಂವಹನದ ಭಾಷೆ ಮಾತ್ರ ಆಗಿರಬೇಕೆಂದು ಪ್ರತಿಪಾದಿಸಿದ್ದಾರೆ. ಕನ್ನಡ ರಾಷ್ಟ್ರೀಯತೆಯ ಬಗ್ಗೆ ಡಿ.ಆರ್.ನಾಗರಾಜ್, ಕನ್ನಡ ಕಟ್ಟುವ ಕಾಯಕದ ನೆಲೆಗಳ ಬಗ್ಗೆ ಡಿ.ಎಸ್.ನಾಗಭೂಷಣ, ಕನ್ನಡ ಸಂಸ್ಕೃತಿ ಶೋಧ ಮತ್ತು ಕನ್ನಡ ಸಂಸ್ಕೃತಿ ಚಿಂತನೆಯ ಬಗ್ಗೆ ಓ.ಎಲ್.ನಾಗಭೂಷಣಸ್ವಾಮಿ ತಾತ್ವಿಕವಾಗಿ ವಿಚಾರ ಮಾಡಿದ್ದಾರೆ.

'ನಮ್ಮ ಕರ್ನಾಟಕ' ಎಂಬ ಮೂರನೆಯ ಭಾಗದಲ್ಲಿ ಕರ್ನಾಟಕದ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರಗಳ ಬಗ್ಗೆ ಮಾತ್ರವಲ್ಲದೆ ಜೀವವೈವಿಧ್ಯ, ಕೃಷಿ ಹಾಗೂ ಬುಡಕಟ್ಟುಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಒಳಗೊಂಡ ಲೇಖನಗಳನ್ನು ಪ್ರಧಾನ್ ಗುರುದತ್ತ, ಎಚ್.ತಿಪ್ಪೇರುದ್ರಸ್ವಾಮಿ ಮೊದಲಾದ ೧೧ ಜನ ವಿದ್ವಾಂಸರು ಬರೆದಿದ್ದಾರೆ. 'ಕಲಾಲೋಕ' ಎಂಬ ನಾಲ್ಕನೆಯ ಭಾಗದಲ್ಲಿ ಕಲೆಯ ವಿವಿಧ ಪ್ರಕಾರಗಳು, ಇತಿಹಾಸ ಮತ್ತು ಸಾಧನೆಗಳ ಬಗ್ಗೆ ಸಿಂಧುವಳ್ಳಿ ಅನಂತಮೂರ್ತಿ, ಎಂ.ಎಂ.ಕಲಬುರ್ಗಿ, ಬಿ.ವಿ.ಕೆ.ಶಾಸ್ತ್ರಿ ಮೊದಲಾದ ವಿದ್ವಾಂಸರ ವಿಮರ್ಶಾತ್ಮಕ ಸಮೀಕ್ಷೆಗಳಿವೆ. 'ಚಳುವಳಿಗಳು' ಎಂಬ ಐದನೆಯ ಭಾಗದಲ್ಲಿ ಕನ್ನಡ ಸಾಹಿತ್ಯ ಚಳುವಳಿಗಳ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರ ವಿಮರ್ಶಾತ್ಮಕ ಲೇಖನವಿದೆ. ಇತರ ಚಳುವಳಿಗಳ ಬಗ್ಗೆ ಅಶ್ವತ್ಥನಾರಾಯಣ, ಹೆಚ್.ಎನ್.ಗೋಪಾಲರಾವ್ ಹಾಗೂ ಎ.ಎಸ್.ವೇಣುಗೋಪಾಲರಾವ್ ಅವರ ಲೇಖನಗಳಿವೆ. ಆರನೆಯ ಭಾಗವಾದ 'ಮಾಧ್ಯಮ'ದಲ್ಲಿ ಚಲನಚಿತ್ರ, ಆಕಾಶವಾಣಿ, ವಿದ್ಯುನ್ಮಾನ ಮಾಧ್ಯಮಗಳು, ಪುಸ್ತಕೋದ್ಯಮ, ಪತ್ರಿಕೋದ್ಯಮ ಹಾಗೂ ಸಾಹಿತ್ಯ ಪತ್ರಿಕೆಗಳ ಬಗ್ಗೆ ನಿರಂಜನ ವಾನಳ್ಳಿ, ಜಿ.ಕೆ. ರವೀಂದ್ರ ಕುಮಾರ್ ಮೊದಲಾದ ವಿಷಯತಜ್ಞರ ಲೇಖನಗಳಿವೆ.

'ಭಾಷಾಲೋಕ' ಎಂಬ ಏಳನೆಯ ಭಾಗದಲ್ಲಿ ಕನ್ನಡ ಭಾಷಾಧ್ಯಯನ, ವ್ಯಾಕರಣ ಮತ್ತು ನಿಘಂಟಿನ ಬಗ್ಗೆ ಹತ್ತು ಲೇಖನಗಳಿವೆ. ಡಿ.ಎನ್.ಶಂಕರಭಟ್ಟ ಮತ್ತು ಕೆ.ವಿ.ನಾರಾಯಣರ ಲೇಖನಗಳು ಹೊಸ ರೀತಿಯ ವಾಗ್ವಾದಗಳನ್ನು ಹುಟ್ಟುಹಾಕಿವೆ.

'ಸಾಹಿತ್ಯಲೋಕ' ಎಂಬ ಎಂಟನೆಯ ಭಾಗದಲ್ಲಿ ಆಧುನಿಕಪೂರ್ವ ಸಾಹಿತ್ಯದ ಬಗ್ಗೆ ೯ ಲೇಖನಗಳು ಮತ್ತು ಆಧುನಿಕ ಸಾಹಿತ್ಯದ ಬಗ್ಗೆ ೮ ಲೇಖನಗಳಿವೆ. ಕನ್ನಡ ಸಾಹಿತ್ಯ ಚರಿತ್ರೆಯ ಬಗ್ಗೆ ಡಾ.ಹಾ.ಮಾ. ನಾಯಕರ ಲೇಖನವಿದೆ. ಹಳೆಗನ್ನಡ, ನಡುಗನ್ನಡ ಸಾಹಿತ್ಯ ಪ್ರಕಾರಗಳ ಬಗ್ಗೆ ಎಂ.ಎಂ. ಕಲಬುರ್ಗಿ, ಎಂ.ಚಿದಾನಂದ ಮೂರ್ತಿ, ಕಿ.ರಂ.ನಾಗರಾಜ ಮೊದಲಾದವರ ಸಮೀಕ್ಷಾ ಲೇಖನಗಳಿವೆ. ಆಧುನಿಕ ಸಾಹಿತ್ಯದ ವಿವಿಧ ಪಂಥಗಳ ಬಗ್ಗೆ ಹೆಚ್.ಎಸ್.ರಾಘವೇಂದ್ರರಾವ್, ಚಿ.ಶ್ರೀನಿವಾಸರಾಜು, ನರಹಳ್ಳಿ ಬಾಲಸುಬ್ರಹ್ಮಣ್ಯ, ಪುರುಷೋತ್ತಮ ಬಿಳಿಮಲೆ, ಬರಗೂರು ರಾಮಚಂದ್ರಪ್ಪ, ಗಾಯತ್ರಿ ನಾವಡ, ಹೆಚ್.ಎಸ್. ವೆಂಕಟೇಶಮೂರ್ತಿ, ಚಂದ್ರಶೇಖರ ನುಂಗಲಿ ತಾತ್ವಿಕ ನೆಲೆಗಳಲ್ಲಿ ವಿಚಾರ ಮಾಡಿದ್ದಾರೆ.

ಒಂಬತ್ತನೆಯ ಭಾಗವಾದ 'ಆಕರಲೋಕ'ದಲ್ಲಿ ೨೮ ಲೇಖನಗಳಿವೆ. ಸಿ.ಎನ್.ರಾಮಚಂದ್ರನ್ ಅವರ ಲೇಖನದಲ್ಲಿ ಆಕರ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ ಕನ್ನಡದಲ್ಲಿ ಗಂಭೀರವಾಗಿ ಶಿಸ್ತಾಗಿ ಬೆಳೆಯಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ. ಗ್ರಂಥ ಸಂಪಾದನೆ ಮತ್ತು ಹಸ್ತಪ್ರತಿ ಶಾಸ್ತ್ರದ ಬಗ್ಗೆ ೧೨ ಲೇಖನಗಳಿವೆ. ಎಂ.ವಿ.ಸೀತಾರಾಮಯ್ಯ, ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ ಮೊದಲಾದ ವಿದ್ವಾಂಸರು ಈ ಲೇಖನಗಳನ್ನು ಬರೆದಿದ್ದಾರೆ. ಗ್ರಂಥ ಸಂಪಾದನೆಗಿಂತ ಜನಪದ ಸಾಹಿತ್ಯ ಸಂಪಾದನೆ ಹೇಗೆ ಭಿನ್ನವಾದುದು ಎಂಬುದನ್ನು ಎ.ವಿ.ನಾವಡರ ಲೇಖನದಲ್ಲಿ ವಿವರಿಸಲಾಗಿದೆ. ಎನ್.ಎಸ್.ತಾರಾನಾಥ, ಎಸ್. ಶಿವಣ್ಣ, ಕೆ.ಜಿ.ನಾರಾಯಣ ಪ್ರಸಾದ್ ಅವರು ಸಂಶೋಧನೆಯ ಬಗ್ಗೆ ಬರೆದಿದ್ದಾರೆ. ಕನ್ನಡ ಭಾಷಾಂತರ, ವಿಶ್ವಕೋಶಗಳು, ಹಾಸ್ಯ ಮೀಮಾಂಸೆ, ಛಂದಸ್ಸು, ಶಾಸನಗಳು, ಜಾನಪದ, ವಿಜ್ಞಾನ ಸಾಹಿತ್ಯ, ಮುದ್ರಣ ಕ್ಷೇತ್ರ, ಮಾಹಿತಿ ತಂತ್ರಜ್ಞಾನ ಈ ಕ್ಷೇತ್ರಗಳ ಅಧ್ಯಯನ, ಇತಿಹಾಸ ಮತ್ತು ಸಾಧನೆಗಳ ಬಗ್ಗೆ ಮೋಹನ ಕುಂಟಾರ್, ಬಿ. ಶಾಮಸುಂದರ, ಜಿ.ಎಂ.ಹೆಗಡೆ, ಕಬ್ಬಿನಾಲೆ ವಸಂತ ಭಾರದ್ವಾಜ್, ನೇಗಿನೆಹಾಳ, ತೀ.ನಂ.ಶಂಕರನಾರಾಯಣ, ಎಚ್.ಆರ್.ರಾಮಕೃಷ್ಣರಾವ್, ಶ್ರೀನಿವಾಸ ಹಾವನೂರ ಮತ್ತು ಯು.ಬಿ. ಪವನಜ ಅವರ ಲೇಖನಗಳಿವೆ.

ಈ ಗ್ರಂಥ ಕನ್ನಡ ಸಾಹಿತ್ಯ, ಭಾಷೆ, ಇತಿಹಾಸ ಹಾಗೂ ಸಂಸ್ಕೃತಿ ಕ್ಷೇತ್ರಗಳ ಅಧ್ಯಯನ ಮಾಡುವವರಿಗೆ ಅತ್ಯಂತ ಉಪಯುಕ್ತ ಆಕರ ಗ್ರಂಥವಾಗಿದೆ. ತುಳುವರಾದ ಡಾ.ಮೋಹನ ಆಳ್ವ ಅವರ ಕನ್ನಡ ಪ್ರೀತಿ ಹಾಗೂ ಈ ಅಸಾಧಾರಣ ಗ್ರಂಥವನ್ನು ಪ್ರಕಟಿಸಿರುವ ಅವರ ಬದ್ಧತೆ ಮತ್ತು ಸಾಹಸ ಶ್ಲಾಘನೀಯವಾದುದು. ಅವರಿಗೆ ಮತ್ತು ಸಂಪಾದಕ ಮಂಡಳಿಯಲ್ಲಿರುವ ಎ.ವಿ. ನಾವಡ, ಡಾ. ಸತ್ಯನಾರಾಯಣ ಮಲ್ಲಿಪಟ್ಣ, ಡಾ. ಪಾದೇಕಲ್ಲು ವಿಷ್ಣು ಭಟ್, ಡಾ. ಗಾಯತ್ರಿ ನಾವಡ, ಡಾ. ಬಿ.ಟಿ. ಸಂಪತ್ಕುಮಾರ್ ಹಾಗೂ ಡಾ. ಧನಂಜಯ ಕುಂಬ್ಳೆ ಅವರಿಗೆ ತುಂಬು ಅಭಿನಂದನೆಗಳು ಸಲ್ಲುತ್ತವೆ.

**–ಡಾ. ತೀ.ನಂ.ಶಂಕರನಾರಾಯಣ**

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

# ಕರ್ಣಾಟಕ ಬ್ಯಾಂಕ್

ಶಿವಾನಂದನಗರ ಶಾಖೆ

ಧಾರವಾಡ

ನಮ್ಮ ಕುಟುಂಬದ ಬ್ಯಾಂಕ್

ಭಾರತದಾದ್ಯಂತ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ




**ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 30600600**

**ಹೊಸ ಮನುಷ್ಯ'ದ ಓದುಗರಿಗೆ**

**ಹೃತ್ಪೂರ್ವಕ ಶುಭಾಶಯಗಳು**



**ಜಿ.ಬಿ. ಶಿವರಾಜು**

ಹಾಗೂ **ಕುಟುಂಬ**

ಬೆಂಗಳೂರು

## ತಿಂಗಳ ಸಾಲುಗಳು....



ಆಧುನಿಕ ಭಾರತ ತನ್ನ ಪುರಾತನ ಕಸುವನ್ನು ಗಳಿಸಿಕೊಳ್ಳಲಾರದು. ಆದರೆ ಈ ದೇಶವನ್ನು ಕೃತಕವಾಗಿ ಹಾಗೂ ಮೇಲ್ಮೈ ಮಟ್ಟದಲ್ಲಿ ಐರೋಪ್ಯೀಕರಣಗೊಳಿಸುವಂತಹ ಆಧುನೀಕರಣ ಬೇಡ. ಅದು ಅಪಾಯಕಾರಿ.

-ಡಾ. ರಾಮ ಮನೋಹರ ಲೋಹಿಯಾ

(ಮಾರ್ಚ್, ೨೩ ಲೋಹಿಯಾರ ಜನ್ಮದಿನ)

**ಪತ್ರಿಕೆಗೆ ಶುಭ ಕೋರುತ್ತಾ...**

**ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204 (Karnataka)